ಕೃಷಿಯ ಮೇಲೆ ಕೈಗಾರಿಕೀಕರಣದ ಪ್ರಭಾವ

ಮಂಗಳೂರು ತಾಲೂಕಿನಲ್ಲಿ ಪ್ರಕರಣದ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಎಂ.ಫಿಲ್
ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧನಾ ವಿದ್ಯಾರ್ಥಿ

ಪ್ರೀತಮ್ ಶೆಟ್ಟಿ ಕೆ.

ನೋಂದಣಿ ಸಂಖ್ಯೆ-KTSMDS-00626

ಮಾರ್ಗದರ್ಶಕರು

ಡಾ.ಸುರೇಶರಮಣ ಮಯ್ಯ

ವಾಣಿಜ್ಯ ವಿಭಾಗ

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು,

ಉಡುಪಿ

೨೦೧೩

ಕರ್ನಾ[illegible]ಲಾಜಿಕಲ್ ಸಂಶೋಧನಾ ಕೇಂದ್ರ ಬಲ್ಮಠ, ಮಂಗಳೂರು-೦೧

1093

ಕೃಷಿಯ ಮೇಲೆ ಕೈಗಾರಿಕೀಕರಣದ ಪ್ರಭಾವ

ಮಂಗಳೂರು ತಾಲೂಕಿನಲ್ಲಿ ಪ್ರಕರಣದ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಎಂ.ಫಿಲ್
ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧನಾ ವಿದ್ಯಾರ್ಥಿ

ಪ್ರೀತಮ್ ಶೆಟ್ಟಿ ಕೆ.

ನೋಂದಣಿ ಸಂಖ್ಯೆ–KTSMDS-00626

ಮಾರ್ಗದರ್ಶಕರು

ಡಾ.ಸುರೇಶರಮಣ ಮಯ್ಯ

ವಾಣಿಜ್ಯ ವಿಭಾಗ

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು,

ಉಡುಪಿ

೨೦೧೩

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ ಬಲ್ಮಠ, ಮಂಗಳೂರು–೦೧

ಯೋಗ್ಯತಾ ಪತ್ರ

ಪ್ರೀತಮ್ ಶೆಟ್ಟಿ ಕೆ. ರವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಕೃಷಿಯ ಮೇಲೆ ಕೈಗಾರಿಕೀಕರಣದ ಪ್ರಭಾವ ಮಂಗಳೂರು ತಾಲೂಕಿನಲ್ಲಿ ಪ್ರಕರಣದ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ಸುರೇಶರಮಣ ಮಯ್ಯ

ಸಂಶೋಧನಾ ಮಾರ್ಗದರ್ಶಕರು

ದಿನಾಂಕ : 10-07-2013

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಎಂ. ಫಿಲ್. ಪದವಿಗಾಗಿ ಸಾದರ ಪಡಿಸಿದ "ಕೃಷಿಯ ಮೇಲೆ ಕೈಗಾರಿಕೀಕರಣದ ಪ್ರಭಾವ ಮಂಗಳೂರು ತಾಲೂಕಿನಲ್ಲಿ ಪ್ರಕರಣದ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೊಲೊಜಿಕಲ್ ಸಂಶೋಧನಾ ಕೇಂದ್ರದಲ್ಲಿ ಸಂಶೋಧನಾ ಮಾರ್ಗದರ್ಶಕರಾದ ಡಾ.ಸುರೇಶರಮಣ ಮಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಪ್ರೀತಮ್ ಶೆಟ್ಟಿ ಕೆ

ಸಂಶೋಧಕರು

ದಿನಾಂಕ : 10-07-2013

ಅಧ್ಯಯನದ ವಿವರಗಳು

ಪುಟ ಸಂಖ್ಯೆ

ಕೋಷ್ಟಕಗಳ ಪಟ್ಟಿ

ನಕ್ಷೆ ಮತ್ತು ರೇಖಾ ನಕ್ಷೆಗಳು

ಅಧ್ಯಾಯ -೧: ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

- ಕೃಷಿ ಮತ್ತು ಆರ್ಥಿಕ ಅಭಿವೃದ್ಧಿ
- ಭಾರತದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ
- ಭಾರತದಲ್ಲಿ ಕೈಗಾರಿಕಾಭಿವೃದ್ಧಿ.
- ಭಾರತದಲ್ಲಿ ಬೆಳೆಗಳ ಬದಲಾವಣೆ
- ಅಧ್ಯಯನಕ್ಕೆ ಮೂಲವಾಗಿರುವ ಸಮಸ್ಯೆಗಳು
- ಸಂಬಂಧಿತ ಸಂಶೋಧನೆಗಳ ವಿಶ್ಲೇಷಣೆ
- ಅಧ್ಯಯನದ ಉದ್ದೇಶಗಳು
- ಊಹೆಗಳು
- ಅಧ್ಯಯನದ ವ್ಯಾಪ್ತಿ
- ಅಧ್ಯಯನದ ವಿಧಾನಗಳು

ಅಧ್ಯಾಯ –೧: ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಪೀಠಿಕೆ :

'ಅರ್ಥಿಕ ಅಭಿವೃದ್ಧಿ' ಎಂಬ ಪದವನ್ನು ಅರ್ಥಶಾಸ್ತ್ರಜ್ಞರು, ರಾಜ್ಯಶಾಸ್ತ್ರಜ್ಞರು ಹಾಗೂ ಎಲ್ಲಾ ಇತರ ವಿಭಾಗಳಲ್ಲಿಯೂ ನಾನಾ ರೀತಿಯಲ್ಲಿ ಉಪಯೋಗಿಸುತ್ತಾರೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಕ್ಕೆ 'ಅರ್ಥಿಕ ಅಭಿವೃದ್ಧಿ' ಅತ್ಯಗತ್ಯ. ಬಡತನ, ನಿರುದ್ಯೋಗ, ಕಡಿಮೆ ಉತ್ಪಾದನೆ ಮುಂತಾದ ಅನೇಕ ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಅರ್ಥಿಕ ಅಭಿವೃದ್ಧಿ ಅಗತ್ಯವಾಗಿದೆ. ಸ್ವಾತಂತ್ರ್ಯನಂತರ ಭಾರತದ ಅರ್ಥಿಕ ಅಭಿವೃದ್ಧಿಗಾಗಿ ಹಲಾವರು ಅರ್ಥಿಕ ಯೋಜನೆಗಳನ್ನು ಜಾರಿಗೊಳಸಲಾಗಿದೆ. ಅಂತಹ ಅರ್ಥಿಕ ಯೋಜನೆಗಳಲ್ಲಿ ಯಾಂತ್ರೀಕೃತ ಕೃಷಿ ಅಭಿವೃದ್ಧಿ, ಕಿರು ಹಾಗೂ ಹಿರಿಯ ಕೈಗಾರಿಕ ಅಭಿವೃದ್ಧಿ, ಸೇವಾವಿಭಾಗದ ಅಭಿವೃದ್ಧಿ, ದೇಶಿಯ ಹಾಗೂ ಅಂತರಾಷ್ಟ್ರೀಯ ವ್ಯಾಪಾರ ಅಭಿವೃದ್ಧಿ ಇತ್ಯಾದಿಗಳು ದೇಶವು ಅರ್ಥಿಕ ಅಭಿವೃದ್ಧಿಯನ್ನು ಹೊಂದಲು ಸಹಕರಿಯಾಗಿದೆ.

ಅರ್ಥಿಕ ಅಭಿವೃದ್ಧಿಯಿಂದ ದೇಶದ ರಾಷ್ಟ್ರೀಯ ಆದಾಯವು ಕ್ರಮಬದ್ಧವಾಗಿ ಮತ್ತು ನಿರಂತರವಾಗಿ ಹೆಚ್ಚಳವಾಗಿದೆ. ಅರ್ಥಿಕ ಅಭಿವೃದ್ಧಿ ವಿಷಯವು ವಿಸ್ತಾರವಾಗಿ ಗುಣಾತ್ಮಕ ಹಾಗೂ ಪರಿಮಾಣಾತ್ಮಕ ವಿವರಣೆಯನ್ನು ಒಳಗೊಂಡಿದೆ. ಕೆಲವು ಅರ್ಥಿಕ ಅಂಶಗಳಾದ ರಾಷ್ಟ್ರೀಯ ಆದಾಯ, ತಲಾ ಆದಾಯ, ಒಟ್ಟು ಉತ್ಪಾದನೆ, ಆಮದು ಮತ್ತು ರಪ್ತು, ಉದ್ಯೋಗ ಮತ್ತು ಆದಾಯ, ಇತ್ಯಾದಿಗಳ ಗುಣಾತ್ಮಕ ಹಾಗೂ ಪರಿಮಾಣಾತ್ಮಕವಾಗಿ ತಿಳಯುವುದಕ್ಕೆ ಅರ್ಥಿಕ ಅಭಿವೃದ್ಧಿ ಎನ್ನುವರು. ಗುಣಾತ್ಮಕ ಆಧಾರದಲ್ಲಿ ಅರ್ಥಿಕ ಅಭಿವೃದ್ಧಿ ಎಂದರೆ ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವ ಎಲ್ಲಾ ವರ್ಗದ ಜನರ ಕ್ಷೇಮಾಭಿವೃದ್ಧಿಗಾಗಿ ಹೆಚ್ಚಿನ ರೀತಿಯಲ್ಲಿ ಪ್ರಯತ್ನಿಸುವುದು. ಆದುದರಿಂದ ಅರ್ಥಿಕ ಅಭಿವೃದ್ಧಿ ಎಂದರೆ 'ಬೆಳವಣಿಗೆ ಮತ್ತು ಬದಲಾವಣೆ' ಎಂದರ್ಥ. ಭಾರತದಂತಹ ಅರ್ಥಿಕ ಅಭಿವೃದ್ಧಿ ಹೊಂದುತ್ತಿರುವ ದೇಶದ ಮುಖ್ಯ ಉದ್ದೇಶ ನ್ಯಾಯಯುತವಾದ ಬದಲಾವಣೆ. ಕೃಷಿಯ ಬೆಳವಣಿಗೆ ಮತ್ತು ಗ್ರಾಮೀಣಾಭಿವೃದ್ಧಿಯಿಂದ ಭಾರತದ ಅರ್ಥಿಕ ಅಭಿವೃದ್ಧಿಯ ವೇಗ ಮತ್ತು ಗುಣಮಟ್ಟವನ್ನು ತಿಳಯಬಹುದು.

ಆದುದರಿಂದ ಈ ಎಲ್ಲಾ ಅಂಶಗಳಂದ ತಿಳಯುವುದೇನೆಂದರೆ ಅರ್ಥಿಕ ಅಭಿವೃದ್ಧಿ ಎಂಬ ಪದವು ಕೃಷಿ, ವ್ಯಾಪಾರ, ಕೈಗಾರಿಕೆ, ಸಾರಿಗೆ, ನೀರಾವರಿ, ವಿದ್ಯುತ್‌ಸಂಪನ್ಮೂಲ ಇತ್ಯಾದಿಗಳ ಅಭಿವೃದ್ಧಿಯನ್ನು ಒಳಗೊಂಡಿದೆ. ಅರ್ಥಿಕ ಅಭಿವೃದ್ಧಿಯು ಈ ಎಲ್ಲಾ ವಿಭಾಗಗಳ ಬೆಳವಣಿಗೆಯಲ್ಲಿ ಅಭಿವೃದ್ಧಿಯ ವಿಧಾನವನ್ನು ಸೂಚಿಸುತ್ತದೆ.

ಕೃಷಿ ಮತ್ತು ಅರ್ಥಿಕ ಅಭಿವೃದ್ಧಿ:

ಒಂದು ದೇಶದ ಅರ್ಥಿಕ ಅಭಿವೃದ್ಧಿಯಲ್ಲಿ ಕೃಷಿಯು ಮಹತ್ವದ ಪಾತ್ರವನ್ನು ವಹಿಸಿದೆ. ಕೃಷಿಯು ಭಾರತದ ಅರ್ಥಿಕತೆಯ ಜೀವಳವಾಗಿದೆ. ಕಳೆದ ಕೆಲವು ದಶಕಗಳಿಂದ ಕೈಗಾರಿಕೀಕರಣವಾದರೂ ಈಗಲೂ ಕೃಷಿಯು ಭಾರತದ ಅರ್ಥಿಕತೆಯ ಬೆನ್ನೆಲುಬಾಗಿದೆ.

ದೇಶದಲ್ಲಿ ವೇಗವಾಗಿ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಆಹಾರ ಪೂರೈಕೆಯಲ್ಲಿ ಕೃಷಿಯು ಮಹತ್ವವಾದ ಪಾತ್ರವನ್ನು ವಹಿಸುತ್ತದೆ. ಈಗಿನ ಒಂದು ಅಂದಾಜಿನ ಪ್ರಕಾರ ಕೃಷಿಯ ಉತ್ಪಾದನೆಯ ಸುಮಾರು ಶೇಕಡಾ ೮೦ ಅನುಭೋಗಕ್ಕೆ ಬೇಕಾಗುತ್ತದೆ. ಆದುದರಿಂದ ಕೃಷಿಯು ದೇಶದ ಎಲ್ಲಾ ಜನರ ಆಹಾರ ಬೇಡಿಕೆಯನ್ನು ಈಡೇರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೃಷಿಯು ಜನರ ಆಹಾರ ಪೂರೈಕೆಯ ಜೊತೆಗೆ ಸಾಕು ಪ್ರಾಣಿಗಳಿಗೂ (ಕುರಿ, ಆಡು, ಕುದುರೆ, ಕತ್ತೆ, ಹಸು ಇತ್ಯಾದಿ) ಹಾಗೂ ಪಶುಸಂಗೋಪನೆಗೂ ಅವಶ್ಯಕವಾಗಿದೆ.

ಕೃಷಿ ಆಧಾರಿತ ಕೈಗಾರಿಕೆಗಳಿಗೆ ವಿವಿಧ ರೀತಿಯ ಕಚ್ಚಾ ವಸ್ತುಗಳನ್ನು ನೀಡುತ್ತದೆ. ಅನೇಕ ಸಣ್ಣ ಕೈಗಾರಿಕೆಗಳು ಮತ್ತು ಗುಡಿ ಕೈಗಾರಿಕೆಗಳು ಇಂದಿಗೂ ಕೃಷಿ ಆಧಾರಿತಾವಾಗಿದೆ. ಭಾರತದ ಪ್ರಮುಖ ಕೈಗಾರಿಕೆಗಳಾದ, ಹತ್ತಿ, ಸೆಣಬು, ಸಕ್ಕರೆ, ತಂಬಾಕು ಇತ್ಯಾದಿಗಳು ಕೃಷಿ ಆಧಾರಿತಾವಾಗಿದೆ. ಹಾಗೇಯೇ ಹಲವಾರು ಕೈಗಾರಿಕೆಗಳು ಪರೋಕ್ಷವಾಗಿ ಕೃಷಿ ಆಧಾರಿತವಾಗಿದೆ. ಆದುದರಿಂದ ಭಾರತದಲ್ಲಿ ಕೈಗಾರಿಕಾಭಿವೃದ್ಧಿಗೆ ಕೃಷಿಯು ಪ್ರೇರೆಪಿಸುತ್ತದೆ. ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ ೬೫ ರಿಂದ ೭೦ ಜನರಿಗೆ ಉದ್ಯೋಗ ಮತ್ತು ಆದಾಯವನ್ನು ಕೃಷಿಯು ನೀಡುತ್ತದೆ. ದೇಶದಲ್ಲಿ ಕೃಷಿಯು ಆಹಾರ ಸಂರಕ್ಷಣೆ ಮತ್ತು ಪ್ರಾದೇಶಿಕ ಉಳಿತಾಯದ ಮೂಲವಾಗಿದೆ.

ಭಾರತದ ಅರ್ಥಿಕತೆಯಲ್ಲಿ ಕೃಷಿಯು ಒಟ್ಟು ರಾಷ್ಟ್ರೀಯ ಉತ್ಪಾದನೆಯಲ್ಲಿ ಸುಮಾರು ಶೇಕಡಾ ೨೨ ಕ್ಕಿಂತಲೂ ಜಾಸ್ತಿ ಒದಗಿಸುತ್ತದೆ. ವಿದೇಶಿ ವ್ಯಾಪಾರ ಮತ್ತು ವಿನಿಮಯದಲ್ಲಿ ಕೃಷಿಯು ಮಹತ್ವವಾದ ಪಾತ್ರವನ್ನು ವಹಿಸುತ್ತದೆ. ದೇಶದ ಒಟ್ಟು ರಫ್ತುವಿನಲ್ಲಿ ಸುಮಾರು ಶೇಕಡಾ ೧೪.೭ ಕ್ಕಿಂತಲೂ ಹೆಚ್ಚು ಕೃಷಿಯು ಒಳಗೊಂಡಿದೆ. ಕೃಷಿ ಸರಕುಗಳ ರಫ್ತುವಿನಿಂದಾಗಿ ಬರುವ ಆದಾಯದಿಂದ ಬೇಕಾದ ಸರಕುಗಳನ್ನು ವಿದೇಶಿವಿನಿಮಯದ ಮೂಲಕ ಆಮದು ಮಾಡಿಕೊಳ್ಳಲಾಗುತ್ತಿದೆ. ಪರಿಸರ ಸಂರಕ್ಷಣೆ ಮತ್ತು ಪರಿಸರ ಸಮತೋಲನ ಕಾಪಾಡುವಲ್ಲಿ ಕೃಷಿಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಪ್ರಮುಖವಾಗಿ ಕೃಷಿಯು ಗ್ರಾಮೀಣಾಭಿವೃದ್ಧಿಗೆ ಸಹಕರಿಸುತ್ತದೆ.

ಭಾರತದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ:

ಪ್ರಧಾನವಾಗಿ ಭಾರತವು ಹಳ್ಳಿಗಳಿಂದ ಕೂಡಿದ ದೇಶವಾಗಿದೆ. ಭಾರತದಲ್ಲಿ ಅಭಿವೃದ್ಧಿ ಎಂಬ ಪದವು ಹೆಚ್ಚಾಗಿ ಗ್ರಾಮೀಣಾಭಿವೃದ್ಧಿ ಎಂಬಾರ್ಥವನ್ನು ನೀಡುತ್ತದೆ. ಏಕೆಂದರೆ ದೇಶದಲ್ಲಿ ವಾಸಿಸುವ ಹೆಚ್ಚಿನ ಜನರು ಗ್ರಾಮೀಣ ಪ್ರದೇಶದಲ್ಲಿದ್ದಾರೆ ಮತ್ತು ಗ್ರಾಮೀಣ ಉದ್ಯೋಗವನ್ನು ಹೊಂದಿದ್ದಾರೆ. ಆದುದರಿಂದ ದೇಶವು ಅರ್ಥಿಕ ಅಭಿವೃದ್ಧಿಯನ್ನು ಹೊಂದಬೇಕಾದರೆ ಗ್ರಾಮೀಣಾಭಿವೃದ್ಧಿ ಆಗುವುದು ಬಹುಮುಖ್ಯ.

ಭಾರತದ ವ್ಯವಸ್ಥೆಯಲ್ಲಿ ಗ್ರಾಮೀಣಾಭಿವೃದ್ಧಿ ಸಾಧಿಸಬೇಕಾದರೆ ಕೃಷಿಯ ಅಭಿವೃದ್ಧಿಯು ಅಗತ್ಯವಾಗಿದೆ ಏಕೆಂದರೆ ಭಾರತದಲ್ಲಿ ಬಹುಪಾಲು ಜನರು ಕೃಷಿಯ ಆಧಾರಿತವಾಗಿದ್ದಾರೆ. ಕೃಷಿಯ ಅಭಿವೃದ್ಧಿಯು ಮುಖ್ಯವಾಗಿ ಆಹಾರಬೇಡಿಕೆಗಳ ಈಡೇರಿಕೆ, ಕಚ್ಚಾವಸ್ತುಗಳ ಪೂರೈಕೆಗೆ ಮತ್ತು ಉದ್ಯೋಗಗಳ ಸೃಷ್ಟಿಗೆ ಪೂರಕವಾಗಿದೆ. ಅನುಭೋಗಿಗಳು ಹೆಚ್ಚಿನ ಹಣವನ್ನು ಕೃಷಿ ಸರಕುಗಳಿಗಾಗಿ ವ್ಯಯಿಸುತ್ತಿದ್ದಾರೆ. ಗ್ರಾಮೀಣ ಅರ್ಥಿಕತೆಯ ಪ್ರಗತಿಯು ಕೃಷಿ ಚಟುವಟಿಕೆಗಳನ್ನು ಅವಲಂಬಿಸಿದೆ. ಕಳೆದ ಸುಮಾರು ವರ್ಷಗಳಿಂದ ಗ್ರಾಮೀಣ ಜನರ ಜೀವನಮಟ್ಟವು ಸುಧಾರಣೆ ಆಗಲಿಲ್ಲ. ವಿದ್ಯಾವಂತ ಗ್ರಾಮೀಣ ಯುವಜನರು ಉದ್ಯೋಗಕ್ಕಾಗಿ ಪಟ್ಟಣ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಜನರು ಖಾಯಂ ಮತ್ತು ಲಾಭಾ ಸಹಿತ ಉದ್ಯೋಗ ಇಲ್ಲದೇ ಇರುವುದರಿಂದ ಪಟ್ಟಣಕ್ಕೆ ವಲಸೆ ಹೋಗುತ್ತಾರೆ.

<u>ಭಾರತದಲ್ಲಿ ಕೈಗಾರಿಕಾಭಿವೃದ್ಧಿ</u>

ಇಂಗ್ಲೆಂಡಿನಲ್ಲಿ ೧೭೬೦ ರಿಂದ ೧೮೩೦ ರವರೆಗೆ ಸಂಭವಿಸಿದ ಕೈಗಾರಿಕಾ ಕ್ರಾಂತಿಯಿಂದಾಗಿ ಆ ರಾಷ್ಟ್ರ ಜಗತ್ತಿನ ಅತ್ಯಂತ ಬಲಾಢ್ಯ ಅರ್ಥವ್ಯವಸ್ಥೆಯಾಗಿ ರೂಪುಗೊಂಡಿತು. ಇದು ಅರ್ಥಿಕಾಭಿವೃದ್ಧಿಗೆ ಕೈಗಾರಿಕೀಕರಣ ಅಗತ್ಯವೆನ್ನುವುದನ್ನು ವಿಶ್ವಕ್ಕೆ ಸಾಬೀತುಪಡಿಸಿತು. ಭಾರತದ ಯೋಜನಾ ಬ್ರಹ್ಮ ಸರ್.ಎಂ. ವಿಶ್ವೇಶ್ವರಯ್ಯನವರು " ಕೈಗಾರಿಕೀಕರಣ, ಇಲ್ಲವೇ ವಿನಾಶ" ಎಂದು ಸ್ಪಷ್ಟವಾಗಿ ಭಾರತವನ್ನು ಎಚ್ಚರಿಸಿದರು. ಕೈಗಾರಿಕೀಕರಣವು ಮುಖ್ಯವಾಗಿ ನಗರೀಕರಣಕ್ಕೆ ಎಡೆ ಮಾಡಿಕೊಟ್ಟಿದೆ. ನಗರಾಭಿವೃದ್ಧಿಯು ಮುಖ್ಯವಾಗಿ ಅರ್ಥಿಕ ಮತ್ತು ಸಮಾಜಿಕ ಅಭಿವೃದ್ಧಿಯನ್ನು ಒಳಗೊಂಡಿದೆ. ಆಧುನೀಕರಣ ಮತ್ತು ಅರ್ಥಿಕ ಬೆಳವಣಿಗೆಯಿಂದಾಗಿ ಕೈಗಾರಿಕೀಕರಣ ಉಂಟಾಗಿದೆ.

ಇತ್ತೀಚಿನ ಕೆಲವು ದಶಕಗಳಿಂದ ಭಾರತದ ನಗರಗಳಲ್ಲಿ ತೀವ್ರವಾದ ಜನಸಂಖ್ಯೆ ಹೆಚ್ಚಳವು ಒಟ್ಟು ಬೆಳವಣಿಗೆಯಲ್ಲಿ ಅಸಮತೋಲನವನ್ನು ಉಂಟುಮಾಡಿದೆ. ನಗರೀಕರಣ ಕೆಲವು ಗ್ರಾಮೀಣ ಸಮಸ್ಯೆಗಳನ್ನು ನಿವಾರಿಸುತ್ತದೆ. ಆದರೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಂಬಂಧವು ತೃಪ್ತಿಕರವಾಗಿಲ್ಲ. ರಾಷ್ಟ್ರೀಯ ಯೋಜನೆಯ ಎಲ್ಲಾ ಉದ್ದೇಶಗಳನ್ನು ಈಡೇರಿಸಲು ಸಣ್ಣ ಪ್ರಮಾಣದ ಕೈಗಾರಿಕೀಕರಣ ಅಗತ್ಯವಾಗಿದೆ. ಇತ್ತೀಚಿನ ವಿಶ್ಲೇಷಣೆಯ ಪ್ರಕಾರ ಭಾರತದಲ್ಲಿ ಕೈಗಾರಿಕೀಕರಣವು ತೀವ್ರಮಟ್ಟದಲ್ಲಿ ಬೆಳೆಯುತ್ತಿದೆ.

ತೀವ್ರವಾದ ಕೈಗಾರಿಕೀಕರಣದಿಂದ ಉಂಟಾದ ನಗರೀಕರಣವು ಒಟ್ಟು ಬೆಳವಣಿಗೆಯಲ್ಲಿ ಅಸಮಾನತೆಯನ್ನು ಉಂಟು ಮಾಡುವುದರಿಂದ ನಗರ ಮತ್ತು ಗ್ರಾಮೀಣಾ ಪ್ರದೇಶಗಳಲ್ಲಿ ಅನೇಕ ಸಮಸ್ಯೆಗಳು ಉಂಟಾಗಿದೆ.

ಭಾರತದಲ್ಲಿ ಹತೋಟಿಯಿಲ್ಲದ ಕೈಗಾರಿಕೀಕರಣದಿಂದಾಗಿ ಗ್ರಾಮೀಣ ಜನರು ಪಟ್ಟಣಕ್ಕೆ ವಲಸೆಹೋಗುವ ಸಮಸ್ಯೆ, ಅಂತರ್ಜಲದ ಸಮಸ್ಯೆ, ಅತೀಯಾದ ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ದೂಳಿನ ಸಮಸ್ಯೆ, ತ್ಯಾಜ ವಸ್ತುಗಳ ಸಂಸ್ಕರಣ ಸಮಸ್ಯೆಗಳು ಉಂಟಾಗಿದೆ. ಕೈಗಾರಿಕರಣ ಮತ್ತು ನಗರೀಕರಣದ ಪರಿಣಾಮವು ಗ್ರಾಮೀಣ ಭಾರತದ ಕೃಷಿಯ ಮೇಲೆ ಬೀರಿದೆ. ಕೈಗಾರಿಕಾಭಿವೃದ್ಧಿಯಿಂದಾಗಿ ಗ್ರಾಮೀಣ ಪ್ರದೇಶದ ಜನರು ನಗರ ಪ್ರದೇಶಕ್ಕೆ ವಲಸೆ ಹೋಗುವ ಸಮಸ್ಯೆ ಉಂಟಾಗಿದೆ

ಭಾರತದಲ್ಲಿ ಬೆಳೆಗಳ ಬದಲಾವಣೆ

ಭಾರತವು ಹಳ್ಳಿಗಳಿಂದ ಕೂಡಿದ ದೇಶವಾಗಿದೆ ಸುಮಾರು ಶೇಕಡಾ ೭೦ ಕ್ಕಿಂತಲೂ ಹೆಚ್ಚಿನ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವುದರಿಂದ ಅವರ ಮುಖ್ಯ ಉದ್ಯೋಗ ಕೃಷಿಯಾಗಿದೆ. ಸಣ್ಣ ಹಿಡುವಳಿಯ ಜಮೀನು ಭಾರತದ ಕೃಷಿ ಪದ್ಧತಿಯ ಮುಖ್ಯ ಲಕ್ಷಣವಾಗಿದೆ. ಸರಾಸರಿ ಜಮೀನಿನ ಅಳತೆ ಸುಮಾರು ೧.೫೭ ಹೆಕ್ಟೇರ್. ಇದರಲ್ಲಿ ರೈತರು ಕೇವಲ ಶೇಕಡಾ ೫೫ ಬೇಸಾಯ ಮಾಡುತ್ತಾರೆ. ಭಾರತದಲ್ಲಿ ಹವಮಾನ ಬದಲಾವಣೆಯಿಂದಾಗಿ ಅನೇಕ ರೀತಿಯ ಬೆಳೆಯನ್ನು ಬೆಳೆಯುತ್ತಾರೆ. ಈ ಕೃಷಿ ಬೆಳೆಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೇ ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತದ ಕೃಷಿಗೆ ಅಮೂಲ್ಯವಾದ ಸ್ಥಾನವಿದೆ. ಆಹಾರ ಬೆಳೆಗಳಲ್ಲಿ ಭತ್ತವು ಅತೀ ಪ್ರಾಮುಖ್ಯತೆಯನ್ನು ಹೊಂದಿದೆ. ಜಿಲ್ಲೆಯ ರೈತರು ಭತ್ತದ ಜೊತೆಗೆ ಬಾಳೆ, ಕಬ್ಬು ಮುಂತಾದ ಬೆಳೆ ಬೆಳೆಯುತ್ತಾರೆ ಸ್ವಾತಂತ್ರ್ಯನಂತರ ಜಿಲ್ಲೆಯ ರೈತರ ಪ್ರಾಚೀನ ಬೆಳೆಗಳಾದ ಭತ್ತ, ಅಡಿಕೆ, ಬಾಳೆ ಇತ್ಯಾದಿ ಬೆಳೆಗಳನ್ನು ಬೆಳೆಯುವುದರಿಂದ ಸಂತೋಷ ಮತ್ತು ತೃಪ್ತಿಯಾಗಿದ್ದಾರೆ.

ಆದರೆ ಕಳೆದ ಎರಡು ದಶಕಗಳಿಂದ ಕೃಷಿಯ ಚಿತ್ರಣವೇ ಬದಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೯೫ ರ ಸುಮಾರಿಗೆ ಶೇಕಡಾ ೪೯ ಭತ್ತದ ಕೃಷಿಯು, ೨೦೦೪ ರಲ್ಲಿ ಶೇಕಡಾ ೩೬.೫ ಕ್ಕೆ ಇಳಿದಿದೆ. ಹಿಂದಿನ ಕಾಲದಲ್ಲಿ ವರ್ಷಕ್ಕೆ ಮೂರು ಸಲ ಬೆಳೆ ಬೆಳೆಯುತ್ತಿದ್ದ ರೈತರು ಈಗ ಒಂದೇ ಬೆಳೆ ಬೆಳೆಯುತ್ತಿದ್ದಾರೆ. ಗ್ರಾಮೀಣ ಯುವಕರು ವ್ಯವಸಾಯದಲ್ಲಿ ಆಸಕ್ತಿ ಹೊಂದದೇ, ಉದ್ಯೋಗಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ವ್ಯವಸಾಯದಲ್ಲಿರುವ ರೈತರು ಅರ್ಥಿಕ ಅವಶ್ಯಕತೆಗಾಗಿ ವಾಣಿಜ್ಯ ಬೆಳೆಗಳಾದ ರಬ್ಬರ್, ವೆನಿಲಾ, ಅಡಿಕೆ ಇತ್ಯಾದಿ ಬೆಳೆ ಬೆಳೆಯುತ್ತಿದ್ದಾರೆ.

ಇದರಿಂದಾಗಿ ಸಾವಿರಾರು ಹೆಕ್ಟೇರ್ ಭತ್ತದ ಕೃಷಿಯ ಜಮೀನು ತುಂಬಾ ಕಡಿಮೆಯಾಗಿದೆ. ಕೈಗಾರಿಕೀಕರಣದ ತೀವ್ರತೆಯಿಂದಾಗಿ ಸಾಂಪ್ರಾದಾಯಿಕ ಕೃಷಿ ಜಮೀನು ಕಡಿಮೆಯಾಗಿದೆ. ಇದು ಭತ್ತದ ಕೃಷಿಗೆ ಉಳಗಾಲ ಇಲ್ಲದಂತೆ ಮಾಡಿದೆ.

ಅಧ್ಯಯನಕ್ಕೆ ಮೂಲವಾಗಿರುವ ಸಮಸ್ಯೆಗಳು:

ಕೈಗಾರಿಕೀಕರಣವು ಅರ್ಥಿಕ ಅಭಿವೃದ್ಧಿಗೆ ಅತೀ ಅವಶ್ಯಕವಾಗಿದೆ ತೀವ್ರವಾದ ಕೈಗಾರಿಕೀಕರಣದಿಂದಾಗಿ ನಗರಾಭಿವೃದ್ಧಿಯು ಉಂಟಾಗಿದೆ. ಭಾರತದಲ್ಲಿ ಕರ್ನಾಟಕ ರಾಜ್ಯವು ಅತೀ ವೇಗವಾಗಿ ಕೈಗಾರಿಕೀಕರಣಗೊಳ್ಳುತ್ತಿದೆ. ತೀವ್ರವಾದ ಕೈಗಾರಿಕೀಕರಣವು ರಾಜ್ಯದಲ್ಲಿ ವೇಗವಾಗಿ ನಗರ ಪ್ರದೇಶಗಳನ್ನು ಬೆಳೆಸುತ್ತಿದೆ. ನಗರಾಭಿವೃದ್ಧಿಯು ಕೃಷಿಯ ಮೇಲೆ ಅತೀಯಾದ ಪರಿಣಾಮವನ್ನು ಬೀರಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಅತೀ ವೇಗವಾಗಿ ಕೈಗಾರಿಕೀಕರಣ ಹೊಂದುತ್ತಿದೆ. ಕೈಗಾರಿಕೀಕರಣ ಪರಿಣಾಮದಿಂದಾಗಿ ಆಹಾರ ಬೆಳೆಗಳು ವಾಣಿಜ್ಯ ಬೆಳೆಗಳಾಗಿ ಪರಿವರ್ತನೆಗೊಳ್ಳುತ್ತಿದೆ. ಕೃಷಿ ಕಾರ್ಮಿಕರು ನಗರ ವಲಸೆಯ ಸಮಸ್ಯೆ, ಗ್ರಾಮೀಣ ಜಮೀನು ನಗರ ಪ್ರದೇಶ ಮತ್ತು ಕೈಗಾರಿಕ ಜಮೀನಾಗಿ ಬದಲಾವಣೆ, ಕಡಿಮೆಯಾಗುತ್ತಿರುವ ವ್ಯವಸಾಯ ಜಮೀನಿನ ಲಭ್ಯತೆ ಮುಂತಾದ ಕಾರಣಗಳಂದ ಕೃಷಿ ಬೆಳೆಗಳ ಬದಲಾವಣೆ ಉಂಟಾಗಿದೆ. ಈ ಎಲ್ಲಾ ಕಾರಣಗಳಂದ ಜಿಲ್ಲೆಯಲ್ಲಿ ಭತ್ತದ ಕೃಷಿಯು ಕಡಿಮೆಯಾಗಿದೆ.

ಕರ್ನಾಟಕದ ಒಟ್ಟು ಭತ್ತದ ಉತ್ಪಾದನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಅತೀ ಹೆಚ್ಚಿನ ಪಾಲನ್ನು ಹೊಂದಿದೆ. ಇಂದು ಭತ್ತದ ಬೇಸಾಯ ಮಾಡುವ ಜಮೀನು ಕಡಿಮೆಯಾದ್ದರಿಂದ ಒಟ್ಟು ಭತ್ತದ ಉತ್ಪಾದನೆಗೆ ವ್ಯತಿರಿಕ್ತ ಪರಿಣಾಮ ಬೀರಿದೆ. ಹೆಚ್ಚಿನ ಭತ್ತದ ಬೇಸಾಯದ ಜಮೀನು ವಾಣಿಜ್ಯ ಬೆಳೆ ಬೆಳೆಯುವ ಜಮೀನಾಗಿ ಪರಿವರ್ತನೆಯಾಗಿದೆ. ಕೈಗಾರಿಕೀಕರಣ ಕೃಷಿಯ ಮೇಲೆ ಪರಿಣಾಮ ಬೀರಿದೆ ಮತ್ತು ಬೆಳೆ ವಿಧಾನವು ಬದಲಾವಣೆ ಆಗಿದೆ ಎಂಬುದು ಈ ಅಧ್ಯಯನದ ಮುಖ್ಯವಾದ ಅಂಶವಾಗಿದೆ.

ಸಂಬಂಧಿತ ಸಂಶೋಧನೆಗಳ ವಿಶ್ಲೇಷಣೆ:

ಆರ್ ಜಿ ದೇಸಾಯಿ (೧೯೯೮) ಅವರು " ಚೇಜಿಂಗ್ ಕ್ರಾಪಿಂಗ್ ಪ್ಯಾಟರ್ನ್ಸ್ ಇನ್ ಇಂಡಿಯಾ" ಎಂಬ ಅಧ್ಯಯನದಲ್ಲಿ ಭಾರತದ ಬೆಳೆ ವಿಧಗಳು ಮತ್ತು ಬೇರೆ ಬೇರೆ ಬೆಳೆಗಳಗೆ ಬಳಸಲಾಗುವ ಜಮೀನಿನ ಬಗ್ಗೆ ತಿಳಿಸಿದ್ದಾರೆ. ಅವರ ಅಧ್ಯಾಯನದ ಪ್ರಕಾರ ಹೆಚ್ಚಿನ ಆಹಾರ ಬೆಳೆಗಳು ವಾಣಿಜ್ಯ ಬೆಳೆಗಳಾಗಿ ಪರಿವರ್ತಿತವಾಗಿದೆ. ಇದು ಭಾರತದ ಬೆಳೆ ವಿಧಗಳಲ್ಲಿ ಅಸಮತೋಲನ ಉಂಟು ಮಾಡಿದೆ. ಈ ಅಧ್ಯಯನದ ಪ್ರಕಾರ ಒಂದು ಪ್ರದೇಶದ ಪ್ರಾಕೃತಿಕ ಲಕ್ಷಣಗಳಾದ ಮಣ್ಣು, ಹವಾಗುಣ, ಮಳೆ ಇತ್ಯಾದಿ ಅಂಶಗಳು ಬೆಳೆ ವಿಧಗಳನ್ನು ನಿರ್ಧರಿಸುತ್ತದೆ. ಸಾಮಾಜಿಕ ಲಕ್ಷಣಗಳಾದ ಜನಸಂಖ್ಯೆ, ಸಂಪ್ರದಾಯ, ರೂಡಿ ಪದ್ಧತಿ, ರೀತಿ ರೀವಾಜುಗಳು ಆ

ಪ್ರದೇಶದ ಬೆಳೆ ವಿಧಗಳನ್ನು ನಿರ್ಧರಿಸುತ್ತದೆ. ಅರ್ಥಿಕ ಅಂಶಗಳಾದ ಬೆಲೆ, ಅಧಿಕ ಆದಾಯ, ಜಮೀನಿನ ಗಾತ್ರ, ಅಪಾಯಗಳ ವಿರುದ್ಧ ರಕ್ಷಣೆ ಇತ್ಯಾದಿಗಳು ಬೆಳೆಯ ವಿಧಗಳನ್ನು ನಿರ್ಧರಿಸುತ್ತದೆ.

ಈ ಅಧ್ಯಯನದ ಸಾರಾಂಶದ ಪ್ರಕಾರ ಅರ್ಥಿಕ ವಿಚಾರಧಾರೆಯು ಬೆಳೆ ವಿಧಗಳ ಮೇಲೆ ಪರಿಣಾಮವನ್ನು ಬೀರುತ್ತದೆ. ವ್ಯವಸಾಯ ಪದ್ಧತಿ ಮತ್ತು ಹಸಿರು ಕ್ರಾಂತಿ, ಆಧುನಿಕ ಕೃಷಿ ಪದ್ಧತಿಯು ತೀವ್ರವಾದ ವ್ಯವಸಾಯಕ್ಕೆ ದಾರಿ ಮಾಡಿಕೊಟ್ಟಿದೆ. ಇದು ರೈತರಿಗೆ ಉತ್ಪಾದನೆ ಹೆಚ್ಚಳಕ್ಕೆ ಸಹಕರಿಯಾಗಿದೆ. ರಸಗೊಬ್ಬರಗಳ ಲಭ್ಯತೆ, ಉತ್ಪಾದನ ತಂತ್ರಜ್ಞಾನದ ಬೆಳವಣಿಗೆ, ನೀರಾವರಿ ಮತ್ತು ಉತ್ತಮ ಬೆಲೆ ನೀತಿಗಳು ತೀವ್ರ ವ್ಯವಸಾಯ ಮಾಡಲು ಸಹಾಯಕವಾಗಿದೆ.

ಈ ಮೇಲಿನ ಅಧ್ಯಯನ ಮತ್ತು ಸದ್ರಿ ಅಧ್ಯಯನವು ಹತ್ತಿರದ ಸಂಬಂಧವನ್ನು ಹೊಂದಿದೆ. ಎರಡು ಅಧ್ಯಯನವು ಬೆಳೆಗಳ ವಿಧಗಳ ಬಗ್ಗೆ ಚರ್ಚಿಸಿದೆ. ಆದರೆ ಸದ್ರಿ ಅಧ್ಯಯನವು ಕೇವಲ ಮಂಗಳೂರು ತಾಲೂಕಿನಲ್ಲಿ ಕೈಗಾರಿಕೀಕರಣ ಬೆಳೆ ವಿಧಗಳ ಮೇಲೆ ಪರಿಣಾಮ ಬೀರಿದೆಂದು ಚರ್ಚಿಸಲಾಗಿದೆ.

ಆರ್ ಬಾಲಸುಬ್ರಹ್ಮಣ್ಯಮ್ ಮತ್ತು ಸ್ವೆಂಗ್-ಚೂರ್ಲ್-ಚೂಯಿ(೨೦೧೦) ಅವರು ತಮ್ಮ " ಅರ್ಬನೈಸೇಶನ್, ಪಾಪ್ಯೂಲೇಶನ್ ಪ್ರೇಶರ್ ಆ್ಯಂಡ್ ಎಗ್ರಿಕಲ್ಚರಲ್ ಇಂಟರ್‌ಸಿಫಿಕೇಶನ್, ಎವಿಡೆನ್ಸ್ ಫ್ರಂಮ್ ತಮಿಳುನಾಡು ಇನ್ ಇಂಡಿಯಾ" ಎಂಬ ಅಧ್ಯಯನದಲ್ಲಿ ತಮಿಳು ನಾಡಿನಲ್ಲಿ ನಗರೀಕರಣದಿಂದ ಕೃಷಿ ಜಮೀನು ಉಪಯೋಗದ ವಿಧಗಳ ಮೇಲೆ ಬೀರಿದ ಪರಿಣಾಮದ ಬಗ್ಗೆ ಚರ್ಚಿಸಲಾಗಿದೆ. ಈ ಅಧ್ಯಯನದಲ್ಲಿ ನಗರೀಕರಣದಿಂದ ಉಂಟಾದ ಕೆಲವು ಅಂಶಗಳು ಕೃಷಿಯ ಮೇಲಾಗುವ ಪರಿಣಾಮವನ್ನು ಪರೀಕ್ಷಿಸಿದೆ. ಜೊತೆಗೆ ನಗರೀಕರಣವು ಜಿಲ್ಲೆಯಲ್ಲಿನ ಬೇಸಾಯ ಕೂಲಿ ವ್ಯತ್ಯಾಸದ ಮೇಲೆ ಬೀರಿದ ಪರಿಣಾಮವನ್ನು ವಿಶ್ಲೇಷಿಸುವುದು.

ಈ ಅಧ್ಯಯನವು ನಗರೀಕರಣವು ಕೃಷಿಯ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರಿದೆ ಎಂಬ ಸಾರಾಂಶವನ್ನು ನೀಡಿದೆ. ಇದರ ಪರಿಣಾಮವಾಗಿ ರಾಜ್ಯದ ಅರ್ಥಿಕತೆಯಲ್ಲಿ ಕೃಷಿಯ ಪಾತ್ರವು ಕಡಿಮೆಯಾಗಿದೆ. ಈ ಅಧ್ಯಯನವು ನಗರೀಕರಣ ತೀವ್ರತೆಯನ್ನು ಕಡಿಮೆ ಮಾಡಲು ಗ್ರಾಮೀಣ ಕೈಗಾರಿಕೀಕರಣದ ಸಲಹೆಯನ್ನು ನೀಡಿದೆ.

ಈ ಮೇಲಿನ ಅಧ್ಯಯನವು ಸದ್ರಿ ಅಧ್ಯಯನದೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದೆ. ನಗರೀಕರಣವು ಕೃಷಿಯ ಮೇಲೆ ನಕರಾತ್ಮಕ ಪರಿಣಾಮ ಬೀರಿದೆ ಎಂದು ಎರಡು ಅಧ್ಯಯನಗಳು ತಿಳಿಸಿದೆ ಮೇಲಿನ ಅಧ್ಯಯನವು ತಮಿಳುನಾಡಿನ ಕೃಷಿ ಸಮಸ್ಯೆಗಳನ್ನು ಮಾತ್ರ ಚರ್ಚಿಸಿದೆ. ಸದ್ರಿ ಅಧ್ಯಯನವು ಮಂಗಳೂರು ತಾಲೂಕಿನಲ್ಲಿ ಕೈಗಾರಿಕೀಕರಣದಿಂದಾಗಿ ಉಂಟಾದ ನಗರೀಕರಣವು ಕೃಷಿಯ ಮೇಲೆ ಆದ ಪರಿಣಾಮವನ್ನು ಚರ್ಚಿಸಿದೆ.

ಎಲ್ಲಾ ಸಂಪತ್ತಿನ ಮೂಲವೆಂಬುದು ವ್ಯಸಸಾಯ ಪಂಥದ ಮೂಲಭೂತ ತತ್ವವಾಗಿದೆ. ಪ್ರಾಂಕಾಯ್ಸ್ ಕ್ವೆಸ್ನೇ ಎಂಬ ಕೃಷಿ ಪಂಥದ ಚಿಂತಕನು ಕೃಷಿಯನ್ನು ಅತ್ಯಂತ ಮಹತ್ವದ ಕಸುಬು, ಆದುದರಿಂದ ಕೃಷಿಯನ್ನು ಪರಿಪೂರ್ಣವಾದ ಹಂತಕ್ಕೆ ತರಬೇಕೆಂದು ವಾದಿಸಿದ್ದಾನೆ. ಕೃಷಿಕನು ಬಡವನಾದರೆ ರಾಜನೂ, ರಾಜಧಾನಿಯೂ ಬಡತನ ಎದುರಿಸಬೇಕಾಗುತ್ತದೆ ಎಂಬ ಅಂಶವನ್ನು ಅವನು ತಿಳಿಸಿದ್ದಾನೆ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ದಿಶೆಯಲ್ಲಿ ಕೃಷಿಯನ್ನು ಬಲಪಡಿಸಬೇಕು ಎಂಬುದು ಕ್ವೆಸ್ನೇಯ ವಾದವಾಗಿತ್ತು.

ಡಾ|| ಬಿ.ಕೆ. ಮೂರ್ತಿ ತಮ್ಮ "ಕುರುಕ್ಷೇತ್ರ" ಜುಲೈ ೨೦೧೦ ರಲ್ಲಿ ಪ್ರಕಟಿಸಿದ ಒಂದು ಲೇಖನದಲ್ಲಿ ಭಾರತದ ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಬೆಳೆಗಳ ಉತ್ಪಾದನೆ ಸ್ಥಗಿತಗೊಂಡದನ್ನು ಪ್ರಸ್ತಾಪಿಸುತ್ತಾ ೧೯೯೬-೯೭ ರಿಂದ ೨೦೦೪-೦೫ ರ ನಂತರದಲ್ಲಿ ದೇಶ ತೀವ್ರ ಆಹಾರ ಪೂರೈಕೆಯ ಸಮಸ್ಯೆಯನ್ನು ಎದುರಿಸುತ್ತಿದ್ದು ಇದನ್ನು ಸಕಾಲದಲ್ಲಿ ಸರಿಪಡಿಸಿಕೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಅನಾಹುತವಾಗಬಹುದು ಎನ್ನುವ ಎಚ್ಚರಿಕೆ ನೀಡಿದ್ದಾರೆ.

ಎಮ್. ಜೆ ಪ್ರಭು, **Agricultural correspondent, The Hindu,** ತಮ್ಮ ಒಂದು ಲೇಖನ **"Importing food grains will not solve the problems"** ದಲ್ಲಿ ಸರ್ಕಾರ ಎಷ್ಟು ಮಾತ್ರಕ್ಕೂ ಕೃಷಿಯನ್ನು ಕಡೆಗಣಿಸುವಂತಿಲ್ಲ ಮತ್ತು ಕಡೆಗಣಿಸಿದ್ದೇ ಆದರೆ ಅದು ಇಡೀ ದೇಶದ ಅರ್ಥಿಕತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂಬದಾಗಿ ತಿಳಿಸಿದ್ದಾರೆ, ಹಾಗೆಯೇ ಕೃಷಿ ಉತ್ಪಾದನೆ ಕಡಿಮೆ ಆದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಆಹಾರ ಬೇಡಿಕೆಯನ್ನು ಆಮದು ಸರಿಪಡಿಸಲಾಗದು ಎನ್ನುವುದು ಅವರ ವಾದವಾಗಿದೆ.

ಅಧ್ಯಯನದ ಉದ್ದೇಶಗಳು:

೧. ಕೈಗಾರಿಕೀಕರಣದಿಂದ ಕೃಷಿಯ ಮೇಲೆ ಆಗುವ ಪರಿಣಾಮವನ್ನು ತಿಳಯುವುದು.

೨. ಕೈಗಾರಿಕೀಕರಣದ ಪರಿಣಾಮವಾಗಿ ಬೆಳೆಯ ಬದಲಾವಣೆ ಬಗ್ಗೆ ತಿಳಯುವುದು. (ಆಹಾರ ಬೆಳೆಗಳು ವಾಣಿಜ್ಯ ಬೆಳೆಗಳಾಗಿ ಪರಿವರ್ತನೆ.)

೩. ಕೈಗಾರಿಕೀಕರಣವು ಆಹಾರ ಉತ್ಪನ್ನಗಳ ಉತ್ಪಾದನೆಯ ಮೇಲೆ ಪರಿಣಾಮ ಬೀರಿದೆ ಎಂದು ಪರೀಕ್ಷಿಸುವುದು.

೪. ಕೈಗಾರಿಕೀಕರಣದಿಂದಾಗಿ ಕೃಷಿ ಭೂಮಿ ಕಡಿಮೆಯಾಗಿದೆ ಎಂದು ಪರೀಕ್ಷಿಸುವುದು

೫. ಕೈಗಾರಿಕೀಕ ತಾಜ್ಯಗಳಿಂದ ಕೃಷಿಗೆ ಹಾನಿಯಾಗಿದೆ ಎಂದು ಪರೀಕ್ಷಿಸುವುದು.

ಊಹೆಗಳು

೧. ಆಹಾರ ಬೆಳೆಗಳ ಉತ್ಪಾದನೆಗೆ ಕೈಗಾರಿಕೀಕರಣವು ಪರಿಣಾಮ ಬೀರಿದೆ.

೨. ಗ್ರಾಮೀಣ ಪರಿಣತ ಕೆಲಸಗಾರರು ನಗರಗಳಿಗೆ ವಲಸೆಹೋಗುತ್ತಾರೆ.

ಅಧ್ಯಯನದ ವ್ಯಾಪ್ತಿ

ಅಧ್ಯಯನದ ಸಮಸ್ಯೆಗಳ ವಿಶ್ಲೇಷಣೆ ಹಾಗೂ ಪರೀಕ್ಷೆಗೆ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಳ್ಳಲಾಗುವುದು. ಜಿಲ್ಲೆಯಲ್ಲಿ ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಪುತ್ತೂರು ಮತ್ತು ಸುಳ್ಯ ಎಂಬ ೫ ತಾಲೂಕುಗಳಿವೆ. ವಿವರವಾದ ವಿಶ್ಲೇಷಣೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕನ್ನು ಆರಿಸಲಾಗಿದೆ.

ಅಧ್ಯಯನದ ವಿಧಾನಗಳು:

೧ ಅಧ್ಯಯನವು ಪ್ರಾಥಮಿಕ ಹಾಗೂ ಅನುಷಂಗಿಕ ಮೂಲಗಳರೆಡನ್ನು ಒಳಗೊಂಡಿದೆ.

೨. ಅಧ್ಯಯನಕ್ಕೆ ಸೈದ್ಧಾಂತಿಕ ನೆಲೆಯನ್ನು ಒದಗಿಸಲು ವಿವಿಧ ಗ್ರಂಥಗಳು, ಸಂಶೋಧನ ಲೇಖನಗಳು ಹಾಗೂ ಸರಕಾರಿ ಮೂಲದ ದಾಖಲೆಗಳ ಪರಾಮರ್ಶೆ.

೩. ಅಧ್ಯಯನ ಸ್ಥಳದಲ್ಲಿ ಬರುವ ರೈತರಿಂದ ನೇರ ಸಂದರ್ಶನ ಹಾಗೂ ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಣೆ.

ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ಸೂಕ್ತ ಕೋಷ್ಟಕಗಳನ್ನಾಗಿ ವಿಂಗಡಿಸಿ ಸರಳ ಅಂಕಿ ಅಂಶಗಳ, ತಂತ್ರಗಳು, ಅನುಪಾತ, ಸರಾಸರಿ, ಪ್ರಮಾಣ ಮತ್ತು ಶೇಕಡಾವಾರು ಪ್ರಮಾಣದ ಮೂಲಕ ವಿಶ್ಲೇಷಿಸಿ ಅರ್ಥೈಸಲಾಗುವುದು.

ಅಧ್ಯಾಯ –೨ : ಭಾರತದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ

- ಭಾರತದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಸ್ಥಾನ
- ಕರ್ನಾಟಕದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಸ್ಥಾನ
- ಗ್ರಾಮೀಣಾಭಿವೃದ್ಧಿ (ಅರ್ಥ, ಉದ್ದೇಶ, ಮಹತ್ವ)
- ಕೃಷಿ ಭೂಮಿಯ ಗಾತ್ರ ಉತ್ಪಾದಕತೆ
- ಕೃಷಿ ಭೂಮಿಯ ಗಾತ್ರ:-
- ಗಾತ್ರದ ಅಳತೆಯ ವಿಧಾನ
- ಗಾತ್ರ ಮತ್ತು ಉತ್ಪಾದಕತೆ
- ಉತ್ಪಾದಕತೆಯ ಮಾಪನ
- ಭಾರತದ ಕೃಷಿಯ ಸಮಸ್ಯೆಗಳು
- ಭಾರತದ ಕೃಷಿ ಕಾರ್ಮಿಕರು
- ಕೃಷಿ ಕಾರ್ಮಿಕರ ಲಕ್ಷಣಗಳು
- ಕೃಷಿ ಕಾರ್ಮಿಕರ ಸದ್ಯಂದ ಪರಿಸ್ಥಿತಿ ಪ್ರಮುಖ ಸಮಸ್ಯೆಗಳ ಹಾಗೂ ಹಿಂದುಳಿಕೆಗೆ ಕಾರಣಗಳು
- ಭಾರತದ ಕೃಷಿ ಕಾರ್ಮಿಕರ ಸ್ಥಿತಿಗತಿಯ ಸುಧಾರಣೆಗೆ ಕ್ರಮಗಳು
- ಆಹಾರ ಸಮಸ್ಯೆ ಮತ್ತು ಆಹಾರ ಭದ್ರತೆ
- ಕರ್ನಾಟಕದ ಕೃಷಿ ಉತ್ಪಾದಕತೆ ಮತ್ತು ಬೆಳೆವಿಧಾನಗಳು

ಅಧ್ಯಾಯ –೨ : ಭಾರತದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ

ಭಾರತದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಸ್ಥಾನ :

ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಶೇಕಡಾ ೬೭ ಮಂದಿ ಭಾರತೀಯರು ಕೃಷಿಯಲ್ಲಿ ತೊಡಗಿದ್ದಾರೆ. ಭಾರತದ ಉಸಿರೇ ಕೃಷಿಯಾಗಿದೆ ಆದುದರಿಂದ "ಕೃಷಿಕರು (ರೈತರು) ಭಾರತದ ಬೆನ್ನೆಲುಬು" ಎಂದು ಬಣ್ಣಿಸಲ್ಪಟ್ಟಿದ್ದಾರೆ." ಭಾರತದ ಅರ್ಥವ್ಯವಸ್ಥೆಯನ್ನು ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ರಂಗಗಳೆಂದು ವಿಭಜಿಸಲಾಗಿದ್ದು ಕೃಷಿಯು ಪ್ರಾಥಮಿಕ ರಂಗದಲ್ಲಿ ಪ್ರಥಮ ಸ್ಥಾನವನ್ನು ಪಡೆಯುತ್ತದೆ. ಪ್ರಪಂಚದ ಅತ್ಯಂತ ಪುರಾತನ ಕಸುಬುಗಳಲ್ಲಿ ಒಂದಾದ ಭೂವ್ಯವಸಾಯ ಇಂದಿಗೂ ಪ್ರಪಂಚದ ಬಹುತೇಕ ಜನರ ಕಸುಬಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಹುತೇಕವಾಗಿ ಜೀವನಾಧಾರಕ್ಕಾಗಿ ಮಾತ್ರ ನಡೆಸಲ್ಪಡುತ್ತಿದ್ದ ಕೃಷಿಯು ಸ್ವಾತಂತ್ರ್ಯದ ಬಳಿಕ ಒಂದು ಉದ್ಯಮವಾಗಿದೆ. ಆರ್ಥಿಕ ಬೆಳೆಗಳು ಕೃಷಿಕರಿಗೆ ಅಪಾರ ಲಾಭವನ್ನು ಭಾರತದ ಬೊಕ್ಕಸಕ್ಕೆ ಸಾಕಷ್ಟು ಆದಾಯವನ್ನು ತರುತ್ತದೆ. ಹಸಿರು ಕ್ರಾಂತಿಯ ಬಳಿಕ ಭಾರತದ ಕೃಷಿರಂಗದಲ್ಲಿ ಅನೇಕ ಬದಲಾವಣೆಗಳಾಗಿವೆ. ನೀರಾವರಿ ಸೌಲಭ್ಯಗಳು, ಪಂಚವಾರ್ಷಿಕ ಯೋಜನೆಗಳು ಭಾರತದಲ್ಲಿ ಕೃಷಿಯನ್ನು ಒಂದು ಲಾಭದಾಯಕ ಉದ್ಯಮವನ್ನಾಗಿ ಮಾರ್ಪಡಿಸಿವೆ. ಕೃಷಿಯೇ ಆಹಾರವನ್ನು ಒದಗಿಸಬೇಕಾಗಿರುವುದರಿಂದ ಕೃಷಿ ಇಲ್ಲದಿದ್ದರೆ ಜನಜೀವನವೇ ಅಸಾಧ್ಯವಾಗುತ್ತದೆ.

ಭಾರತದ ಅರ್ಥವ್ಯವಸ್ಥೆಯ ಬೆನ್ನುಮೂಳೆ ಎಂದು ಕರೆಸಿಕೊಳ್ಳುವ ಭೂ-ವ್ಯವಸಾಯದ ಮಹತ್ವವನ್ನು ವಿವರಿಸಲು ನಿಜಕ್ಕೂ ಶಬ್ದಗಳು ಸಾಲದು. ಕೃಷಿಯ ವರಮಾನ ಕುಸಿದಾಗಲೆಲ್ಲಾ ಭಾರತದ ಅರ್ಥವ್ಯವಸ್ಥೆಯು ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಕೃಷಿ ಪ್ರಧಾನ ರಾಷ್ಟ್ರವಾದ ಭಾರತದಲ್ಲಿ ಭೂ-ವ್ಯವಸಾಯದ ಪ್ರಾಮುಖ್ಯತೆಯನ್ನು ಕೆಳಗಿನ ಅಂಶಗಳು ಮನದಟ್ಟು ಮಾಡುತ್ತದೆ.

ಭಾರತದಲ್ಲಿ ೬೭% ಮಂದಿ ಕೃಷಿಯಲ್ಲಿ ಜೀವನೋಪಾಯ ಕಂಡುಕೊಂಡಿದ್ದಾರೆ. ಭಾರತದಲ್ಲಿ ಮಾತ್ರವಲ್ಲ ಪ್ರಪಂಚದಲ್ಲಿ ಸುಮಾರು ೭೫% ಮಂದಿ ಕೃಷಿಯನ್ನೇ ಪ್ರಧಾನ ಉದ್ಯೋಗವಾಗಿಸಿಕೊಂಡಿದ್ದಾರೆ. ಭಾರತೀಯರು ಕೃಷಿಯನ್ನೇ ಪ್ರಧಾನ ಕಸುಬಾಗಿ ಅವಲಂಬಿಸಿರುವುದರಿಂದ ಅವರ ಜೀವನ ಮತ್ತು ಭವಿಷ್ಯ ಭೂ-ವ್ಯವಸಾಯವನ್ನು ಅವಲಂಬಿಸಿದೆ.

ಬದಕಲು ಅಗತ್ಯವಾದ ಆಹಾರ ಕಾಳುಕಡ್ಡಿ, ಹಣ್ಣು ಹಂಪಲುಗಳನ್ನು ಕೃಷಿಯು ಒದಗಿಸುತ್ತದೆ. ಅಕ್ಕಿ ಗೋಧಿ, ರಾಗಿ ಜೋಳ, ಸಜ್ಜೆ, ನವಣೆ ಇತ್ಯಾದಿಗಳು ಕೃಷಿಯಿಂದ ಪೂರೈಸಲ್ಪಟ್ಟು, ಭಾರತೀಯರ ಆಹಾರ ಸಮಸ್ಯೆಯನ್ನು ನಿವಾರಿಸುತ್ತದೆ.

ಭಾರತದ ಉದ್ದಿಮೆಗಳಗೆ ಕೃಷಿಯು ಆಧಾರಸ್ತಂಭವಾಗಿದ್ದು, ಹತ್ತಿ, ಸೆಣಬು, ಎಣ್ಣೆಕಾಳು, ಕಬ್ಬು ತಂಬಾಕು ಮುಂತಾದ ಕಚ್ಚಾ ಸರಕುಗಳನ್ನು ಒದಗಿಸುತ್ತದೆ. ಆದುದ್ದರಿಂದಲೇ ಭಾರತದಲ್ಲಿ ಸಕ್ಕರೆ, ಹತ್ತಿಬಟ್ಟೆ ಉದ್ಯಮ, ಸೆಣಬು ಕೈಗಾರಿಕೆ, ಎಣ್ಣೆ ಉತ್ಪಾದನೆ, ಬೀಡಿ ಸಿಗರೇಟು ಉದ್ಯಮಗಳು ಸಾಕಷ್ಟು ಬೆಳವಣಿಗೆಯಾಗಿದೆ. ಭಾರತದಲ್ಲಿ ಉದ್ದಿಮೆಗಳ ಪ್ರಗತಿಯು ಕೃಷಿಯನ್ನೇ ಅವಲಂಬಿಸಿದೆ. ಕೃಷಿಯಿಂದಾಗಿಯೇ ಬದುಕುವ ಕೈಗಾರಿಕೆಗಳಗೆ ಕೃಷಿಯಾಧರಿತ ಕೈಗಾರಿಕೆಗಳು (Agro-based Industries)ಎಂದು ಹೆಸರು.

ಭಾರತದಲ್ಲಿ ಒಕ್ಕಲುತನವು ರಾಷ್ಟ್ರಿಯ ವರಮಾನದ ಪ್ರಮುಖ ಮೂಲವಾಗಿದೆ. ಭಾರತದ ರಾಷ್ಟ್ರೀಯ ವರಮಾನದದಲ್ಲಿ ಕೃಷಿಯ ಪಾಲು ಸುಮಾರು ಶೇಕಡ ೩೩ ರಷ್ಟು ಅಮೇರಿಕಾ ಮತ್ತು ಇಂಗ್ಲೆಂಡುಗಳಲ್ಲಿ ಈ ಪ್ರಮಾಣ ತಲಾ ೨೦% ಆಗಿದ್ದರೆ, ಕೆನಾಡದಲ್ಲಿ ೫% ಮತ್ತು ಆಸ್ಟ್ರೇಲಿಯಾದಲ್ಲಿ ೬% ಇದೆ. ಈ ಅಂಕಿ ಅಂಶಗಳು ಭಾರತದಲ್ಲಿ ಕೃಷಿಯ ಪ್ರಧಾನ್ಯತೆಯನ್ನು ಕೈಗಾರಿಕೆಗಳ ಹಿಂದುಳಕೆಯನ್ನು ತೋರಿಸುತ್ತದೆ. ಭಾರತದ ಬೊಕ್ಕಸಕ್ಕೆ ಬಹುಪಾಲು ಆದಾಯವು ಭೂ–ವ್ಯವಸಾಯದಿಂದ ಬರುತ್ತದೆ. ಬಹುಮಂದಿ ಭಾರತೀಯರ ವರಮಾನಕ್ಕೆ ಕೃಷಿಯೇ ಮೂಲವಾಗಿರುವುದರಿಂದ ಉಳತಾಯಕ್ಕೂ ಭೂ ವ್ಯವಸಾಯವೇ ಮೂಲವಾಗಿದೆ. ಉಳತಾಯವೇ ಬಂಡವಾಳ ಸಂಚಯನದ ಮೂಲವಾದುದರಿಂದ ಬಂಡವಾಳ ಸಂಚಯನಕ್ಕೆ ಭೂ– ವ್ಯವಸಾಯವೇ ಕಾರಣೀಭೂತವಾಗಿದೆ. ತೃತೀಯ ರಂಗದ ಉದ್ಯಮಗಳಾದ ವ್ಯಾಪಾರ ಸಾರಿಗೆ–ಸಂಪರ್ಕ ಬ್ಯಾಂಕು, ವಿಮೆ ಇತ್ಯಾದಿಗಳಗೆ ಭೂ ವ್ಯವಸಾಯವು ಆಧಾರವಾಗಿದೆ. ಕೃಷಿ ಸಂಪನ್ಮೂಲಗಳ ಸಾಗಾಟದ ನೆಪದಿಂದಾಗಿಯೇ ಇಂದು ಭಾರತದಲ್ಲಿ ರಸ್ತೆ, ರೈಲು ಮತ್ತು ಜಲಸಾರಿಗೆಗಳು ಬಹಳ ಅಭಿವೃದ್ಧಿ ಹೊಂದಿದೆ. ಕೃಷಿ ರಂಗಕ್ಕೆ ಆದ್ಯತೆ ನೀಡುವುದ್ದಕ್ಕಾಗಿಯೇ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಗಿದೆ. ವ್ಯವಸಾಯದ ಪ್ರಗತಿಯಿಂದಾಗಿ ಸಂಪರ್ಕ ವ್ಯವಸ್ಥೆ ಬೆಳೆದಿದೆ, ವಾಣಿಜ್ಯ ಸಂಸ್ಥೆಗಳ ಅಭಿವೃದ್ಧಿಯಾಗಿದೆ.

ಕೃಷಿಯ ಅಭಿವೃದ್ಧಿಯೊಡನೆ ತೃತೀಯ ರಂಗದ ಅಭಿವೃದ್ಧಿಯು ನೇರ ಸಂಬಂಧ ಹೊಂದಿದೆ. ಕೃಷಿಯು ಪಶುಗಳ ಆಹಾರವನ್ನು ಯಥೇಚ್ಛವಾಗಿ ಪೂರೈಸುತ್ತದೆ. ಹಸು ಕರು, ಎತ್ತು, ಎಮ್ಮೆ ಕೋಣ, ಆಡು ಕುರಿ ಇತ್ಯಾದಿಗಳನ್ನು ಸಾಕುವುದು ಲಾಭದಾಯಕ ವೃತ್ತಿಯಾಗಿದೆ. ಇವುಗಳಿಗೆ ಬೇಕಾದ ಮೇವನ್ನು ಕೃಷಿಯು ಪೂರೈಕೆ ಮಾಡುತ್ತದೆ. ಬಂಡವಾಳದ ಕೊರತೆ ಭಾರತದ ಅತೀ ದೊಡ್ಡ ಸಮಸ್ಯೆಗಳಲ್ಲಿ ಒಂದಾಗಿದೆ. ಕೃಷಿಗೆ ಕಡಿಮೆ ಬಂಡವಾಳ ಸಾಕು, ಕಡಿಮೆ ಬಂಡವಾಳ ಹಾಕಿದರೂ ಉತ್ಪನ್ನವು ಸಾಪೇಕ್ಷವಾಗಿ ಅಧಿಕವಾಗಿದೆ. ಭಾರತದಲ್ಲಿ ಕೃಷಿಗೆ ಹೆಚ್ಚು ಮಹತ್ವ ದೊರೆಯಲು ಕೃಷಿಯಲ್ಲಿ ಬಂಡವಾಳ ಉತ್ಪನ್ನ ಪ್ರಮಾಣ ಕಡಿಮೆ ಇರುವುದೇ ಕಾರಣವಾಗಿದೆ.

ಕೃಷಿಯಲ್ಲಿ ಉತ್ಪಾದನೆಯ ಅವಧಿ ಕಡಿಮೆಯಾಗಿರುತ್ತದೆ, ಅಂದರೆ ಪ್ರತಿಫಲವು ಬಹಳ ಬೇಗನೆ ಬರುತ್ತದೆ. ಕಡಿಮೆ ಬಂಡವಾಳದಲ್ಲಿ ಶೀಘ್ರ ಪ್ರತಿಫಲ ಪಡೆಯಲು ಸಾಧ್ಯವಿರುವುದರಿಂದಲೇ ಕೃಷಿಯ ಮೇಲೆ ತುಂಬಾ ಒತ್ತಡವಿದೆ. ಭಾರತದ ಆಂತರಿಕ ವ್ಯಾಪಾರಕ್ಕೆ ಆಹಾರದಾನ್ಯ, ಎಣ್ಣೆಕಾಳು, ಹತ್ತಿ, ಸೆಣಬು, ಕಾಫಿ, ಚಹಾ, ಸಂಬಾರ ಪದಾರ್ಥಗಳು ಇತ್ಯಾದಿಗಳನ್ನು ಕೃಷಿಯು ಒದಗಿಸುತ್ತದೆ. ಭಾರತದ ದೇಶಿಯ ವ್ಯಾಪಾರದಲ್ಲಿ ಕೃಷಿ ಉತ್ಪನ್ನಗಳದ್ದೇ ಸಿಂಹಪಾಲು. ಭಾರತವು ನಿರ್ಯಾತ ಮಾಡುವ ಸರಕುಗಳಲ್ಲಿ ಕೃಷಿ ವಸ್ತುಗಳು ಬಹುಭಾಗವನ್ನು ಆಕ್ರಮಿಸುತ್ತದೆ. ನಮ್ಮ ನಿರ್ಯಾತಗಳಲ್ಲಿ ಕೃಷಿ ಉತ್ಪನ್ನಗಳಾದ ಚಹಾ, ಕಾಫಿ, ಸಂಬಾರ ಪದಾರ್ಥಗಳು, ತಂಬಾಕು, ಕಚ್ಚಾಹತ್ತಿ ಹಣ್ಣು ಹಂಪಲುಗಳು ಸೆಣಬು ಮತ್ತು ಹತ್ತಿಯ ಉತ್ಪನ್ನಗಳು ರಫ್ತಿನಲ್ಲಿ ಸಿಂಹಪಾಲು ಪಡೆದಿದೆ.

ಕೃಷಿಯು ಕೈಗಾರಿಕೋತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುತ್ತದೆ. ಪಂಪುಸೆಟ್ಟು, ಟಿಲ್ಲರ್, ಟ್ರಾಕ್ಟರ್ ಇತ್ಯಾದಿಗಳನ್ನು ಉತ್ಪಾದಿಸುವ ಕೈಗಾರಿಕೆಗಳಿಗೆ ಭೂ ವ್ಯವಸಾಯವು ಮಾರುಕಟ್ಟೆಯನ್ನು ಒದಗಿಸುತ್ತದೆ. ಭಾರತದಲ್ಲಿ ಒಟ್ಟು ಅನುಭೋಗ ವೆಚ್ಚದಲ್ಲಿ ಸುಮಾರು ಶೇಕಡಾ ೮೦ ಕೃಷಿ ಉತ್ಪನ್ನಗಳಿಗಾಗಿ ವ್ಯಯವಾಗುತ್ತದೆ, ಹಾಗಾಗಿ ದೇಶದ ಬೆಲೆಯ ವ್ಯವಸ್ಥೆಯ ಮೇಲೆ ಕೃಷಿ ಉತ್ಪನ್ನಗಳು ಆಗಾಧ ಪ್ರಭಾವ ಬೀರುತ್ತವೆ. ಕೃಷಿ ಉತ್ಪನ್ನಗಳ ಬೆಲೆಯೊಡನೆ ಉಳಿದ ವಸ್ತುಗಳ ಬೆಲೆಯು ನೇರ ಸಂಬಂಧ ಹೊಂದಿದೆ. ಕೃಷಿಯುತ್ಪನ್ನಗಳ ಬೆಲೆಯಲ್ಲಿ ಸ್ವಲ್ಪವೇ ಹೆಚ್ಚಳವಾದರೂ ದೇಶದಲ್ಲಿ ಸಮಸ್ಯೆ ಉದ್ಭವಿಸುತ್ತದೆ. ಶಾಂತಿಪ್ರಿಯವಾದ ರೈತರಿಂದಾಗಿ ಸಮಾಜದಲ್ಲಿ ಸುವ್ಯವಸ್ಥೆ ಸುಮಧುರ ಭಾಂಧವ್ಯ ಇರುತ್ತದೆ.

ಹೀಗೆ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಪಾತ್ರ ಬಹಳ ಹಿರಿದಾದುದು. ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಭಾರತವನ್ನು ನಿಯಂತ್ರಿಸುವ ಭಾರತದ ಭೂ ವ್ಯವಸಾಯವು ಭಾರತದ ಅನೇಕ ರೂಢಿಯ ಸಂಪ್ರದಾಯಗಳಿಗೆ ತವರು ಭೂಮಿಯಾಗಿದೆ ಎನ್ನುವುದನ್ನು ಮರೆಯುವಂತಿಲ್ಲ.

ಕರ್ನಾಟಕದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಸ್ಥಾನ

ಬಹು ಹಿಂದಿನ ಕಾಲದಿಂದಲೂ ಕೃಷಿ ರಾಜ್ಯದ ಪ್ರಧಾನ ಕಸುಬಾಗಿದೆ, ರಾಜ್ಯದ ಆರ್ಥಿಕ ರಚನೆಯು ಕೃಷಿಯ ಮೇಲೆ ನಿಂತಿದೆ. ಇಂದಿಗೂ ಕೃಷಿಯು ಕರ್ನಾಟಕದ ಆರ್ಥಿಕತೆಯ ಬೆನ್ನೆಲುಬು ಎಂದು ಪರಿಗಣಿತವಾಗಿರುವುದರಿಂದ ಅದು ಅಭಿವೃದ್ಧಿಗೊಂಡರೆ ಮಾತ್ರ ರಾಜ್ಯ ಅಭಿವೃದ್ಧಿಗೊಂಡಿತ್ತು.

ಕಳೆದ ಐದು ದಶಕಗಳ ಅವಧಿಯಲ್ಲಿ ಕೈಗಾರೀಕರಣಕ್ಕಾಗಿ ನಡೆಸಿದ ಹಲವಾರು ಪ್ರಯತ್ನಗಳ ನಡುವೆಯೂ ಕರ್ನಾಟಕವು ಇಂದಿಗೂ ಕೃಷಿ ಪ್ರಧಾನವಾದ ರಾಜ್ಯವಾಗಿಯೇ ಉಳಿದಿದೆ. ಕೃಷಿ ಕ್ಷೇತ್ರವು ಇಂದು ರಾಜ್ಯದ ರಾಜ್ಯಾದಾಯದಲ್ಲಿ ಸಾಕಷ್ಟು ದೊಡ್ಡ ಪಾಲನ್ನು ಹೊಂದಿದೆ. ಕೃಷಿ ಇಂದಿಗೂ ಶೇಕಡ ೧೬.೨೨ ಭಾಗದಷ್ಟು ಕೊಡುಗೆಯನ್ನು ರಾಜ್ಯಾದಾಯಕ್ಕೆ ಸಲ್ಲಿಸುತ್ತಿದ್ದೆ. ಕೃಷಿ ಇಂದಿಗೂ ರಾಜ್ಯದಲ್ಲಿ ಗರಿಷ್ಟ ಉದ್ಯೋಗ ಒದಗಿಸುತ್ತಿರುವ ಕ್ಷೇತ್ರವಾಗಿದೆ. ಕೃಷಿ ನಮ್ಮ ಜನರ ಪ್ರಮುಖ ಕಸುಬಾಗಿದ್ದು, ಒಂದು ಕಾಲದಲ್ಲಿ ಶೇಕಡಾ ೭೫ ಕ್ಕಿಂತಲೂ ಹೆಚ್ಚು ಜನರು ಕೃಷಿಯನ್ನು ಅವಲಂಬಿಸಿದ್ದರು. ಆರ್ಥಿಕ ಯೋಜನೆಗಳ ಕಾಲಾವಧಿಯಲ್ಲಿ ಸಾಧಿಸಿದ ಅದ್ಭುತ ಕೈಗಾರಿಕಾಭಿವೃದ್ಧಿಯ ತರುವಾಯವೂ ಕೃಷಿ ಇಂದಿಗೂ ಮುಖ್ಯ ಕಸುಬಾಗಿದ್ದು ಶೇಕಡಾ ೬೧ಕ್ಕಿಂತಲೂ ಹೆಚ್ಚಿನ ಜನರು ಕೃಷಿಯನ್ನೇ ತಮ್ಮ ಕಸುಬನ್ನಾಗಿಸಿಕೊಂಡಿದ್ದಾರೆ. ರಾಜ್ಯದ ಜನಸಂಖ್ಯೆ ಬೃಹದಾಕಾರವಾಗಿ ಬೆಳೆಯುತ್ತಿದೆ. ೧೯೫೧ ರಲ್ಲಿ ಕೇವಲ ೧೩.೫ ದಶಲಕ್ಷವಿದ್ದ ಜನಸಂಖ್ಯೆ ಇಂದು ೬೧.೧೩ ದಶಲಕ್ಷಕ್ಕೂ ಅಧಿಕವಿದೆ ಹೀಗೆ ಸತತವಾಗಿ ಬೆಳೆಯುತ್ತಿರುವ ಜನಕ್ಕೆ ಆಹಾರ ಪೂರೈಕೆಯ ಜವಾಬ್ದಾರಿ ಕೃಷಿಯದಾಗಿದೆ.

ಕರ್ನಾಟಕದಲ್ಲಿ ಕೃಷಿಯು ಕೈಗಾರಿಕಾಭಿವೃದ್ಧಿಗೆ ತನ್ನದೇ ಆದ ಕೊಡುಗೆಗಳನ್ನು ಸಲ್ಲಿಸುತ್ತಿದೆ. ಕೈಗಾರಿಕೆಯಲ್ಲಿ ಉದ್ಯೋಗ ನಿರತರಾಗಿರುವವರಿಗೆ ಆಹಾರ ಪೂರೈಸುತ್ತಿದೆ ಮತ್ತು ಕೈಗಾರಿಕಾ ಸರಕುಗಳಿಗೆ ಮಾರುಕಟ್ಟೆಯನ್ನು ಒದಗಿಸುತ್ತಿದೆ. ಇಷ್ಟಲ್ಲದೆ ಹತ್ತಿಬಟ್ಟೆ, ಸಕ್ಕರೆ ವನಸ್ಪತಿ ಮುಂತಾದ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಗಳನ್ನು ಪೂರೈಸುತ್ತಿದೆ. ಬಹಳ ಹಿಂದಿನಿಂದಲೂ ವಿದೇಶಿ ವ್ಯಾಪಾರ ಕ್ಷೇತ್ರಕ್ಕೆ ಕೃಷಿ ಕ್ಷೇತ್ರದ ಕೊಡುಗೆ ಅಪಾರವಾಗಿದೆ. ಕೃಷಿ ಸರಕುಗಳಾದ ಹತ್ತಿಬಟ್ಟೆ, ಕಾಫೀ, ಟೀ, ಗೋಡಂಬಿ, ತಂಬಾಕು, ಸಕ್ಕರೆ ಸಾಂಬಾರ ಪದಾರ್ಥಗಳು ಮುಂತಾದುವುಗಳನ್ನು ರಾಜ್ಯದಿಂದ ರಫ್ತು ಮಾಡಲಾಗುತ್ತಿದೆ.

ಕೃಷಿಯು ಸರ್ಕಾರಕ್ಕೆ ಪ್ರಮುಖ ಆದಾಯ ತರುವ ಮೂಲವಾಗಿದೆ. ಶೇಕಡಾ ೭೧ ಕ್ಕಿಂತಲೂ ಹೆಚ್ಚಿನ ಜನರು ಕೃಷಿಯನ್ನೇ ಅವಲಂಬಿಸಿರುವುದರಿಂದ ಹಾಗೂ ರಾಜ್ಯಾದಾಯದಲ್ಲಿ ಕೃಷಿಯು ಪಾಲು ಶೇಕಡಾ ೧೬ ಕ್ಕಿಂತಲೂ ಅಧಿಕವಾಗಿದೆ.

ಕರ್ನಾಟಕದಲ್ಲಿ ಕೃಷಿಯು ಪ್ರಧಾನ ಸ್ಥಾನ ಪಡೆದಿರುವುದರಿಂದ ಕೃಷಿ ಕ್ಷೇತ್ರವನ್ನು ಉಪೇಕ್ಷಿಸಿ ಸರ್ಕಾರದ ಆಯ-ವ್ಯಯ ಪತ್ರಗಳು ಘೋಷಣೆಯಾಗುವಂತಿಲ್ಲ. ರಾಜ್ಯದಲ್ಲಿ ಕೃಷಿಯು ತೀರಾ ಹಿಂದುಳಿದ ಕ್ಷೇತ್ರವಾಗಿದೆ. ರಾಜ್ಯದಲ್ಲಿ ಶೇಕಡಾ ೭೧ ಕ್ಕಿಂತಲೂ ಹೆಚ್ಚಿನ ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಆದ್ದರಿಂದ ಕೃಷಿಯೇ ಬಂಡವಾಳ ಸಂಚಯನದ ಪ್ರತ್ಯಕ್ಷ ಮತ್ತು ಪರೋಕ್ಷ ಮೂಲವಾಗಿದೆ.

ರಾಜ್ಯದಲ್ಲಿ ದನ, ಕರು, ಎತ್ತು ಎಮ್ಮೆ, ಕುರಿ, ಮೇಕೆ, ಕುದುರೆ, ಕತ್ತೆ, ಕೋಳಿ ಮುಂತಾದ ಪ್ರಾಣಿ ಪಕ್ಷಿಗಳು ೫.೪ ಕೋಟಿಗಿಂತಲೂ ಅಧಿಕ ಸಂಖ್ಯೆಯಲ್ಲಿವೆ. ಈ ಸಾಕು ಪ್ರಾಣಿಗಳನ್ನು ಸಾಕುವುದು ಕೃಷಿಯ ಉಪಕಸುಬಾಗಿದ್ದು, ಅದು ಲಾಭದಾಯಕವೂ ಆಗಿದೆ. ಬೆಲೆ ಸ್ಥಿರತೆ ಕಾಪಾಡುವಲ್ಲಿ ಕೃಷಿಕ್ಷೇತ್ರ ಪ್ರಮುಖ ಪಾತ್ರವಹಿಸುತ್ತಿದೆ. ನಮ್ಮ ಜನರ ಒಟ್ಟು ಅನುಭೋಗ ವೆಚ್ಚದಲ್ಲಿ ಶೇಕಡಾ ೮೦ ಕ್ಕಿಂತಲೂ ಅಧಿಕ ವರಮಾನ ಕೃಷಿ ಸಾಮಾಗ್ರಿಗಳ ಮೇಲೆ ವ್ಯಯವಾಗುತ್ತಿದೆ.

ವ್ಯಾಪಾರ, ವಾಣಿಜ್ಯ, ವಿಮೆ, ಬ್ಯಾಂಕಿಂಗ್,ಸಾರಿಗೆ ಸಂಪರ್ಕ, ಅಂಚೆ ಮುಂತಾದ ತೃತೀಯ ವಲಯದ ಉದ್ಯಮಗಳ ಬೆಳವಣಿಗೆಗೆ ಕೃಷಿ ವಲಯದ ಕೊಡುಗೆ ಅಪಾರವಾಗಿದೆ ಕೃಷಿ ಸಾಮಾಗ್ರಿಗಳ ಸಾಗಾಟಕ್ಕೆ ಉತ್ತಮ ರಸ್ತೆಗಳು ಮತ್ತು ಸಾರಿಗೆ ಸಂಪರ್ಕ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲಾಗುವುದರಿಂದ ಅವುಗಳ ಪರಿಸ್ಥಿತಿ ಸುಧಾರಿಸುತ್ತಿದೆ. ಕೃಷಿಯ ಕೈಗಾರಿಕೋತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ರಾಜ್ಯದಲ್ಲಿ ಕೃಷಿಯು ಪ್ರಮುಖ ಕಸುಬು ಮತ್ತು ಆದಾಯದ ಮೂಲವಾಗಿರುವುದರಿಂದ ಕೈಗಾರಿಕಾ ಸರಕುಗಳಿಗೆ ಬೇಡಿಕೆ ಕೃಷಿ ಮೂಲದಿಂದ ಹೆಚ್ಚಾಗಿ ಬರುತ್ತಿದೆ.

ಹೀಗೆ ಕರ್ನಾಟಕದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ ಅತ್ಯಂತ ಪ್ರಮುಖವಾದ ಸ್ಥಾನವನ್ನು ಪಡೆದಿದೆ. ಅದು ರಾಜ್ಯದ ಆರ್ಥಿಕ ವ್ಯವಸ್ಥೆಯ ಮೂಲಧಾರ. ಕೃಷಿಯು ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ಸಾಮಾಜಿಕ ರಾಜಕೀಯ ಮತ್ತು ರಕ್ಷಣಾ ಪ್ರಾಮುಖ್ಯತೆ ಪಡೆದಿದ್ದು ಅದನ್ನು ಉಪೇಕ್ಷಿಸಿ ಮುನ್ನಡೆಯುವಂತಿಲ್ಲ.

ಗ್ರಾಮೀಣಾಭಿವೃದ್ಧಿ (ಅರ್ಥ, ಉದ್ದೇಶ, ಮಹತ್ವ)

ಭಾರತ ಒಂದು ಹಳ್ಳಿಗಳ ದೇಶ. ಇಲ್ಲಿ ಸುಮಾರು ಆರು ಲಕ್ಷಗಳಿಗಿಂತಲೂ ಅಧಿಕ ಹಳ್ಳಿಗಳಿವೆ. ೨೦೦೧ ರ ಜನಗಣತಿಯ ಮೇರೆಗೆ ೭೪೩ ದಶಲಕ್ಷ ಜನರು ಅಂದರೆ ಶೇಕಡಾ ೭೨.೨ಕ್ಕಿಂತಲೂ ಅಧಿಕ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಕಳೆದ ಐದು ದಶಕಗಳ ಅಭಿವೃದ್ಧಿಯ ಕಾರ್ಯಕ್ರಮಗಳು ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ನಿವಾರಿಸುವಲ್ಲಿ ವಿಫಲಗೊಂಡಿದ್ದು ಗ್ರಾಮೀಣ ಭಾರತ ಹಲವು ಸಮಸ್ಯೆಗಳ ಅಗರವಾಗಿಯೇ ಉಳಿದುಕೊಂಡಿದೆ.

ನೈಜ ಭಾರತವನ್ನು ಹಳ್ಳಿಯಲ್ಲಿ ಕಾಣಬಹುದು ಎಂದು ರಾಷ್ಟ್ರಪಿತ ಗಾಂಧೀಜಿ ಹೇಳುತ್ತಿದ್ದರು "ಹಳ್ಳಿಗಳ ಅಭಿವೃದ್ಧಿಯೇ ಭಾರತದ ಅಭಿವೃದ್ಧಿ, ಹಳ್ಳಿಗಳನ್ನು ಅಲಕ್ಷಿಸಿ ಭಾರತ ಅಭಿವೃದ್ಧಿಗೊಳ್ಳುವುದು ಸಾಧ್ಯವಿಲ್ಲ" ಎಂಬುದು ಗಾಂಧೀಜಿಯವರ ಅಭಿಮತವಾಗಿತ್ತು.

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡಜನರ ಜೀವನಮಟ್ಟವನ್ನು ಸುಧಾರಿಸುವುದು ಮತ್ತು ಅದರ ಅಭಿವೃದ್ಧಿ ಪ್ರಕ್ರಿಯೆಯನ್ನು ಸ್ವಸಂರಕ್ಷಣೆ ಮಾಡುವುದನ್ನು ಗ್ರಾಮೀಣ ಅಭಿವೃದ್ಧಿ ಎಂದು ಕರೆಯಲಾಗುತ್ತದೆ.

ಗ್ರಾಮೀಣಾಭಿವೃದ್ಧಿಯು ಕೃಷಿ ಬೆಳವಣಿಗೆ ನೀರಾವರಿ ಸಾರಿಗೆ-ಸಂಪರ್ಕಾಭಿವೃದ್ಧಿ ಶಿಕ್ಷಣ ಆರೋಗ್ಯ, ವಸತಿ, ಉದ್ಯೋಗ, ತರಬೇತಿ, ಸಾಮಾಜಿಕ ಯೋಗಕ್ಷೇಮ ಇವೇ ಮುಂತಾದ ಚಟುವಟಿಕೆಗಳನ್ನು ಒಳಗೊಂಡಿರುವ ಒಂದು ವಿಸ್ತೃತ ಅಭಿವೃದ್ಧಿ ಕಾರ್ಯಕ್ರಮವಾಗಿದ್ದು ಗ್ರಾಮೀಣ ಜೀವನದ ಎಲ್ಲಾ ಆಯಾಮಗಳನ್ನು ಸ್ಪರ್ಶಿಸುತ್ತದೆ.

ಉದ್ದೇಶಗಳು :

ಗ್ರಾಮೀಣ ಮತ್ತು ಗೃಹ ಕೈಗಾರಿಕೆಗಳಿಗೆ ಪ್ರಾಶಸ್ತ್ಯ ನೀಡಿ ಗ್ರಾಮೀಣ ಕೈಗಾರಿಕೆಗಳನ್ನು ಒಳಗೊಂಡಂತೆ ಕೃಷಿ ಮತ್ತು ಸಹಾಯಕ ಚಟುವಟಿಕೆಗಳ ಉತ್ಪಾದನೆಯನ್ನು ಗರಿಷ್ಟಗೊಳಿಸುವುದು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರಿಂದ ಗ್ರಾಮೀಣ ಪ್ರದೇಶಗಳ ದುರ್ಬಲ ವರ್ಗಗಳ ಜನರ ಜೀವನ ಮಟ್ಟ ಸುಧಾರಿಸುವುದು. ಕುಡಿಯುವ ನೀರು, ವಿದ್ಯುಚ್ಛಕ್ತಿ, ಆರೋಗ್ಯ, ಶಿಕ್ಷಣ, ಕೃಷಿ ಉತ್ಪನ್ನಗಳ ಮಾರಟ ಕೇಂದ್ರಗಳಿಗೆ ಸಂಪರ್ಕ ರಸ್ತೆ ಇವೇ ಮುಂತಾದ ಮೂಲಭೂತ ಸೌಕರ್ಯಗಳನ್ನು ಗ್ರಾಮೀಣ ಜನತೆಗೆ ಒದಗಿಸುವುದು.

ಗ್ರಾಮೀಣಾಭಿವೃದ್ಧಿಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಖ್ಯ ಕಾರಣ ನಮ್ಮ ದೇಶದ ಬಡತನ ಮತ್ತು ನಿರುದ್ಯೋಗ ಸಮಸ್ಯೆ. ಗ್ರಾಮೀಣಾಭಿವೃದ್ಧಿಯು ಈ ಕೆಳಗಿನ ಉದ್ದೇಶವನ್ನು ಹೊಂದಿದೆ.

೧. ಗ್ರಾಮೀಣ ಬಡಜನರ ಜೀವನ ಮಟ್ಟ ಸುಧಾರಣೆ

೨. ಕೃಷಿ ಅಭಿವೃದ್ಧಿ ಮತ್ತು ಆಧುನೀಕರಣ

೩. ಗ್ರಾಮೀಣ ಭಾರತದ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಬದಲಾವಣೆ.

೪. ಪ್ರಾಮಾಣಿಕ ಮತ್ತು ಸಮರ್ಪಿತ ಮುಂದಾಳತ್ವದ ಬೆಳವಣಿಗೆ.

ಮಹತ್ವ:

ಭಾರತ ಹಳ್ಳಿಗಳ ದೇಶ. ಶೇಕಡಾ ೭೨ ಕ್ಕಿಂತಲೂ ಅಧಿಕ ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ ಹಾಗೂ ಕೃಷಿಯೇ ಪ್ರಧಾನ ಕಸುಬು. ಗ್ರಾಮೀಣ ಪ್ರದೇಶ ತೀರಾ ಹಿಂದುಳಿದಿದ್ದು ಬಡತನ ಮತ್ತು ನಿರುದ್ಯೋಗ ವ್ಯಾಪಕವಾಗಿದೆ. ಹಳ್ಳಿಗಳಲ್ಲಿ ರಸ್ತೆಗಳು, ಸಾರಿಗೆ ಸಂಪರ್ಕ ವ್ಯವಸ್ಥೆಗಳು ಅಭಿವೃದ್ಧಿಗೊಂಡಿಲ್ಲ, ಕುಡಿಯುವ ನೀರು, ಆರೋಗ್ಯ ಸೌಲಭ್ಯಗಳು, ಶಿಕ್ಷಣ ವಸತಿ ಮುಂತಾದವು ಕೊರತೆಯಿಂದ ಕೂಡಿವೆ. ಕೃಷಿ ತೀರಾ ಹಿಂದುಳಿದಿದೆ ಹಾಗೂ ಮಿತಿಮೀರಿದ ಅವಲಂಬನೆಯಿಂದ ತತ್ತರಿಸುತ್ತಿದೆ. ಗ್ರಾಮಗಳ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲದ ಮಾತು. ಹೀಗಾಗಿ ಗ್ರಾಮೀಣ ಪ್ರದೇಶದ ಸ್ಥಿತಿಗತಿಗಳನ್ನು ಸುಧಾರಿಸಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ. ಯಾವುದೇ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವಾದರು ಗ್ರಾಮೀಣ ಭಾಗದಲ್ಲಿ ವ್ಯಾಪಕವಾಗಿ ಅಸ್ತಿತ್ವದಲ್ಲಿರುವ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳನ್ನು ನಿವಾರಿಸಬೇಕಾಗುತ್ತದೆ.

ಕೃಷಿ ಭೂಮಿಯ ಗಾತ್ರ ಉತ್ಪಾದಕತೆ:-

ಕೃಷಿ ಹಿಡುವಳಿಯ ಗಾತ್ರ ಎಷ್ಟಿರಬೇಕು ಎಂಬ ಬಗ್ಗೆ ಬಹಳ ಹಿಂದಿನಿಂದಲೂ ವಾದಗಳು ಮಂಡಿಸಲ್ಪಟ್ಟಿವೆ. ನಿಗಮನ ತರ್ಕದ ಆಧಾರದಲ್ಲಿ ದೊಡ್ಡ ಹಿಡುವಳಿಗಳು ಹೆಚ್ಚು ಲಾಭದಾಯಕ ಎಂದು ಅನೇಕರು ಭಾವಿಸುತ್ತಾರೆ ದೊಡ್ಡ ಗಾತ್ರದ ಹಿಡುವಳಿಗಳಲ್ಲಿ ವ್ಯಾಪಕ ಕೃಷಿಗೆ ಯಂತ್ರೋಪಕರಣಗಳ ಬಳಕೆಗೆ ಮತ್ತು ವೈಜ್ಞಾನಿಕ ಕೃಷಿ ವಿಧಾನಗಳ ಅಲವಡಿಕೆಗೆ ಅವಕಾಶವಿರುವುದೇ ಇದಕ್ಕೆ ಕಾರಣ.

ಕೃಷಿ ಭೂಮಿಯ ಗಾತ್ರ:-

ಹಿಡುವಳಿಯು ಗಾತ್ರವು ರೈತನ ಗಳಿಕೆಯ ಸಾಮರ್ಥ್ಯವನ್ನು ಮತ್ತು ಕೃಷಿ ಭೂಮಿಯ ಉತ್ಪಾದಕತೆಯನ್ನು ನಿರ್ಧರಿಸುತ್ತದೆ. ಹಿಡುವಳಿಯ ಗಾತ್ರವನ್ನು ಎಕರೆಗಳ ಮೂಲಕ ಅಳೆಯಲಾಗುತ್ತದೆ. ಗಾತ್ರಕ್ಕೆ ಅನುಗುಣವಗಿ ಕೃಷಿ ಭೂಮಿಯನ್ನು ೧) ದೊಡ್ಡ ಹಿಡುವಳಿ ಮತ್ತು ೨) ಸಣ್ಣ ಹಿಡುವಳಿ ಎಂದು ವಿಭಜಿಸಲಾಗುತ್ತದೆ. ಕೆಲವು ರಾಷ್ಟ್ರಗಳಲ್ಲಿ ದೊಡ್ಡ ಹಿಡುವಳಿ ಮಧ್ಯಮ ಗಾತ್ರದ ಹಿಡುವಳಿ, ಸಣ್ಣ ಹಿಡುವಳಿ, ಅತಿ ಸಣ್ಣ ಹಿಡುವಳಿ ಮತ್ತು ಅಂಚಿನ ಹಿಡುವಳಿಗಳೆಂದು ಕೃಷಿ ಭೂಮಿಯನ್ನು ಗಾತ್ರಕ್ಕೆ ಅನುಗುಣವಾಗಿ ವಿಭಜಿಸುವುದುಂಟು.

ಗಾತ್ರದ ಅಳತೆಯ ವಿಧಾನ :-

ವಿಶ್ವದಾದ್ಯಂತ ಕೃಷಿ ಭೂಮಿಯು ಗಾತ್ರವನ್ನು ಎಕರೆಗಳ ಮೂಲಕ ಹೇಳಲಾಗುತ್ತದೆ ಇದೊಂದು ಸರಳವಾದ ಮಾಪನ ಕ್ರಮ. ಆದರೆ ಇದು ಕೃಷಿ ಭೂಮಿಯ ಸಹಜ ಫಲವತ್ತತೆ ಮಳೆ, ನೀರಾವರಿ ಸೌಲಭ್ಯ ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಉದಾ : ನೀರೇ ಇಲ್ಲದ ಬಿಜಾಪುರದ ೧೦ ಎಕರೆ ಭೂಮಿಯ ಕಾವೇರಿ ನೀರಿನಿಂದ ಸಮೃದ್ಧವಾದ ಮಂಡ್ಯದ ೧೦ ಎಕರೆ ಭೂಮಿಗೆ ಯಾವ ರೀತಿಯಲ್ಲಿ ಸಮಾನವಲ್ಲ ಕೃಷಿ ಭೂಮಿಯಲ್ಲಿ ಬೆಳೆ ತೆಗೆಯಲು ಮತ್ತು ಪಶು ಸಂಗೋಪನೆ ಮಾಡಲು ಅಗತ್ಯವಿರುವ ಶ್ರಮ ಸಮಯದ ಮೂಲಕ ಕೃಷಿ ಭೂಮಿಯ ಗಾತ್ರ ನಿರ್ಧರಿಸುವ ಕ್ರಮವೊಂದಿದೆ. ಆದರೆ ಈ ವಿಧಾನವು ಕೂಡ ಪರಿಪೂರ್ಣವಾದುದಲ್ಲ. ಆದುದರಿಂದ ಭೂಮಿಯ ವಿಸ್ತೀರ್ಣವು ಹೇಗೆ ಉತ್ಪಾದಕತೆಗೆ ನೇರ ಕಾರಣವಾಗಲಾರದೋ ಹಾಗೆಯೇ ಶ್ರಮ ಪ್ರಮಾಣವೂ ಉತ್ಪಾದಕತೆಗೆ ನೇರ ಕಾರಣವಾಗದು.

ಭೂಮಿಯಿಂದ ಬರುವ ಉತ್ಪನ್ನ ಪ್ರಮಾಣ ಅಧಿಕವಾದರೆ ಭೂಮಿಯ ಗಾತ್ರ ದೊಡ್ಡದು ಮತ್ತು ಉತ್ಪನ್ನ ಕಡಿಮೆಯಾದರೆ ಭೂಮಿಯ ಗಾತ್ರ ಸಣ್ಣದು ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ಈ ಮಾಪಕವು ಮಣ್ಣಿನ ಮತ್ತು ಹವಮಾನದ ಏರಳಿತಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ, ಪ್ರತಿ ವರ್ಷದ ಉತ್ಪನ್ನ ಪ್ರಮಾಣ ಬದಲಾವಣೆಗಳನ್ನು ತುಲನೆ ಮಾಡಲು ಸಾಧ್ಯವಾಗುವುದಿಲ್ಲ. ಇವೆರಡು ಮಿತಿಗಳು ಹೊರತಾಗಿಯೂ ಒಟ್ಟು ಉತ್ಪನ್ನ ಪ್ರಮಾಣವು ಇತರ ಮಾಪಕಗಳಗಿಂತ ಉತ್ತಮವಾದುದು ಎಂದು ಕೃಷಿ ಅರ್ಥಶಾಸ್ತ್ರಜ್ಞರು ಭಾವಿಸುತ್ತಾರೆ.

ಗಾತ್ರ ಮತ್ತು ಉತ್ಪಾದಕತೆ

ಕೃಷಿ ಹಿಡುವಳಿಯ ಗಾತ್ರಕ್ಕೂ ಅದರ ಉತ್ಪಾದಕತೆಗೂ ನೇರ ಸಂಬಂಧವಿದೆಯೆಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ದೊಡ್ಡ ಗಾತ್ರದ ಭೂಮಿಯಲ್ಲಿ ಉತ್ಪಾದಕತೆ ಅಧಿಕ ಮತ್ತು ಸಣ್ಣ ಗಾತ್ರದ ಭೂಮಿಯಲ್ಲಿ ಉತ್ಪಾದಕತೆ ಅಧಿಕ ಮತ್ತು ಸಣ್ಣ ಗಾತ್ರದ ಭೂಮಿಯಲ್ಲಿ ಉತ್ಪಾದಕತೆ ಕಡಿಮೆ ಎಂದು ವಾದಿಸುವ ಕೃಷಿ ಅರ್ಥಶಾಸ್ತ್ರಜ್ಞರಿದ್ದಾರೆ. ಹಿಂದುಳಿದ ರಾಷ್ಟ್ರಗಳಲ್ಲಿ ಭೂ-ಛಿದ್ರೀಕರಣ ಮತ್ತು ಹಿಂದುಳಿದ ಕೃಷಿ ವಿಧಾನಗಳಿಂದ ಕೃಷಿಯ ಒಟ್ಟು ಚಿತ್ರವು ಬೇರೆಯೇ ಆಗಿರುತ್ತದೆ. ಆದುದರಿಂದ ಹಿಂದುಳಿದ ದೇಶಗಳಲ್ಲಿ ಕೃಷಿ ಹಿಡುವಳಿಗಳ ಏಕೀಕರಣವಾಗಬೇಕು ಮತ್ತು ಕೃಷಿಯಲ್ಲಿ ಯಂತ್ರಗಳು ಮತ್ತು ವಿಜ್ಞಾನದ ಬಳಯಾಗಬೇಕು ಎಂದು ವಾದಿಸಲಾಗುತ್ತಿದೆ.

ಗಾತ್ರ ಮತ್ತು ಉತ್ಪಾದಕತೆಗೆ ನೇರ ಸಂಬಂಧವಿದೆಯೆನ್ನುವ ವಾದವನ್ನು ಪರಿಶೀಲಿಸುವಾಗ ಎರಡು ಪ್ರಶ್ನೆಗಳು ಎದುರಾಗುತ್ತವೆ.:

೧ ಕೃಷಿಯ ಉತ್ಪಾದಕತೆ ಎಂದರೇನು ಮತ್ತು ಅದನ್ನು ಮಾಪನ ಮಾಡುವುದು ಹೇಗೆ?
೨.ಕೈಗಾರಿಕಾ ವಲಯದಲ್ಲಿರುವಂತೆ ಕೃಷಿ ವಲಯದಲ್ಲಿ ಮಿತವ್ಯಯ ಪ್ರಮಾಣಗಳು ಅಸ್ತಿತ್ವದಲ್ಲಿವೆಯೇ?

ಉತ್ಪಾದಕತೆಯ ಮಾಪನ :-

ಪ್ರತಿ ಎಕರೆಗೆ ಸಿಗುವ ಸರಾಸರಿ ಉತ್ಪನ್ನದ ಆಧಾರದ ಮೇಲೆ ಕೃಷಿ ಭೂಮಿಯ ಉತ್ಪಾದಕತೆಯನ್ನು ಮಾಪನ ಮಾಡಲಾಗುತ್ತದೆ. ಆದರೆ ಪ್ರತಿ ಎಕರೆ ಉತ್ಪನ್ನವು ಒಂದು ನಾಜೂಕಾದ ಮಾಪನವಲ್ಲ. ಏಕೆಂದರೆ ಉತ್ಪನ್ನವನ್ನು ತೂಕದ ಆಧಾರದ ಮೇಲೆ ಪರಿಗಣಿಸಿದರೆ ಅದು ಅಧಿಕ ಆದಾಯ ನೀಡುವ ಮತ್ತು ಕಡಿಮೆ ಆದಾಯ ನೀಡುವ ಬೆಳೆಗಳನ್ನು ಸಮಾನವಾಗಿ ಪರಿಗಣಿಸುತ್ತದೆ. ಹಿಂದುಳಿದ ರಾಷ್ಟ್ರಗಳಲ್ಲಿ ಉತ್ಪನ್ನದ ಬಹುಅಂಶವನ್ನು ರೈತರು ತಮ್ಮ ಸ್ವಯಂ ಅನುಭೋಗಕ್ಕಾಗಿ ಇರಿಸಿಕೊಂಡಿರುತ್ತಾರೆ. ಅವುಗಳನ್ನು ಹೊರತುಪಡಿಸಿ ಉಳಿದ ಉತ್ಪನ್ನಗಳ ಬೆಲೆ ನಿರ್ಧಾರ ಮಾಡಿದರೆ ಅದು ಸಮರ್ಪಕವಾದ ಮಾಪಕವಾಗುವುದಿಲ್ಲ. ರೈತನ ದೃಷ್ಟಿಯಿಂದ ತಲಾ ಎಕರೆಯ ಉತ್ಪನ್ನದಿಂದ ಬರುವ ಆದಾಯ ಮುಖ್ಯವೆನಿಸುತ್ತದೆ. ಒಟ್ಟು ಆದಾಯಕ್ಕಿಂತ ಆದಾಯವನ್ನು ಕೃಷಿ ಭೂಮಿಯ ಗಾತ್ರದಿಂದ ಭಾಗಿಸಿದಾಗ ದೊರೆಯುವ ಸರಾಸರಿ ಆದಾಯದಲ್ಲಿ ರೈತ ಹೆಚ್ಚು ಆಸಕ್ತನಾಗಿರುತ್ತಾನೆ.

ಹಿಂದುಳಿದ ರಾಷ್ಟ್ರಗಳಲ್ಲಿ ಉತ್ಪನ್ನದ ಬಹುಭಾಗವು ಸ್ವಂತ ಅನುಭೋಗಕ್ಕೆ ಬಳಕೆಯಾಗುವುದರಿಂದ ಮತ್ತು ಉತ್ಪಾದನೆಗೆ ಬೇಕಾಗುವ ಉತ್ಪಾದನಾಂಗಗಳನ್ನು ರೈತನ ಕುಟುಂಬವೇ ಒದಗಿಸುವುದಾದರೆ, ಉತ್ಪಾದನಾ ವೆಚ್ಚವನ್ನು ಮಾಪಕವನ್ನಾಗಿ ಬಳಸುವುದು ಸಮಸ್ಯಾತ್ಮಕವಾಗುತ್ತದೆ.

ಭಾರತದ ಕೃಷಿಯ ಸಮಸ್ಯೆಗಳು

ಭಾರತದ ಆರ್ಥಿಕತೆಯಲ್ಲಿ ಕೃಷಿ ಅಗ್ರಮಾನ್ಯ ಸ್ಥಾನ ಪಡೆದಿದೆ. ಅತ್ಯಧಿಕ ಸಂಖ್ಯೆಯ ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ. ದೇಶದ ರಾಷ್ಟ್ರೀಯ ವರಮಾನಕ್ಕೆ ಅದರ ಕೊಡುಗೆ ಅಪಾರವಾಗಿದೆ. ಆದಾಗ್ಯೂ ಭಾರತದ ಕೃಷಿ ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿದೆ.

ಭಾರತದಲ್ಲಿ ಕೃಷಿ ನೀರಾವರಿ ಸೌಲಭ್ಯಗಳ ಕೊರತೆಯನ್ನು ಎದುರಿಸುತ್ತಿದೆ. ದೇಶದ ಒಟ್ಟು ಕೃಷಿ ಭೂಮಿಯ ಶೇಕಡಾ ೫೦ ಕ್ಕಿಂತಲೂ ಅಧಿಕ ಭಾಗ ಮಳೆಯನ್ನು ಅವಲಬಿಸಿದೆ. ಆದರೆ ಭಾರತದಲ್ಲಿ ಮಳೆ ಅವ್ಯವಸ್ಥಿತವೂ, ಅನಿರ್ದಿಷ್ಟವೂ ಆಗಿದೆ. ಆದ್ದರಿಂದ ಭಾರತದ ಕೃಷಿಯನ್ನು ಮಳೆಯೊಂದಿಗಿನ ಜೂಜಾಟ ಎಂಬ ಪರಿಗಣಿಸಲಾಗಿದೆ. ಭಾರತದ ಕೃಷಿ ಕ್ಷೇತ್ರ ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಬಹಳ ಗಂಭೀರವಾದ ಸಮಸ್ಯೆ ಎಂದರೆ ಕಡಿಮೆ ಉತ್ಪಾದಕತೆ. ಪ್ರತಿ ಕಾರ್ಮಿಕನ ಉತ್ಪಾದಕತೆ ಮುಂದುವರಿದ ದೇಶಗಳ ಕಾರ್ಮಿಕನ ಉತ್ಪಾದಕತೆಯೇ ಶೇಕಡ ೧ಕ್ಕಿಂತಲೂ ಕಡಿಮೆ ಇದೆ.

ಜನಸಂಖ್ಯೆಯ ಒತ್ತಡ, ಪಿತ್ರಾರ್ಜಿತ ಆಸ್ತಿಯ ಹಕ್ಕು, ನಗರೀಕರಣ ಮುಂತಾದ ಕಾರಣಗಳಿಂದಾಗಿ ಭಾರತಲ್ಲಿ ಕೃಷಿ ಭೂಮಿ ಹರಿದು ಹಂಚಿಹೋಗಿ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿಗಳು ಅಸ್ತಿತ್ವಕ್ಕೆ ಬಂದಿದೆ. ಈ ಸಣ್ಣ ಹಿಡುವಳಿಗಳಲ್ಲಿ ವೈಜ್ಞಾನಿಕವಾದ ಬೇಸಾಯ ಕ್ರಮವನ್ನು ಅನುಸರಿಸುವುದು ಕಷ್ಟ ಹಾಗೂ ಯಂತ್ರಗಳು ಉಪಕರಣಗಳು ಮುಂತಾದ ಆಧುನಿಕ ಕೃಷಿ ಸಲಕರಣೆಗಳನ್ನು ಬಳಸುವುದು ಕಷ್ಟ. ಆದುದರಿಂದ ಭಾರತದಲ್ಲಿ ರೈತರು ಇಂದಿಗೂ ತೀರಾ ಹಳೆಯದಾದ ಅಪ್ರಸ್ತುತ ಮತ್ತು ಅವೈಜ್ಞಾನಿಕ ಕೃಷಿ ಪದ್ಧತಿಯನ್ನು ಅನುಸರಿಸಿ ಅತ್ಯಾಧುನಿಕ ಯಂತ್ರ ಮತ್ತು ಉಪಕರಣಗಳ ಬಳಕೆಯತ್ತ ಹೆಚ್ಚು ಗಮನಹರಿಸಿಲ್ಲ.

ಹಣಕಾಸಿನ ಅಡಚಣೆಯು ಯಂತ್ರೀಕರಣ ಮತ್ತು ವೈಜ್ಞಾನಿಕ ಬೇಸಾಯಕ್ಕೆ ಅಡ್ಡಿಯಾಗಿದೆ. ಅವರ ಕೃಷಿ ಚಟುವಟಿಕೆಗಳಲ್ಲದೆ ವಿವಾಹ, ಹಬ್ಬ ಹರಿದಿನಗಳು ಉತ್ಸವ ಇತರ ಅನೇಕ ಉದ್ದೇಶಗಳಿಗೆ ಸಾಲದ ಹಣವನ್ನು ಬಳಸಿಕೊಂಡು ಗ್ರಾಮೀಣ ಜನ ಋಣಭಾರದಲ್ಲಿ ಸಿಲುಕಿಕೊಂಡಿದ್ದಾರೆ ಇದಲ್ಲದೆ ಸಾಮಾಜಿಕ ಅಂಶಗಳು ಅನಿಶ್ಚಿತ

ಮಳೆ, ನಿಸರ್ಗದ ವ್ಯಾಪಕ ಪ್ರಭಾವ ಭೂಸವೆತ, ಬೆಳೆ ರೋಗಗಳು, ಅರಣ್ಯನಾಶ, ನೈಸರ್ಗಿಕ ಪ್ರಕೋಪಗಳು ಮುಂತಾದ ನೈಸರ್ಗಿಕ ಅಂಶಗಳು ಅವೈಜ್ಞಾನಿಕ ಕೃಷಿ ಪದ್ಧತಿ, ರಸಗೊಬ್ಬರ, ಕ್ರಿಮಿನಾಶಕಗಳ ಕೊರತೆ ಮುಂತಾದ ತಾಂತ್ರಿಕ ಅಂಶಗಳೂ ರೈತನು ಋಣಭಾಗದಲ್ಲಿ ಸಿಲುಕಿ ಸಾಲದಲ್ಲೆ ಜನಿಸಿ ಸಾಲದಲ್ಲೆ ಬೆಳೆದು ಸಾಲದಲೇ ಸಾಯುವ ಪರಿಸ್ಥಿತಿಯನ್ನು ಎದುರಿಸುತ್ತಿರುವರು.

ದೇಶದಲ್ಲಿ ಕೃಷಿ ಮಾರಕಟ್ಟೆ ಸೌಲಭ್ಯಗಳು ಇನ್ನೂ ಸರಿಯಾಗಿ ಅಭಿವೃದ್ಧಿಗೊಂಡಿಲ್ಲದ ಕಾರಣ ರೈತರು ತಾವು ಬೆಳದ ಬೆಳಗಳಿಗೆ ಸರಿಯಾದ ಬೆಲೆ ಪಡೆಯುವುದು ಸಾಧ್ಯವಾಗುತ್ತಿಲ್ಲ. ರೈತರು ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು ಹಾಗೂ ಕೃಷಿ ಉತ್ಪಾದಕತೆ ಹೆಚ್ಚುವುದು ಮಾರುಕಟ್ಟೆ ಸೌಲಭ್ಯಗಳ ಕೊರತೆಯಿಂದ ಸಾಧ್ಯವಾಗುತ್ತಿಲ್ಲ. ಭಾರತದಲ್ಲಿ ರೈತರಿಗೆ ಸಾಕಷ್ಟು ಹಣಕಾಸಿನ ಸೌಲಭ್ಯ ದೊರೆಯುತ್ತಿಲ್ಲ.

ಕೃಷಿಗೆ ಹಣಕಾಸಿನ ಸೌಲಭ್ಯಗಳನ್ನು ಒದಗಿಸುವ ಹಣಕಾಸಿನ ಸಂಸ್ಥೆಗಳು ಅಭಿವೃದ್ಧಿಗೊಂಡಿಲ್ಲ. ರೈತರು ತಾವು ಬೆಳದ ಬೆಳಗಳಿಗೆ ವೈಜ್ಞಾನಿಕ ಬೆಲೆಯನ್ನು ಪಡೆಯುತ್ತಿಲ್ಲ. ಸರ್ಕಾರ ಕಾಲಕಾಲಕ್ಕೆ ಘೋಷಿಸುತ್ತಿರುವ ಬೆಂಬಲ ಬೆಲೆಗಳು ವೈಜ್ಞಾನಿಕ ರೀತಿಯಲ್ಲಿ ನಿರ್ಧರಿತವಾಗುತ್ತಿಲ್ಲದ ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗದೆ ಅವರು ಬಡವರಾಗಿಯೇ ಉಳಿದಿದ್ದಾರೆ.

ರೈತರು ಬೆಳದ ಆಹಾರ ಮತ್ತು ಇತರ ಕೃಷಿ ಸಾಮಾಗ್ರಿಗಳನ್ನು ಉತ್ತಮ ಮಾರುಕಟ್ಟೆಗೆ ಸಾಗಿಸಲು ಬೇಕಾದ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳು ಭಾರತದಲ್ಲಿ ಸಮರ್ಪಕವಾಗಿಲ್ಲ. ರೈತರಿಗೆ ಬೆಳೆಗಳನ್ನು ವೈಜ್ಞಾನಿಕವಾಗಿ ಬೆಳೆಯಲು ಬೇಕಾದ ಉತ್ತಮ ಉತ್ಪಾದಕ ಉತ್ತೇಜಕಗಳ ಅಭಾವವಿದೆ. ಸರ್ಕಾರದಿಂದ ಸಹಾಯಧನ, ತೆರಿಗೆ ರಿಯಾಯಿತಿ ಬೆಂಬಲ ಬೆಲೆಯ ಘೋಷಣೆ, ಪ್ರಗತಿಪರ ರೈತರಿಗೆ ಬಹುಮಾನ ಯೋಜನೆಗಳು ಮುಂತಾದ ಉತ್ತೇಜಕಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲ.

ಭಾರತದ ಕೃಷಿ ಅನೇಕ ಸಾಂಸ್ಥಿಕ ಸಮಸ್ಯೆಗಳಿಂದ ನರಳುತ್ತಿದ್ದು, ಇನ್ನು ಅಸ್ತಿತ್ವದಲ್ಲಿರುವ ಜಮೀನುದಾರಿ ಪದ್ಧತಿ, ಸಣ್ಣ ಹಿಡುವಳಿಗಳು, ಅಸಮಾರ್ಪಕ ಭೂಸುಧಾರಣೆ ಮುಂತಾದ ಸಾಂಸ್ಥಿಕ ಕಾರಣಗಳಿಂದಾಗಿ ಕೃಷಿ ಹಿಂದುಳಿಯುವಂತಾಗಿದೆ. ಜಮೀನ್ದಾರಿ ಪದ್ಧತಿಯು ಅಸ್ತಿತ್ವದಿಂದಾಗಿ ಭೂಮಿಯ ಒಡೆಯರು ಒಬ್ಬರಾದರೆ, ಭೂಮಿಯನ್ನು ಉಳುವವರು ಮತ್ತೊಬ್ಬರಾಗಿದ್ದಾರೆ.

ಮೇಲಿನ ಸಮಸ್ಯೆಗಳ ಜೊತೆಗೆ ಭಾರತದಲ್ಲಿ ಕೃಷಿ ಹೆಚ್ಚಾಗಿ ನಿಸರ್ಗವನ್ನೇ ಅವಲಂಬಿಸಿದೆ ಅನಿಶ್ಚಿತ ಮಳೆ, ಭೂಸವೆತ, ಫಲವತ್ತತೆಯ ನಷ್ಟ ಕ್ರಿಮಿಕೀಟಗಳು ಮತ್ತು ಬೆಳೆರೋಗಗಳ ಭಾದೆ ನೈಸರ್ಗಿಕ ಪ್ರಕೋಪಗಳು ಇದು ಅಲ್ಲದೆ ರೈತರ ಅನಕ್ಷರತೆ, ಅಜ್ಞಾನ, ಮೌಢ್ಯತೆ, ಅತಾರ್ಕಿನ ನಡವಳಿಕೆ, ಜಾತಿ ಪದ್ಧತಿ ಮುಂತಾದ ಸಾಮಾಜಿಕ ಅಂಶಗಳು ಅನೇಕ ಸಮಸ್ಯೆಗಳ ಉಗಮಕ್ಕೆ ಕಾರಣವಾಗಿದೆ.ಇದರ ಜೊತೆಗೆ ತೀವ್ರ ಜನಸಂಖ್ಯೆ ಒತ್ತಡ, ನಗರೀಕರಣ,ಕೈಗಾರಿಕೀಕರಣಗಳಿಂದ ಕೃಷಿಯ ಮೇಲೆ ಪರಿಣಾಮ ಬೀರಿದೆ. ಹೀಗೆ ಭಾರತೀಯ ಕೃಷಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಈ ಎಲ್ಲಾ ಸಮಸ್ಯೆಗಳ ಪರಿಹಾರದಿಂದ ಮಾತ್ರ ಕೃಷಿಯ ಸರ್ವಾಂಗೀಣ ಅಭಿವೃದ್ಧಿ ಸಾಧನೆ ಸಾಧ್ಯ.

ಭಾರತದ ಕೃಷಿ ಕಾರ್ಮಿಕರು

ನಮ್ಮ ದೇಶದ ಗ್ರಾಮೀಣ ಆರ್ಥಿಕತೆಯಲ್ಲಿ ಕೃಷಿ ಕಾರ್ಮಿಕರು ಅತ್ಯಂತ ನಿರ್ಲಕ್ಷಿತ ವರ್ಗಕ್ಕೆ ಸೇರಿದವರಾಗಿದ್ದಾರೆ. ಅವರು ಕೇವಲ ಬಡವರು ಮತ್ತು ತುಳಿತಕ್ಕೆ ಒಳಗಾದವರು. ಅಷ್ಟೇ ಅಲ್ಲದೆ ಅವರ ಉದ್ಯೋಗ ಸಹ ಕ್ರಮಬದ್ಧವಿಲ್ಲ ಮತ್ತು ಅದು ಋತು ಸಂಬಂಧಿಯಾಗಿದೆ. ಯಾವುದೇ ನೈಪುಣ್ಯತೆ ಅಥವಾ ತರಬೇತಿಯನ್ನು ಹೊಂದಿಲ್ಲ ಮತ್ತು ಯಾವುದೇ ಪರ್ಯಾಯ ಉದ್ಯೋಗವೂ ಲಭ್ಯವಿಲ್ಲ. ಕೃಷಿ ಕಾರ್ಮಿಕರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದು ಅವರ ಸ್ಥಿತಿಯು ಐದೂವರೆ ದಶಕಗಳ ಯೋಜಿತ ಅಭಿವೃದ್ಧಿಯ ನಂತರವೂ ಸುಧಾರಿಸಿಲ್ಲ.

ಭಾರತಲ್ಲಿ ಸುಮಾರು ೭೦ ದಶಲಕ್ಷ ಮಂದಿ ಕೃಷಿ ಕಾರ್ಮಿಕರಿದ್ದಾರೆಂದು ಅಂದಾಜಿಸಲಾಗಿದೆ. ಮೊದಲ ಕೃಷಿ ಕಾರ್ಮಿಕರ ಸಮೀಕ್ಷಾ ಸಮಿತಿ **(First agricultural labour enquiry committee)** ಭಾರತದಲ್ಲಿನ ಕೃಷಿ ಕಾರ್ಮಿಕರನ್ನು ಸಾಂದರ್ಭಿಕ ಕಾರ್ಮಿಕರು ಮತ್ತು ಹೊಂದಿಕೊಂಡ ಕಾರ್ಮಿಕರು ಎಂದು ಎರಡು ವರ್ಗಗಳಾಗಿ ವಿಂಗಡಿಸಿತು.

ಕೃಷಿ ಕಾರ್ಮಿಕರ ಲಕ್ಷಣಗಳು:

ಕೃಷಿ ಕಾರ್ಮಿಕರು ಅನಕ್ಷರಸ್ಥರೂ ಅವಿದ್ಯಾವಂತರೂ ಹಾಗೂ ಸಂಪ್ರದಾಯಪ್ರಿಯರಾದ ಕಾರಣ ಬದಲಾವಣೆಗಳಿಗೆ ಅವರ ಸ್ಪಂದನ ಬಹಳ ನಿಧಾನ. ಕೃಷಿ ಕಾರ್ಮಿಕರು ಸಂಘಟಿತರಾಗಿಲ್ಲ ಆದುದರಿಂದ ಅವರು ಭೂ ಮಾಲೀಕರಿಂದ ಆರ್ಥಿಕವಾಗಿ ಶೋಷಿಸಲ್ಪಡುತ್ತಾರೆ. ಕೃಷಿ ಕಾರ್ಮಿಕರು ಬಹಳ ಹೆಚ್ಚೆಂದರೆ ಒಂದು ವರ್ಷದಲ್ಲಿ

ಎಂಟು ತಿಂಗಳುಗಳವರೆಗೆ ಮಾತ್ರ ಉದ್ಯೋಗಿಗಳಾಗಿದ್ದು, ಕಡಿಮೆ ಸಂಬಳಕ್ಕೆ ಹೆಚ್ಚು ಗಂಟೆಗಳ ಕಾಲ ದುಡಿಯ ಬೇಕಾದುದರಿಂದ ಗ್ರಾಮೀಣ ಸಾಲದಲ್ಲಿ ಮುಳುಗಿ ಹೋಗಿದ್ದಾರೆ. ಇದರಿಂದ ಜೀತ ಸಮಸ್ಯೆ ಉದ್ಭವಿಸಿದೆ.

ಕೃಷಿಕಾರ್ಮಿಕರ ಸದ್ಯದ ಪರಿಸ್ಥಿತಿ ಪ್ರಮುಖ ಸಮಸ್ಯೆಗಳ ಹಾಗೂ ಹಿಂದುಳಿಕೆಗೆ ಕಾರಣಗಳು :

ಕೃಷಿ ಕಾರ್ಮಿಕರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಾ ಹೋಗುತ್ತಿದೆ. ಜತೆಗೆ ಕೃಷಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿ ಮತ್ತು ಸಾಮಾಜಿಕ ಸ್ಥಾನಮಾನ ಕುಸಿಯುತ್ತಾ ಹೋಗುತ್ತಿದ್ದೆ. ಕೃಷಿಯು ಋತು-ಸಂಬಂಧಿಯಾದ ಆರ್ಥಿಕ ಚಟುವಟಿಕೆಯಾಗಿರುವುದರಿಂದ ಕೃಷಿ ಕಾರ್ಮಿಕರು ಅರೆ-ಉದ್ಯೋಗದ ಸಮಸ್ಯೆಯಿಂದ ತೊಂದರೆಗೆ ಒಳಗಾಗಿದ್ದಾರೆ. ಬಹುತೇಕ ಕೃಷಿ ಕಾರ್ಮಿಕರು ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದು ಇವರು ಶತಮಾನಗಳಿಂದ ಮೇಲ್ವರ್ಗದವರ ತುಳಿತಕ್ಕೆ ಮತ್ತು ಶೋಷಣೆಗೆ ಬಲಿಯಾದವರು ಭಾರತದ ಕೃಷಿ ಕಾರ್ಮಿಕರು ಅತ್ಯಂತ ಅಮಾನವೀಯವೂ ಅವೈಜ್ಞಾನಿಕವೂ ಆದ ಜಾತಿಪದ್ಧತಿಗೆ ಜೋತು ಬಿದ್ದು ಸಾವಿರಾರು ದೇವರುಗಳಲ್ಲಿ, ಅಂಧಶ್ರದ್ಧೆಯಲ್ಲಿ ಗಾಢನಂಬಿಕೆ ಇರುವ ಕೃಷಿ ಕಾರ್ಮಿಕರು ಮದುವೆ, ಹುಟ್ಟು ಹಬ್ಬ, ಮುಂಜಿ, ತೀರ್ಥಯಾತ್ರೆ ಪೂಜೆ, ಹಬ್ಬ ಹರಿದಿನಗಳಿಗೆಂದು ಸಾಲಮಾಡಿ ಅಪಾರ ಹಣ ಖರ್ಚು ಮಾಡುತ್ತಾರೆ.

ಕೃಷಿ ಕಾರ್ಮಿಕರಲ್ಲಿ ಬಹುತೇಕ ಮಂದಿ ತಮ್ಮದೇ ಆದ ಒಳ್ಳೆಯ ಮನೆಗಳಿರುವುದಿಲ್ಲ.ಸ್ವಂತ ಮನೆಗಳಿದ್ದರೂ ಅವು ಅತ್ಯಂತ ಕೆಟ್ಟ ರೀತಿಯ ಮನೆಗಳಾಗಿರುತ್ತವೆ. ಅವಿಶ್ರಾಂತ ದುಡಿಮೆ ಕಡಿಮೆ ಕೂಲಿ, ಪೌಷ್ಠಿಕಾಂಶವಿಲ್ಲದ ಆಹಾರ, ವೈದ್ಯಕೀಯ ಸೌಲಭ್ಯಗಳ ಅಭಾವ, ಪ್ರತಿಕೂಲ ವಾತವರಣದಲ್ಲಿ ದುಡಿಯುತ್ತಾರೆ. ಇವುಗಳಿಂದ ಕೃಷಿ ಕಾರ್ಮಿಕರ ಶರೀರದ ಶಕ್ತಿ ಬಹುಬೇಗ ಕುಂದುತ್ತದೆ.

ಭಾರತದ ಕೃಷಿ ಕಾರ್ಮಿಕರ ಸ್ಥಿತಿಗತಿಯ ಸುಧಾರಣೆಗೆ ಕ್ರಮಗಳು

೧೯೭೬ರಲ್ಲಿ ತುರ್ತುಪರಿಸ್ಥಿತಿಯ ಕಾಲದಲ್ಲಿ ಸರಕಾರ ಜೀತ ವಿಮುಕ್ತಿ ಶಾಸನವನ್ನು ಜಾರಿಗೆ ತಂದಿದೆ. ಅನೇಕ ಮಂದಿ ಜೀತದಾಳುಗಳ ವಿಮುಕ್ತಿ ಆಗಿದೆ. ಕೃಷಿ ಕಾರ್ಮಿಕರ ಆದಾಯವನ್ನು ಅಧಿಕಗೊಳಿಸಿ ಅರೆ ಉದ್ಯೋಗ ಸ್ಥಿತಿ ನಿವಾರಣೆಗೆ ಸರಕಾರ ಗೃಹ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತದೆ. ಭೂರಹಿತ ಕೃಷಿ ಕಾರ್ಮಿಕರ ಸ್ಥಿತಿ ಸುಧಾರಣೆಗೆ ಸರಕಾರ ಅನೇಕ ಸುಧಾರಣಾ ಕ್ರಮಗಳನ್ನು ಅನುಷ್ಠಾನಕ್ಕೆ

ತಂದಿದೆ. ಇದರಲ್ಲಿ ಉಳುವವನೇ ಹೊಲದೊಡೆಯ ಎಂಬ ಕಾನೂನು ಭೂರಹಿತರಿಗೆ ತುಂಬಾ ಪ್ರಯೋಜನ ಉಂಟು ಮಾಡಿದೆ.

ಸರಕಾರ ಕೂಲಿಗಾಗಿ ಕಾಳು ಯೋಜನೆಯನ್ನು ೧೯೭೭ ರ ಏಪ್ರಿಲ್ ನಲ್ಲಿ ಜಾರಿಗೆ ತಂದಿದೆ. ಕೂಲಿಗಾಗಿ ಕಾಳು ಯೋಜನೆಯಿಂದ ಕಾರ್ಮಿಕರಿಗೆ ಉದ್ಯೋಗ ಮಾತ್ರವಲ್ಲದೆ ಕಡಿಮೆ ಬೆಲೆಗೆ ಆಹಾರ ಸಾಮಾಗ್ರಿ ಸಿಗುವಂತಾಗಿದೆ. ಕೃಷಿ ಕಾರ್ಮಿಕರಿಗೆ ಸಾಲ, ಗೃಹ ಕೈಗಾರಿಕೆಗಳ ಅಭಿವೃದ್ಧಿ ಪುನರ್ವಸತಿ ಸೌಲಭ್ಯ, ಕನಿಷ್ಟ ಕೂಲಿ ಇತ್ಯಾದಿ ಯೋಜನೆಗಳು ಪಂಚವಾರ್ಷಿಕ ಯೋಜನೆಗಳಲ್ಲಿ ಅಡಕವಾಗಿದೆ. ಒಕ್ಕಲುತನದ ಮಸೂದೆ, ಗೇಣಿ ಭದ್ರತೆ, ಗೇಣಿ ನಿಯಂತ್ರಣ ಇತ್ಯಾದಿಗಳು ಕೃಷಿ ಕಾರ್ಮಿಕರಿಗಾಗಿಯೇ ಜಾರಿಯಾದ ಯೋಜನೆಗಳು ೧೯೭೫ ರ ಜುಲೈಯಲ್ಲಿ ಸರಕಾರ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮ ಹಾಕಿಕೊಂಡಿತು. ೧೯೮೨ ರಲ್ಲಿ ಈ ಕಾರ್ಯಕ್ರಮವನ್ನು ಪರಿಷ್ಕರಿಸಲಾಯಿತು. ಕೃಷಿ ಕಾರ್ಮಿಕರ ಸ್ಥಿತಿ ಸುಧಾರಣೆಗಾಗಿ ಇಪ್ಪತ್ತಂಶಗಳ ಕಾರ್ಯಕ್ರಮದಲ್ಲಿ ವಿಶೇಷ ಯೋಜನೆ ಹಾಕಿಕೊಳ್ಳಲಾಯಿತು.

ಆಹಾರ ಸಮಸ್ಯೆ ಮತ್ತು ಆಹಾರ ಭದ್ರತೆ

ಭಾರತವು ಕೃಷಿ ಪ್ರಧಾನವಾದ ದೇಶವಾದರೂ ತನಗೆ ಅಗತ್ಯವಾದ ಆಹಾರಧಾನ್ಯ ಮತ್ತು ಕಚ್ಚಾ ಸರಕುಗಳ ಪೂರೈಕೆಗೆ ಇತರ ದೇಶಗಳನ್ನು ಅವಲಂಬಿಸಬೇಕಾಗಿದೆ. ಭಾರತದ ಆಹಾರ ಸಮಸ್ಯೆಯನ್ನು ನಿವಾರಿಸದ ಹೊರತು ಭಾರತದ ಜನತೆಯ ಕಲ್ಯಾಣವನ್ನು ಸಾಧಿಸಲು ಸಾಮಾಜಿಕ ನ್ಯಾಯವನ್ನು ದೊರಕಿಸಲು ಮತ್ತು ನಿಜವಾದ ಪ್ರಜಾಸತ್ತೆಯನ್ನು ಸ್ಥಾಪಿಸಲು ಅಸಾಧ್ಯ.

ಆಹಾರ ಸಮಸ್ಯೆಯ ಸ್ವರೂಪ (Nature of food problem)

ಆಹಾರದ ಅಗತ್ಯತೆ ಮತ್ತು ನೈಜ ಉತ್ಪಾದನೆಯ ನಡುವಿನ ಅಂತರಕ್ಕೆ ಕಾರಣಗಳೆಂದರೆ ಆಹಾರ ಧಾನ್ಯಗಳಿಗೆ ಹೆಚ್ಚುತ್ತಿರುವ ತೀವ್ರ ಬೇಡಿಕೆ ಮತ್ತು ಆಹಾರ ಧಾನ್ಯಗಳ ಪೂರೈಕೆಯಲ್ಲಿ ನಿಧಾನಗತಿಯ ಏರಿಕೆ, ಜನಸಂಖ್ಯೆ ಹೆಚ್ಚುತ್ತಿರುವುದು, ತಲಾದಾಯದಲ್ಲಿ ಹೆಚ್ಚಳ ಮತ್ತು ನಗರೀಕರಣ, ಉತ್ಪಾದಕತೆಯಲ್ಲಿ ನಿಧಾನಗತಿಯ ಹೆಚ್ಚಳ, ಸಾಕಷ್ಟಿಲ್ಲದ ಮಾರುಕಟ್ಟೆ ಮಿಗುತೆ, ಸಂಗ್ರಹಣೆಯಲ್ಲಿ ವ್ಯರ್ಥವಾಗುವುದು, ಕಾನೂನು ವಿರೋಧಿ ಸಂಗ್ರಹಣೆ ಮತ್ತು ಸಟ್ಟಾ ವ್ಯಾಪಾರ ಇತ್ಯಾದಿ.

ಸಾಮಾನ್ಯ ಭಾರತೀಯನನೊಬ್ಬನ ಆಹಾರದಲ್ಲಿ ಪೌಷ್ಠಿಕಾಂಶವು ಕಡಿಮೆಯಿರುವುದು. ಸಾಮಾನ್ಯ ಭಾರತಿಯೊಬ್ಬನಿಗೆ ಶೇಕಡ ೬೦ ಭಾಗ ಕಾಲೋರಿಯ ಕಾಳುಗಳ, ಗಂಜಿ ಬೇರುಗಳು, ಸಕ್ಕರೆ ಮತ್ತು ಧಾನ್ಯಗಳ ಮೂಲಕ ಸಿಗುತ್ತದೆ. ಭಾರತದ ಆಹಾರ ಸಮಸ್ಯೆಯ ಪ್ರಮುಖ ಲಕ್ಷಣವೆಂದರೆ ಆಹಾರ ಧಾನ್ಯಗಳ ಬೆಲೆಗಳ ತೀರಾ ಹೆಚ್ಚಾಗಿರುವುದು ಬಡತನದಿಂದ ಬಳಲುತ್ತಿರುವ ಸಾಮಾನ್ಯ ಭಾರತೀಯರು ತೀರಾ ಕೆಳಮಟ್ಟದ ಕೊಳ್ಳುವ ಸಾಮರ್ಥ್ಯದಿಂದಾಗಿ ಹೆಚ್ಚಿನ ಬೆಲೆಯ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳಲು ಸಂಕಷ್ಟಗಳನ್ನು ಎದುರಿಸುತ್ತಾರೆ. ಆದ್ದರಿಂದಾಗಿ ಭಾರತದ ಆಹಾರದ ಸ್ಥಿತಿಯನ್ನು "ಭರ್ತಿ ತೊಟ್ಟಿಗಳು ಖಾಲಿ ಹೊಟ್ಟೆಗಳು" ಎಂದು ಮಾರ್ಮಿಕವಾಗಿ ಬಣ್ಣಿಸಬಹುದು.

ಭಾರತದ ಆಹಾರ ಸಮಸ್ಯೆಗೆ ಕಾರಣಗಳು (Causes)

ಬೇಡಿಕೆಗನುಸಾರವಾಗಿ ಆಹಾರ ಧಾನ್ಯಗಳು ಉತ್ಪಾದನೆಯಾಗದಿರುವುದೇ ಆಹಾರ ಸಮಸ್ಯೆಯ ಮೂಲಕಾರಣವಾಗಿದೆ. ಆಹಾರ ಧಾನ್ಯಗಳ ಉತ್ಪಾದನೆಯು ಕ್ರಮೇಣ ಹೆಚ್ಚುತ್ತಿದ್ದರೂ, ಅದು ಬೇಡಿಕೆಯನ್ನು ಮುಟ್ಟಲಾರದಾಗಿದೆ. ಆದರಿಂದ ಆಹಾರ ಧಾನ್ಯಗಳ ಬೇಡಿಕೆ ಮತ್ತು ಪೂರೈಕೆಗಳಲ್ಲಿ ಸಮತೋಲನ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಪರಿಣಾಮ ಬೀರುವ ಹಲವಾರು ಅಂಶಗಳವೆ ಅವುಗಳೆಂದರೆ :-

- ಜನಸಂಖ್ಯೆಯ ತೀವ್ರ ಬೆಳವಣಿಗೆ
- ತಲಾದಾಯದಲ್ಲಿ ಹೆಚ್ಚಳ
- ಹಣದ ಪೂರೈಕೆಯಲ್ಲಿ ಹೆಚ್ಚಳ
- ತೀವ್ರ ನಗರೀಕರಣ ಮತ್ತು ಕೃಷಿಭೂಮಿ ಕಡಿಮೆಯಗಿರುವುದು
- ಆಹಾರ ಧಾನ್ಯಗಳ ಕಾನೂನು ವಿರೋಧಿ ಶೇಖರಣೆ ಮತ್ತು ಸಟ್ಟಾ ವ್ಯಾಪಾರ
- ಕೃಷಿ ಉತ್ಪಾದಕತೆಯಲ್ಲಿ ನಿಧಾನ ಏರಿಕೆ
- ಮಾರಾಟ ಮಾಡುವಷ್ಟು ವಿಗುತೆ ಇಲ್ಲದಿರುವುದು.
- ಸ್ವದೇಶಿ ಉತ್ಪಾದನೆಯಲ್ಲಿ ನಿಧಾನಗತಿಯ ಏರಿಕೆ.
- ಕೃಷಿಯ ಮೇಲೆ ಕೈಗಾರಿಕೀಕರಣ ವ್ಯತಿರಿಕ್ತ ಪರಿಣಾಮ.

ಆಹಾರ ಸಮಸ್ಯೆಯ ನಿವಾರಣೋಪಾಯಗಳು

ಭಾರತದ ಸರಕಾರವು ಅಮೆರಿಕಾ,ಕೆನಡಾ, ರಷ್ಯಾ ಬರ್ಮಾ, ಆಸ್ಟ್ರೇಲಿಯಾ ಮೊದಲಾದ ಪರರಾಷ್ಟ್ರಗಳಿಂದ ಆಹಾರ ಧಾನ್ಯಗಳನ್ನು ಆಯಾತ ಮಾಡಿಕೊಳ್ಳುತ್ತಿದೆ. ಆಹಾರ ಧಾನ್ಯಗಳನ್ನು ಯೋಗ್ಯ ರೀತಿಯಿಂದ ವಿತರಣೆ ಮಾಡುಲು ಅವುಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಲು ಹಾಗೂ ಆಹಾರ ಧಾನ್ಯಗಳ ಬೆಲೆಗಳಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಲು ಸರಕಾರವೇ ಸ್ವತಃ ಆಹಾರ ಧಾನ್ಯಗಳನ್ನು ರೈತರಿಂದ ನೇರವಾಗಿ ಸಂಗ್ರಹಿಸುತ್ತಿದೆ. ಆಹಾರ ಧಾನ್ಯಗಳ ಕಳ್ಳ ಸಂಗ್ರಹವನ್ನು ತಡೆಗಟ್ಟಲು ಹಾಗೂ ಆಹಾರ ಧಾನ್ಯಗಳ ಬೆಲೆಗಳನ್ನು ನಿಯಂತ್ರಿಸಲು ಸರಕಾರವು ಭಾರತೀಯ ಸಂರಕ್ಷಣಾ ನಿಯಮಗಳು ಹಾಗೂ ಅವಶ್ಯಕ ಸರಕುಗಳ ಕಾನೂನಿನ ಪ್ರಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಆಹಾರ ಧಾನ್ಯಗಳನ್ನು ಭಾರಿ ಪ್ರಮಾಣದಲ್ಲಿ ಸಂಗ್ರಹಿಸಲು ಝೋನಲ್ ಪದ್ಧತಿಯನ್ನು ಪ್ರಾರಂಭಿಸಲಾಗಿದೆ. ಈ ಪದ್ಧತಿಯ ಮೇರೆಗೆ ಉಳಿತಾಯ ಪ್ರದೇಶ ಅಥವಾ ಉಳಿತಾಯ ಜಿಲ್ಲೆಯಿಂದ ಕೊರತೆಯ ಪ್ರದೇಶ ಅಥವಾ ಕೊರತೆಯ ಜಿಲ್ಲೆಗೆ ಆಹಾರ ಧಾನ್ಯಗಳ ಸರಬರಾಜನ್ನು ತಡೆಹಿಡಿಯಲಾಗಿದೆ.

ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸಾಂಪ್ರದಾಯಿಕ ವಿಧಾನಗಳಿಗೆ ಬದಲಾಗಿ ತಾಂತ್ರಿಕ ವಿಧಾನಗಳನ್ನು ಅನುಸರಿಸುವುದು ಮುಖ್ಯವಾಗಿದೆ ಅಂದರೆ ಶಾಸ್ತ್ರೀಯ ಪದ್ಧತಿಯ ಬೇಸಾಯವನ್ನು ಕೈಗೊಳ್ಳುವುದು, ಸುಧಾರಿಸಿದ ಬೀಜ ಮತ್ತು ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸುವುದು, ಹೆಚ್ಚು ಹೆಚ್ಚು ನೀರಾವರಿಯ ಸೌಲಭ್ಯಗಳನ್ನು ಒದಗಿಸುವುದು, ಕೃಷಿಭೂಮಿಯನ್ನು ಕೃಷಿಗೆ ಮಾತ್ರ ಬಳಸುವುದು ಇತ್ಯಾದಿ.

ಆಹಾರ ಭದ್ರತೆ

ಬೆಳೆಯುತ್ತಿರುವ ಜನಸಂಖ್ಯೆಯ ಬೇಡಿಕೆಯನ್ನು ಪೂರೈಸಲು ದೇಶಿಯ ಆಹಾರ ಉತ್ಪಾದನೆಯನ್ನು ಉತ್ತೇಜಿಸುವುದು. ಭಾರತದಲ್ಲಿ ಆಹಾರ ಭದ್ರತೆಯ ಮೊದಲ ಅಂಗವಾಗಿದೆ ಇದು ಜನಸಂಖ್ಯೆಯ ಬಹುಭಾಗ ಜನರ ಅಪೌಷ್ಠಿಕತೆಯನ್ನು ತಗ್ಗಿಸುವ ಗುರಿಯನ್ನು ಕೂಡ ಹೊಂದಿದೆ. ಆಹಾರ ಧಾನ್ಯಗಳನ್ನು ರೈತರಿಂದ ಸಂಗ್ರಹಣೆ ಮಾಡುವಾಗ ಕನಿಷ್ಠ ಬೆಂಬಲ ಕಲ್ಪಿಸುವುದು ಮತ್ತು ಅದನ್ನು ಸರಿಯಾಗಿ ಸಂಗ್ರಹಿಸಿಡುವುದು ಆಹಾರ ಭದ್ರತೆ ಕ್ರಮದ ಎರಡನೇ ಅಂಗವಾಗಿದೆ ಬಳಲುತ್ತಿರುವ ವರ್ಗದ ಜನಸಂಖ್ಯೆಯ ಹಿತಾಸಕ್ತಿಗಳನ್ನು ರಕ್ಷಿಸಲು ಬಲವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಲ್ಪಿಸುವುದು.

ಭಾರತದಲ್ಲಿ ಆಹಾರ ಭದ್ರತೆಯ ನಾಲ್ಕನೇ ಮತ್ತು ಕೊನೆಯ ಅಂಶವೆಂದರೆ ತಾತ್ಕಾಲಿಕ ಕೊರತೆಗಳು ಮತ್ತು ಬೆಲೆ ಏರಿಕೆಯಂತಹ ಸನ್ನಿವೇಶಗಳನ್ನು ಸಮರ್ಥವಾಗಿ ಎದುರಿಸಲು ಆಹಾರಧಾನ್ಯಗಳ ಬಾಪು ದಾಸ್ತಾನು ಮಾಡುವುದು. ಬಾಪು ದಾಸ್ತಾನು ಎಂದರೆ ಪೂರೈಕೆ ಮತ್ತು ಬೇಡಿಕೆಯಲ್ಲಿ ಉಂಟಾಗುವ ಏರಿಳಿತಗಳನ್ನು ಸರಿಪಡಿಸಲು ಸಾರ್ವಜನಿಕ ಪ್ರಾಧಿಕಾರದವರು ಕೆಲವೊಂದು ಸರಕುಗಳನ್ನು ದಾಸ್ತಾನಿಡುವುದಾಗಿದೆ.

ಕರ್ನಾಟಕದ ಕೃಷಿ ಉತ್ಪಾದಕತೆ ಮತ್ತು ಬೆಳೆವಿಧಾನಗಳು

ಕರ್ನಾಟಕವು ಕೃಷಿ ಪ್ರದಾನ ರಾಜ್ಯ. ಇಲ್ಲಿಯ ಜನರ ಮುಖ್ಯ ಕಸುಬು ಕೃಷಿಯೇ ಆಗಿದೆ. ರಾಜ್ಯದ ಕೃಷಿ ಕ್ಷೇತ್ರ ತೀರಾ ಹಿಂದುಳಿದಿದ್ದು ಅದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಕೃಷಿ ಕ್ಷೇತ್ರ ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಬಹಳ ಗಂಭೀರವಾದ ಸಮಸ್ಯೆ ಎಂದರೆ ಕಡಿಮೆ ಉತ್ಪಾದಕತೆಯ ಸಮಸ್ಯೆಯಾಗಿದೆ.

ಉತ್ಪಾದಕತೆ ಎಂದರೆ ಉತ್ಪಾದನಾ ಸಾಮಾರ್ಥ್ಯವಾಗಿದ್ದು ಇದನ್ನು ಕೃಷಿ ಕ್ಷೇತ್ರದಲ್ಲಿ ಎಕರೆವಾರು ಉತ್ಪಾದಕತೆ ಮತ್ತು ಶ್ರಮವಾರು ಉತ್ಪಾದಕತೆಯ ಆಧಾರದ ಮೇಲೆ ಅಳೆಯಬಹುದಾಗಿದೆ. ರಾಜ್ಯದ ಶೇಕಡ ೬೨ ಕ್ಕೂ ಅಧಿಕ ಜನರು ಜೀವನೋಪಾಯಕ್ಕೆ ಕೃಷಿಯನ್ನೇ ಅವಲಂಬಿಸಿದ್ದರೂ ಫಲಿತಾಂಶ ಮಾತ್ರ ಅಷ್ಟೇನೂ ತೃಪ್ತಿದಾಯಕವಾಗಿಲ್ಲ.

ಕರ್ನಾಟಕದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ೧೯೭೦-೭೧ ರಲ್ಲಿ ೫೭.೪೬ ಲಕ್ಷಟನ್ನುಗಳಿದ್ದಿತು. ಇಂದು ೨೦೦೯-೧೦ ರ ಸಾಲಿನಲ್ಲಿ ೧೦೯.೫೫ ಲಕ್ಷಟನ್‌ಗಳಿಗೆ ಹೆಚ್ಚಿತ್ತು. ಯೋಜನೆ ಹಾಕಿಕೊಂಡ ಉತ್ಪಾದನಾ ಗುರಿಗೂ ಹಾಗೂ ಸಾಧನೆಗೂ ಭಾರೀ ವ್ಯತ್ಯಾಸಗಳು ಕಂಡು ಬರುತ್ತದೆ

ಉದಾ :- ರಾಜ್ಯದಲ್ಲಿ ಪ್ರತಿ ಹೆಕ್ಟೇರ್‌ಗೆ ಉತ್ಪಾದನೆಯಾಗುವ ಆಹಾರ ಧಾನ್ಯಗಳು ಇಳುವರಿ ೧೩.೦ ಕ್ವಿಂಟಲ್ ಆಗಿದ್ದರೆ ಅದು ಪಂಜಾಬ್‌ನಲ್ಲಿ ೪೦.೨ ಕ್ವಿಂಟಾಲ್ ಆಗಿರುತ್ತದೆ.

ಕಡಿಮೆ ಉತ್ಪಾದಕತೆಗೆ ಕಾರಣಗಳು

ಕರ್ನಾಟಕದಲ್ಲಿ ಕೃಷಿ ಹಿಂದುಳಿದಿರಲು ಹಾಗೂ ಕೃಷಿಯ ಉತ್ಪಾದಕತೆ ಮತ್ತು ಉತ್ಪನ್ನ ಕಡಿಮೆ ಇರುವುದಕ್ಕೆ ಹಲವರು ಕಾರಣಗಳವೆ. ಆ ಎಲ್ಲಾ ಕಾರಣಗಳನ್ನು ಒಟ್ಟಾರೆಯಾಗಿ ಸಾಮಾಜಿಕ ನೈಸರ್ಗಿಕ, ತಾಂತ್ರಿಕ, ಸಾಂಸ್ಥಿಕ ಮತ್ತು ಆರ್ಥಿಕ ಕಾರಣಗಳಾಗಿವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಒಟ್ಟಾರೆ ಸಾಮಾಜಿಕ ವಾತಾವರಣವೇ ಕೃಷಿ ಕಸುಬಿಗೆ ಪೂರಕವಾಗಿಲ್ಲ, ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿರುವ ಹಿಂದುಳಿದಿರುವಿಕೆ, ಸ್ಥಗಿತತೆ, ಕರ್ಮಸಿದ್ಧಾಂತ, ಬಿಗುವಿನ ವಾತಾವರಣ, ಗುಂಪು, ಘರ್ಷಣೆಗಳು, ಅಪನಂಬಿಕೆಗಳು ಮುಂತಾದವು ಸಾಮಾಜಿಕ ವಾತಾವರಣವನ್ನೇ ಹಾಳು ಮಾಡಿದ್ದು ಇದು ಒಟ್ಟಾರೆಯಾಗಿ ಕೃಷಿ ಕಾರ್ಯಕ್ಕೆ ಸೂಕ್ತವಾಗಿಲ್ಲ. ಅನಕ್ಷರಸ್ಥೆ, ಅಜ್ಞಾನ ಹಾಗೂ ಮೌಢ್ಯತೆಯಿಂದ ರೈತರು ಹೊಸ ಹೊಸ ಬೇಸಾಯದ ವಿಧಾನಗಳ ಅರಿವಿಲ್ಲ ಹಾಗೂ ಗಾಡಾಂಧಕಾರದಲ್ಲಿರುವ ರೈತರು ಕೃಷಿ

ಬೆಳವಣಿಗೆಗೆ ಶ್ರಮಿಸುವುದಿಲ್ಲ. ಅನಿಶ್ಚಿತ ಮಳೆ, ಪ್ರವಾಹಗಳು, ಬರಗಾಲ ತೀರಾ ಸಾಮಾನ್ಯವಾಗಿದ್ದು ಅವು ಬೆಳೆಯನ್ನು ಹಾಳು ಮಾಡುತ್ತಿವೆ.

ಕೃಷಿ ಉತ್ಪಾದನೆಯಲ್ಲಿ ನಿಸರ್ಗದ ಪ್ರಭಾವ ಅಧಿಕವಾಗಿರುವುದರಿಂದ ಕೃಷಿ ಉತ್ಪನ್ನ ಏರಿಳಿತಗಳಿಗೆ ಒಳಪಡುವುದು. ರೈತರು ಬೆಳದ ಆಹಾರ ಮತ್ತು ಇತರೆ ಕೃಷಿ ಸಾಮಾಗ್ರಿಗಳನ್ನು ಉತ್ತಮ ಮಾರಕಟ್ಟೆಗೆ ಸಾಗಿಸಲು ಬೇಕಾದ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳು ರಾಜ್ಯದಲ್ಲಿ ಸಮರ್ಪಕವಾಗಿಲ್ಲದ ಕಾರಣ ರೈತರು ತಮ್ಮ ಬೆಳೆಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಹಾವಳಿಯಲ್ಲಿ ಕಡಿಮೆ ಬೆಲೆಯಲ್ಲಿಯೇ ಮಾರಬೇಕಾದ ಪರಿಸ್ಥಿತಿಯಿದೆ. ಹೆಚ್ಚುತ್ತಿರುವ ಕೈಗಾರಿಕೀಕರಣ, ನಗರೀಕರಣದಿಂದಾಗಿ ಕೃಷಿ ಭೂಮಿ ಹಿಡುವಳಿ ಸಣ್ಣದಾಗಿದೆ. ಇದು ಕಡಿಮೆ ಉತ್ಪಾದನೆಗೆ ಮುಖ್ಯ ಕಾರಣವಾಗಿದೆ.

ಉತ್ಪಾದಕತೆಯನ್ನು ಸುಧಾರಿಸುವ ಕ್ರಮಗಳು

ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣಗೊಂಡಿರುವುದು ಸ್ಪಷ್ಟ ರಾಜ್ಯದ ಕೃಷಿ ಕ್ಷೇತ್ರದಲ್ಲಿನ ಕಡಿಮೆ ಉತ್ಪಾದಕತೆಯ ಸಮಸ್ಯೆಯನ್ನು ನಿವಾರಿಸಬೇಕೆಂದರೆ ಭೂ ಸುಧಾರಣೆ ಕಾರ್ಯಕ್ರಮವನ್ನು ಇನಷ್ಟು ಕಟ್ಟುನಿಟ್ಟಾಗಿ ಅನುಷ್ಟಾನಗೊಳಿಸಿ ರಾಜ್ಯದಲ್ಲಿ ಲಭ್ಯವಿರುವ ಎಲ್ಲಾ ನೀರಾವರಿ ಮೂಲಗಳನ್ನು ಬಳಸಿಕೊಳ್ಳಬೇಕು. ರಸಗೊಬ್ಬರಗಳ ಬಳಕೆ ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸುವುದರಿಂದ ಸರ್ಕಾರ ರಸಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ವಿತರಿಸಿ ತಳಿಯ ಬೀಜಗಳು ಮತ್ತು ಹೆಚ್ಚು ಉತ್ಪನ್ನ ನೀಡುವು ಬೀಜಗಳನ್ನು ರೈತರಿಗೆ ಒದಗಿಸಬೇಕು.

ಕೈಗಾರಿಕಾ ಬೆಳವಣಿಗೆಯಿಂದ ಅಭಿವೃದ್ಧಿ ಸಾಧ್ಯ ಕೃಷಿ ಯಂತ್ರಗಳು ಉಪಕರಣಗಳು, ರಸಗೊಬ್ಬರಗಳು ಕ್ರಿಮಿನಾಶಕಗಳು ಮುಂತಾದವುಗಳನ್ನು ಕೈಗಾರಿಕೆಗಳು ಪೂರೈಸುತ್ತವೆ. ಕೃಷಿ ವಲಯದಲ್ಲಿ ಹೆಚ್ಚುವರಿ ಕಾರ್ಮಿಕರನ್ನು ಸಮರ್ಥವಾಗಿ ಬಳಸಿಕೊಳ್ಳಲು ಮತ್ತು ಕೃಷಿಕರ ಆದಾಯವನ್ನು ಹೆಚ್ಚಿಸಲು ಕೈಗಾರಿಕೆಗಳು ಸಹಕರಿಸುತ್ತವೆ. ನಗರೀಕರಣ ಮತ್ತು ಕೈಗಾರಿಕೆಗಳಿಗೆ ಕೃಷಿಯೇತರ ಭೂಮಿಯನ್ನು ಉಪಯೋಗಿಸುವುದು.

ಬೆಳೆ ವಿಧಾನಗಳು

ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಒಂದೇ ರೀತಿಯ ಹವಾಗುಣ ಮತ್ತು ಮಣ್ಣಿನ ವಿಧಗಳಿಲ್ಲ. ಆಯಾ ಪ್ರದೇಶದಲ್ಲಿ ದೊರಕುವ ಮಣ್ಣು ಅದರ ಫಲವತ್ತತೆ, ಅಲ್ಲಿ ಬೀಳುವ ಮಳೆ ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಬೆಳೆಯಬೇಕಾದ ಬೆಳೆಯನ್ನು ನಿರ್ಧರಿಸಲಾಗುತ್ತದೆ. ರಾಜ್ಯದಲ್ಲಿ ಬೆಳೆಯುವ ಬೆಳೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳು ಆಹಾರ ಬೆಳೆ ಹಾಗೂ ವಾಣಿಜ್ಯ ಬೇಳೆ ಆಹಾರದ ಬೆಳೆಗಳಲ್ಲಿ ಏಕದಳ ಮತ್ತು ದ್ವಿದಳ ಧಾನ್ಯಗಳು ಎಂದು ಎರಡು ವಿಧಗಳಿವೆ. ಅಕ್ಕಿ ರಾಗಿ, ಜೋಳ ಗೋಧಿ, ಸಜ್ಜೆ, ನವಣೆ ಮುಂತಾದವುಗಳು ಪ್ರಮುಖವಾದ ಏಕದಳ ಧಾನ್ಯಗಳಾಗಿವೆ. ತೊಗರಿ,ಕಡಲೆ, ಉದ್ದು ಅವರೆ ಮೊದಲಾದವುಗಳೂ ಪ್ರಮುಖವಾದ ದ್ವಿದಳ ಧಾನ್ಯಗಳಾಗಿವೆ.

ಭಾರತದ ಪ್ರಮುಖ ಬೆಳೆಗಳು

ಭಾರತದ ಬೆಳೆಗಳನ್ನು ನಾವು ಆಹಾರದ ಬೆಳೆಗಳು ಮತ್ತು ಆಹಾರೇತರ ಬೆಳೆಗಳೆಂದು ವಿಂಗಡಿಸುತ್ತೇವೆ.

ಭತ್ತ (ಅಕ್ಕಿ) : ಅಕ್ಕಿಯು ಭಾರತದ ಮುಖ್ಯ ಆಹಾರ ಬೆಳೆಯಾಗಿದ್ದು ಭತ್ತದ ಬೆಳೆಯಲ್ಲಿ ಭಾರತ ಜಗತ್ತಿನಲ್ಲಿ ಎರಡನೇ ಸ್ಥಾನದಲ್ಲಿದೆ. ಜಗತ್ತಿನ ಒಟ್ಟು ಭತ್ತದ ಉತ್ಪಾದನೆಯಲ್ಲಿ ಭಾರತದ ಪಾಲು ಶೇಕಡ ೨೧. ಭಾರತದ ಉಷ್ಣ ಹವಾಮಾನ, ಫಲಭರಿತ ಮೆಕ್ಕಲು ಮಣ್ಣು, ನದೀ ಕಣಿವೆಗಳು, ಕರಾವಳಿ ಬಯಲು ಮತ್ತು ಶ್ರಮದಿಂದಾಗಿ ಭಾರತ ಅಕ್ಕಿ ಬೆಳೆಯುವ ಅತ್ಯಂತ ಪ್ರಮುಖ ದೇಶಗಳಲ್ಲಿ ಒಂದೆನಿಸಿದೆ.

ಅಕ್ಕಿಯನ್ನು ಭಾರತದ ಬಹು ಭಾಗಗಳಲ್ಲಿ ಬೆಳೆಯಲಾಗುತ್ತದೆ. ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ, ತಮೀಳು ನಾಡು, ಬಿಹಾರ ಒರಿಸ್ಸಾ, ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶ, ಭತ್ತ ಬೆಳೆಯುವ ಪ್ರಮುಖ ರಾಜ್ಯಗಳು, ಕರ್ನಾಟಕ, ಮಹಾರಾಷ್ಟ್ರ ಪಂಜಾಬು ಮತ್ತು ಅಸ್ಸಾಂಗಳಲ್ಲೂ ಭತ್ತ ಬೆಳೆಯಲಾಗುತ್ತದೆ.

ಗೋಧಿ:-

ಉತ್ತರ ಭಾರತೀಯರ ಮುಖ್ಯ ಆಹಾರವಾದ ಗೋಧಿಯು ಅಕ್ಕಿಯ ನಂತರದ ಸ್ಥಾನವನ್ನು ಪಡೆದಿದ್ದು, ಈ ಬೆಳೆಗಳಲ್ಲಿ ಭಾರತ ಜಗತ್ತಿನಲ್ಲಿ ನಾಲ್ಕನೇ ಸ್ಥಾನವನ್ನು ಪಡೆದಿದೆ. ಉತ್ಪಾದನೆಯಲ್ಲಿ ಗೋಧಿಯ ಪಾಲು ೨೪ ರಷ್ಟದ್ದು ಭಾರತದಲ್ಲಿ ಉತ್ತರ ಪ್ರದೇಶ ಪಂಜಾಬ್ ಮಧ್ಯ ಪ್ರದೇಶ, ಹರಿಯಾನ, ಬಿಹಾರ ಮತ್ತು ರಾಜಸ್ತಾನಗಳು ಗೋದಿ ಬೆಳೆಯುವ ರಾಜ್ಯಗಗಳು ಗುಜರಾತ್ ಮಹಾರಾಷ್ಟ್ರ, ಹಿಮಾಚಲ ಪ್ರದೇಶ ಮತ್ತು ಜಮ್ಮು-ಕಾಶ್ಮೀರಗಳಲೂ ಗೋದಿ ಬೆಳೆಯಲಾಗುತ್ತದೆ.

ಭಾರತಕ್ಕೆ ಅಕ್ಕಿಯ ಕೊರತೆ ಸಂಭವಿಸಿದಾಗ ಬರ್ಮಾ ಮತ್ತು ಥ್ಯಾಲೆಂಡ್‌ಗಳಿಂದ ತರಿಸಿಕೊಳ್ಳಲಾಗುತ್ತದೆ. ಗೋಧಿಯ ಕೊರತೆ ಸಂಭವಿಸಿದರೆ ಅಮೆರಿಕಾ, ಕೆನಡಾ, ರಷ್ಯಾ ಮತ್ತು ಆಸ್ಟ್ರೇಲಿಯಾಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ.

ಮೆಕ್ಕೆ ಜೋಳ :-

ಮೆಕ್ಕೆ ಜೋಳ ಬಡವರ ಆಹಾರವಾಗಿದ್ದು ಉತ್ಪಾದನೆಯಾಗುವ ಒಟ್ಟು ಭೂಮಿಯಲ್ಲಿ ಶೇಕಡ ೫ ರಷ್ಟು ಭಾಗ ಮೆಕ್ಕೆ ಜೋಳದ ಪಾಲಗಿದ್ದು ಭಾರತವು ಪ್ರಪಂಚದ ಮೆಕ್ಕೆಜೋಳ ಉತ್ಪಾದಕ ರಾಷ್ಟ್ರಗಳ ಸಾಲಿನಲ್ಲಿ ಪ್ರಮುಖ ಸ್ಥಾನ ಪಡೆಯುತ್ತದೆ. ಸಾಧಾರಣವಾಗಿ ಮೆಕ್ಕೆಜೋಳ (ಮುಸುಕಿನ (ಜೋಳ) ವನ್ನು ಭಾರತದಾದ್ಯಂತ ಬೆಳೆಯಲಾಗುತ್ತದೆ.

ಜೋಳ,ಸಜ್ಜೆ, ರಾಗಿ :-

ಸಜ್ಜೆ ರಾಜಸ್ತಾನ ಮತ್ತು ಗುಜರಾತ್ ಬಡಜನರ ಮುಖ್ಯ ಆಹಾರವಾಗಿದು, ಇದರ ಒಟ್ಟು ಧಾನ್ಯಗಳ ಉತ್ಪಾದನೆಯ ಪಾಲು ಶೇಕಡ ೧೦ ರಷ್ಟು ಇದನ್ನು ಮಹಾರಾಷ್ಟ್ರ, ಕರ್ನಾಟಕ, ಮಧ್ಯಪ್ರದೇಶ, ಗುಜರಾತ್ ರಾಜಸ್ತಾನ, ಉತ್ತರ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ರಾಗಿ ಕರ್ನಾಟಕದ ಬಹುತೇಖ ಜನರ ಮುಖ್ಯ ಆಹಾರವಾಗಿದ್ದು ಇದನ್ನು ಕರ್ನಾಟಕ ತಮಿಳುನಾಡು ಮತ್ತು ಆಂಧ್ರ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಜೋಳ ಸಜ್ಜೆ, ರಾಗಿ ಇವುಗಳನ್ನು ಸುಮಾರು ೨೭ ದಶಲಕ್ಷ ಹೆಕ್ಟೇರು ಭೂಮಿಯಲ್ಲಿ ಬೆಳೆಯಲಾಗುತ್ತಿದೆ.

ಆಹಾರೇತರ ಬೆಳೆಗಳು (ವಾಣಿಜ್ಯ ಬೆಳೆ)

ಆಹಾರೇತರ ಬೆಳೆಗಳನ್ನು ವಾಣಿಜ್ಯ ಬೆಳೆಗಳೆಂದೂ ಕರೆಯುತ್ತಾರೆ. ಕಬ್ಬು ಹತ್ತಿ, ಹೊಗೆ ಸೊಪ್ಪು, ಶುಂಠಿ, ಎಣ್ಣೆಕಾಳುಗಳು ಮುಂತಾದುವು ಪ್ರಮುಖವಾದ ಆಹಾರೇತರ ಬೆಳೆಗಲಾಗಿವೆ. ಕಾಫಿ ಚಹ, ತೆಂಗು, ಅಡಿಕೆ, ಕಿತ್ತಳೆ ಮಾವು, ಬಾಳೆ,ದ್ರಾಕ್ಷಿ, ಏಲಕ್ಕಿ ಗೋಡಂಬಿ ತಂಬಾಕು, ಕಬ್ಬು ಬೇಳೆಯ ದಾನ್ಯಗಳು ಎಣ್ಣೆಯ ಬೀಜಗಳು ಮುಂತಾದವುಗಳು ವಾಣಿಜ್ಯ ಬೆಳೆಗಳೆಂದು ವಿಂಗಡಿಸಬಹುದು.ಬೆಳೆಯ ಧಾನ್ಯಗಳಲ್ಲಿ ತೊಗರಿ, ಕಡಲೆ, ಉದ್ದು ಹುರುಳಿ ಮುಂತಾದವು ದ್ವಿದಳ ಧಾನ್ಯಗಳು ಭಾರತೀಯರ ಆಹಾರ ಪದಾರ್ಥಗಳಲ್ಲಿ ಮುಖ್ಯ ಸ್ಥಾನ ಪಡೆದಿದೆ. ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಬಿಹಾರಗಳು ಬೇಳೆಯ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವ ರಾಜ್ಯಗಳಾಗಿವೆ. ಕಬ್ಬು ಉತ್ಪಾದನೆಯಲ್ಲಿ ಭಾರತದ ಪಾಲು ಶೇ ೨೩ ಇದನ್ನು ಸಕ್ಕರೆ ಮತ್ತು ಬೆಲ್ಲದ ತಯಾರಿಕೆ ಹೆಚ್ಚು ವ್ಯಯವಾಗುವುದಾದರೂ ಸಕ್ಕರೆ ಉತ್ಪಾದನೆಯಲ್ಲಿ ನಮಗೆ ಪ್ರಥಮ ಸ್ಥಾನ ಮಾತ್ರದಕ್ಕಿದೆ. ಭಾರತದಲ್ಲಿ ಕಬ್ಬು ಉತ್ಪಾದಿಸುವ ಪ್ರಮುಖ ರಾಜ್ಯಗಳು ಉತ್ತರ ಪ್ರದೇಶ, ಬಿಹಾರ, ಪಂಜಾಬ್, ಹರಿಯಾಣ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು ಕರ್ನಾಟಕ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪ್ರದೇಶದಲ್ಲೂ ಕಬ್ಬು ಬೆಳೆಯಲಾಗುತ್ತಾದೆ.

ಆಹಾರ ಬೆಳೆ ಧಾನ್ಯಗಳಲ್ಲಿ ಪ್ರಮುಖವಾಗಿ ತೊಗರಿ, ಉದ್ದು, ಹುರುಳಿಗಳಂತಹ ದ್ವಿದಳ ಧಾನ್ಯಗಳನ್ನು ವಿದೇಶಗಳಿಗೆ ರಫ್ತುಮಾಡಿ ಆಯಾತವಾಗುವ ವಸ್ತುಗಳಿಗೆ ಪ್ರತಿಫಲವಾಗಿ ವ್ಯಾಪಾರ ವ್ಯವಹಾರ ಮಾಡಲಾಗುತ್ತಿದೆ. ವಾಣಿಜ್ಯ ಉದ್ದೇಶಿತ ತಂಬಾಕು, ರೇಶ್ಮೆ, ಕಬ್ಬು, ಎಣ್ಣೆ ಬೀಜಗಳು, ಕಾಫಿ ಚಹಾ ಮುಂತಾದವು ನಮ್ಮ ದೇಶದಿಂದ ಇತರ ದೇಶಗಳಿಗೆ ಸಾಗಾಟವಾಗುತ್ತಿದೆ ಮತ್ತು ನಮ್ಮ ದೇಶಕ್ಕೆ ಆಹಾರದ ಮತ್ತು ಇತರ ವಸ್ತುಗಳ ಬೇಡಿಕೆಯನ್ನು ಈ ವಸ್ತು ವಿನಿಮಯದ ಮೂಲಕ ಸಮತೋಲನ ಮಾಡಲಾಗುತ್ತಿದೆ. ಇದರಿಂದ ಕೃಷಿ ಮತ್ತು ಔದ್ಯಮೀಕರಣ ಒಟ್ಟಾಗಿ ಸಾಗಿ ಕೃಷಿ ಚಟುವಟಿಕೆಗಳಿಗೆ ಪೂರಕ ವಾತಾವರಣ ಸೃಷ್ಟಿಯಾಗಬೇಕಿದೆ. ಮುಖ್ಯವಾಗಿ ಆಹಾರ ಬೆಳೆಗಳು ದೇಶದ ಆಹಾರ ಭದ್ರತೆಯನ್ನು ಸಾಧಿಸಲು ನೆರವಾಗುತ್ತದೆ.

ಅಧ್ಯಾಯ –೩ : ಭಾರತದ ಅರ್ಥಿಕತೆಯಲ್ಲಿ ಕೈಗಾರಿಕೆಗಳ ಮಹತ್ವ

- ಸ್ವಾತಂತ್ರ್ಯ ಸಂದರ್ಭದಲ್ಲಿ ಕೈಗಾರಿಕೆಗಳ ಸ್ಥಿತಿ
- ಜಾಗತೀಕರಣ ಮತ್ತು ಕೃಷಿ
- ಭಾರತೀಯ ಕೃಷಿಯ ಈಗಿನ ಸ್ಥಿತಿ
- ಪರಿಹಾರ ಕ್ರಮಗಳು
- ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಳಕೆ
- ಕೃಷಿಯಲ್ಲಿ ನಗರೀಕರಣ
- ಮಂಗಳೂರಿನಲ್ಲಿ ಕೈಗಾರಿಕಾಭಿವೃದ್ಧಿ.
- ಕೃಷಿ ಕೈಗಾರಿಕೆಯ ಧಕ್ಕೆ ಹಾಗೂ ಒಟ್ಟು ಪರಿಣಾಮ.
- ಕೈಗಾರಿಕೀಕರಣದಲ್ಲಿ ಕೃಷಿಯ ಮಹತ್ವ
- ಕೃಷಿಯಲ್ಲಿ ಕೈಗಾರಿಕೆಯ ಪರಿಣಾಮ
- ಅಧ್ಯಯನ ಸ್ಥಳದ ಪರಿಚಯ

ಅಧ್ಯಾಯ –೩ : ಭಾರತದ ಅರ್ಥಿಕತೆಯಲ್ಲಿ ಕೈಗಾರಿಕೆಗಳ ಮಹತ್ವ

ಅರ್ಥವ್ಯವಸ್ಥೆಯನ್ನು ಪ್ರಗತಿಪಥದತ್ತ ಒಯ್ಯುವುದರಲ್ಲಿ ಕೈಗಾರಿಕೆಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ. ಕೈಗಾರಿಕೆಗಳಿಲ್ಲದೆ ಆರ್ಥಿಕಾಭಿವೃದ್ಧಿ ಸಾಧಿಸಲು ಸಾಧ್ಯವೇ ಇಲ್ಲ. ವಾಸ್ತವವಾಗಿ ಆರ್ಥಿಕಾಭಿವೃದ್ಧಿ ಹೊಂದಿದ ಅಥವಾ ಮುಂದುವರಿದ ರಾಷ್ಟ್ರವೆಂದು ನಾವು ಕರೆಯುವುದು. ಕೈಗಾರಿಕೀಕರಣಗೊಂಡ ದೇಶಗಳನ್ನು ಮಾತ್ರ, ಭಾರತವು ೧೯೫೩ ರಿಂದ ಕೈಗಾರಿಕೀಕರಣಗೊಳ್ಳಲು ಇನ್ನಿಲ್ಲದ ಯತ್ನಗಳನ್ನು ಮಾಡಿ ಈಗ ವಿಶ್ವದ ೨೦ ಕೈಗಾರಿಕಾಭಿವೃದ್ಧಿ ರಾಷ್ಟ್ರಗಳಲ್ಲಿ ಒಂದೆನಿಸಿದೆ.

ಕೈಗಾರಿಕೆಗಳು ಒಂದು ರಾಷ್ಟ್ರದ ಕಣ್ಣಿದ್ದ ಹಾಗೆ. ಕೈಗಾರಿಕಾಭಿವೃದ್ಧಿಯಿಲ್ಲದ ಯಾವುದೇ ರಾಷ್ಟ್ರದ ಆರ್ಥಿಕಾಭಿವೃದ್ಧಿಯನ್ನು ಊಹಿಸುವುದು ಕಷ್ಟ, ಅದರಲ್ಲೂ ಕೃಷಿ ಪ್ರಧಾನ ರಾಷ್ಟ್ರವಾದ ಭಾರತಕ್ಕೆ ಕೈಗಾರಿಕೆಗಳು ಬೇಕೇ ಬೇಕು. ಒಂದು ದೇಶದ ಭೌತಿಕ ಶ್ರೀಮಂತಿಕೆ ಮತ್ತು ಕೈಗಾರಿಕಾಭಿವೃದ್ಧಿ ಜೊತೆ ಜೊತೆಯಲೇ ಸಾಗುತ್ತವೆಂಬುದು ನೈಜ ಸಂಗತಿಯಾಗಿದೆ. "ಕೈಗಾರಿಕೀಕರಣ ಇಲ್ಲವೇ ನಾಶ" ಎಂದು ಭಾರತರತ್ನ ಎಂ. ವಿಶ್ವೇಶ್ವರಯ್ಯ ಹೇಳಿರುವ ಮಾತು ಸತ್ಯವಾದ ಮಾತಾಗಿದೆ.

ಮಹತ್ವ :-

ಕೈಗಾರಿಕೆಗಳ ಸ್ಥಾಪನೆ ಮತ್ತು ಬೆಳವಣಿಗೆಯಿಂದ ಸಾವಿರಾರು ಜನರಿಗೆ ಉದ್ಯೋಗ ಲಭ್ಯವಾಗುತ್ತಿದೆ. ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ದೇಶದ ಹಿಂದುಳಿದಿರುವಿಕೆಯ ಕಾರಣದಿಂದಾಗಿ ದೇಶದಲ್ಲಿ ನಿರುದ್ಯೋಗ ಬೃಹದಾಕಾರವಾಗಿ ಬೆಳೆಯುತ್ತಿದೆ. ಕೈಗಾರಿಕೆಗಳಲ್ಲಿ ವ್ಯಾಪಕ ಪ್ರಮಾಣದಲ್ಲಿ ಯಂತ್ರೋಪಕರಣಗಳು, ಸಲಕರಣೆಗಳು ಮುಂತಾದುದನ್ನು ಬಳಸಿ ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಮಾಡಲಾಗುವುದು. ಕೈಗಾರಿಕೆಗಳ ಬೆಳವಣಿಗೆ ಮತ್ತು ಅಭಿವೃದ್ಧಿಯು ಹಾಗೂ ತ್ವರಿತ ಆರ್ಥಿಕಾಭಿವೃದ್ಧಿಯಿಂದ ದೇಶದ ರಾಷ್ಟ್ರೀಯ ಆದಾಯ ಮತ್ತು ತಲಾದಾಯಗಳು ಹೆಚ್ಚುವುದು.

ಕೈಗಾರಿಕಾ ಬೆಳವಣಿಗೆ ಕೃಷಿ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ. ಕೃಷಿಯಲ್ಲಿ ಬಳಸಲಾಗುವ ಯಂತ್ರಗಳು, ಉಪಕರಣಗಳು, ರಸಗೊಬ್ಬರಗಳು, ಕ್ರಿಮಿನಾಶಕಗಳು ಮುಂತಾದುವು ಕೈಗಾರಿಕಾ ಬೆಳವಣಿಗೆಯಿಂದ ಲಭ್ಯವಾಗುವುದು.

ಭಾರತದಲ್ಲಿ ಕೃಷಿಯ ಆಧುನೀಕರಣವಾಗಬೇಕೆಂದರೆ ಕೈಗಾರಿಕಾ ಬೆಳವಣಿಗೆ ಆಗಲೇಬೇಕಾಗುತ್ತದೆ. ಕೃಷಿ ಕ್ಷೇತ್ರದಲ್ಲಿರುವ ಹೆಚ್ಚುವರಿ ಕಾರ್ಮಿಕರನ್ನು ಸಮರ್ಥವಾಗಿ ಬಳಸಿಕೊಳ್ಳಬೇಕೆಂದರೆ ಕೈಗಾರಿಕೆಗಳು ಅವಶ್ಯಕ. ಭಾರತದಲ್ಲಿ ಹಲವಾರು ರೀತಿಯ ಸಂಪನ್ಮೂಲಗಳು ಹೇರಳವಾಗಿ ಲಭ್ಯವಿದೆ. ಈ ಕೈಗಾರಿಕೆಗಳ ಅಭಿವೃದ್ಧಿಯಿಂದ ಸಂಪನ್ಮೂಲಗಳನ್ನು (ನೈಸರ್ಗಿಕ ಮತ್ತು ಮಾನವ) ದಕ್ಷವಾಗಿ, ಸಮರ್ಥವಾಗಿ ಬಳಸಿಕೊಳ್ಳಬಹುದು.

ಕೈಗಾರಿಕೆಗಳ ಬೆಳವಣಿಗೆಯಿಂದ ಯಂತ್ರೋಪಕರಣಗಳ, ಸಲಕರಣೆ, ಉಪಕರಣಗಳನ್ನು ತಯಾರಿಸಿ ಉಪಯೋಗಿಸುವುದರಿಂದ ಶ್ರಮ ವಿಭಜನೆಯ ಅಳವಡಿಕೆ, ಹಿತದಾಯಕ ಮತ್ತು ಸರಕುಗಳ ಲಭ್ಯತೆ ಮುಂತಾದ ಅಂಶಗಳು ಉತ್ಪಾದನಾ ಸಾಮರ್ಥ್ಯವನ್ನು ವೃದ್ಧಿಸುತ್ತದೆ.

ವಿದೇಶಿ ವ್ಯಾಪಾರವು ಸಾಕಷ್ಟು ಆದಾಯ ತರುವುದರಿಂದ ಕೈಗಾರಿಕಾಭಿವೃದ್ಧಿಯನ್ನು ಸಾಧಿಸಿ ಹೆಚ್ಚು ಹೆಚ್ಚು ತಯಾರಿಕಾ ಸರಕುಗಳನ್ನು ರಫ್ತು ಮಾಡಿದರೆ ಭಾರತದ ವಿದೇಶಿ ವಿನಿಮಯಗಳಕೆ ಹೆಚ್ಚುವುದು ಹಾಗೂ ನಿರಂತರವಾಗಿ ಎದುರಿಸುತ್ತಿರುವ ಪಾವತಿ ಶೇಷ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ. ಕೈಗಾರಿಕೆಗಳನ್ನು ಸ್ಥಾಪಿಸಿ ಹಲವಾರು ಆಧುನಿಕ ರೀತಿಯ ಯುದ್ಧೋಪಕರಣಗಳಾದ ಮೆಷಿನ್‌ಗನ್, ಟ್ಯಾಂಕರುಗಳು, ಆಧುನಿಕ ಬಂದೂಕುಗಳು, ಅಣುಬಾಂಬುಗಳು, ಯುದ್ಧ ವಿಮಾನ, ಸಾರಿಗೆ ಪರಿಕರಗಳನ್ನು ತಯಾರಿಸುವುದರಿಂದ ಇದರ ಪೂರೈಕೆಗೆ ವಿದೇಶಿಯರನ್ನು ಅವಲಂಬಿಸುವುದು ಹಾಗೂ ಇದರಿಂದ ಆಗುವ ಅಪಾಯವನ್ನು ತಡೆಗಟ್ಟಬಹುದು.

ಕೈಗಾರಿಕೆಗಳು ನಗರ ಮತ್ತು ಪಟ್ಟಣಗಳ ಬೆಳವಣಿಗೆಗೆ ಕಾರಣವಾಗುವುದಲ್ಲದೆ ದೇಶದಲ್ಲಿನ ಜನರ ಮನೋಭಾವನೆಯಲ್ಲಿ ಬದಲಾವಣೆಯನ್ನು ತರುವುದು ಹಾಗೂ ಜಾತೀಯತೆ ಮತ್ತು ಕಂದಾಚಾರಗಳನ್ನು ಕೈಬಿಟ್ಟು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುವುದರಲ್ಲಿ ಸಹಾಯಕವೆನಿಸುತ್ತದೆ.

ಭಾರತದಲ್ಲಿ ಸಾರ್ವಜನಿಕ ಮತ್ತು ಖಾಸಗಿ ರಂಗಗಳೆರಡೂ ಅಸ್ತಿತ್ವದಲ್ಲಿದ್ದು, ಬಡತನ, ನಿರುದ್ಯೋಗ, ಆದಾಯ ಅಸಮಾನತೆ ಸಮ್ಯಸೆಗಳನ್ನು ನಿವಾರಿಸಲು ಸರ್ಕಾರ ವೆಚ್ಚ ಮಾಡಬೇಕೆಂದರೆ ಆದಾಯವು ಸಾಕಷ್ಟು ಪ್ರಮಾಣದಲ್ಲಿ ಹರಿದು ಬರಬೇಕಾಗುತ್ತದೆ. ಸರ್ಕಾರಕ್ಕೆ ಪ್ರಮುಖ ಆದಾಯದ ಮೂಲ ತೆರಿಗೆಯಾಗಿರುವುದರಿಂದ ಇದನ್ನು ವಿಧಿಸಬೇಕೆಂದರೆ ಜನರ ತೆರಿಗೆ ಕಟ್ಟುವ ಸಾಮರ್ಥ್ಯ ಹೆಚ್ಚಿರಬೇಕು. ಕೈಗಾರಿಕಾ ಬೆಳವಣಿಗೆಯು ದೇಶದಲ್ಲಿ ರಾಷ್ಟ್ರಾದಾಯ ಮತ್ತು ತಲಾದಾಯವನ್ನು ವೃದ್ಧಿಸಿ ಜನರ ತೆರಿಗೆ ಕಟ್ಟುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ಹೀಗೆ ಔದ್ಯೋಗಿಕರಣವು ಭಾರತದ ಆರ್ಥಿಕ ವ್ಯವಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಅತ್ಯಾವಶ್ಯಕ. ದೇಶ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಆದಾಯ, ಅಸಮಾನತೆ, ಪ್ರಾದೇಶಿಕ ಅಸಮತೋಲನ, ತಾಂತ್ರಿಕ ಹಿಂದುಳಿದಿರುವಿಕೆ ಮುಂತಾದ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಔದ್ಯೋಗಿಕರಣದಿಂದ ಸಾಧ್ಯ.

ಸ್ವಾತಂತ್ರ್ಯ ಸಂದರ್ಭದಲ್ಲಿ ಕೈಗಾರಿಕೆಗಳ ಸ್ಥಿತಿ

ಭಾರತಕ್ಕೆ ಬ್ರಿಟಿಷರು ಕಾಲಿಡುವುದಕ್ಕಿಂತ ಮೊದಲು ಭಾರತ ಅನೇಕ ಯುರೋಪಿನ ರಾಷ್ಟ್ರಗಳಿಗಿಂತ ಕೈಗಾರಿಕೆಯ ಬೆಳವಣಿಗೆಯಲ್ಲಿ ಮುಂದಿತ್ತು. ಆದರೆ ಬ್ರಿಟಿಷರು ಭಾರತಕ್ಕೆ ಕಾಲಿಡುತ್ತಲೇ ಭಾರತದ ಕೈಗಾರಿಕಾ ತಳಪಾಯವನ್ನು ನಾಶಗೊಳಿಸಿದರು. ಅವರ ಉದ್ದೇಶವೇನೆಂದರೆ ಭಾರತವನ್ನು ಸಿದ್ಧಪಡಿಸಿದ ವಸ್ತುಗಳಿಗೆ ಮಾರುಕಟ್ಟೆಯಾಗಿ ಬಳಸಿಕೊಳ್ಳುವುದಾಗಿದ್ದು, ಭಾರತ ಕೈಗಾರಿಕಾ ರಂಗದಲ್ಲಿ ಬೆಳವಣಿಗೆ ಸಾಧಿಸುವುದು ಬ್ರಿಟಿಷರಿಗೆ ಬೇಕಿರಲೂ ಇಲ್ಲ. ಇದರಿಂದಾಗಿ ಭಾರತ ಸ್ವಾತಂತ್ರ್ಯ ಪಡೆಯುವ ವೇಳೆಗೆ ಬಲಹೀನ ಕೈಗಾರಿಕಾ ತಳಪಾಯವನ್ನು ಹೊಂದಿದ ಆರ್ಥಿಕ ವ್ಯವಸ್ಥೆಯನ್ನು ಬಳುವಳಿಯಾಗಿ ಪಡೆಯಿತು. ಭಾರತ ರಾಜಕೀಯವಾಗಿ ಸ್ವಾತಂತ್ರ್ಯ ಪಡೆಯುವ ವೇಳೆಗೆ ದೇಶದ ಕೈಗಾರಿಕಾ ರಂಗ ಈ ಕೆಳಗಿನ ಗುಣಲಕ್ಷಣಗಳನ್ನು ಹೊಂದಿತ್ತು.

ಸ್ವಾತಂತ್ರ್ಯ ಬರುವ ವೇಳೆಗೆ ಭಾರತದ ರಾಷ್ಟ್ರೀಯ ಆದಾಯಕ್ಕೆ ಕೈಗಾರಿಕಾ ಕ್ಷೇತ್ರದ ಕೊಡುಗೆ ತುಂಬಾ ಮಿತವಾಗಿತ್ತು. ಆಗ ಕೃಷಿ ಕ್ಷೇತ್ರದ ಕೊಡುಗೆ ಶೇಕಡಾ ೫೦ ಕ್ಕಿಂತಲೂ ಹೆಚ್ಚಿದರೆ ಕೈಗಾರಿಕಾ ಕ್ಷೇತ್ರದ ಕೊಡುಗೆ ಶೇಕಡಾ ೧೫ ಕ್ಕಿಂತಲೂ ಕಡಿಮೆ ಇತ್ತು. ಇದಕ್ಕೆ ಪ್ರಮುಖ ಕಾರಣವೆಂದರೆ ಸ್ವಾತಂತ್ರ್ಯ ಸಂಧರ್ಭದಲ್ಲಿ ಕೈಗಾರಿಕೆ ತುಂಬಾ ಹಿಂದುಳಿದಿತ್ತು. ಬ್ರಿಟಿಷ್ ಸರ್ಕಾರ ಅನುಭೋಗಿ ಸರಕುಗಳನ್ನು ಉತ್ಪಾದಿಸುವ ಕೈಗಾರಿಕೆಗಳಿಗೆ ವಿಶೇಷ ಪ್ರಾಶಸ್ತ್ಯ ನೀಡಿ ಬಂಡವಾಳ ಸರಕುಗಳನ್ನು ಉತ್ಪಾದಿಸುವ ಕೈಗಾರಿಕೆಗಳನ್ನು ಉಪೇಕ್ಷಿಸಿದುದ್ದರಿಂದ ಅನುಭೋಗಿ ಸರಕುಗಳ ಕೈಗಾರಿಕೆಗಳು ಅಭಿವೃದ್ಧಿಗೊಂಡವು ಹಾಗೂ ಬಂಡವಾಳ ಸರಕುಗಳ ಕೈಗಾರಿಕೆಗಳು ಹಿಂದುಳಿದವು.

ಸ್ವಾತಂತ್ರ್ಯ ಬರುವ ವೇಳೆಯಲ್ಲಿ ಹೆಚ್ಚಾಗಿ ಶ್ರಮ ಸಾಂದ್ರ ಕೈಗಾರಿಕೆಗಳೇ ಅಸ್ತಿತ್ವದಲ್ಲಿದುದ್ದರಿಂದ ಪ್ರತಿ ಕಾರ್ಮಿಕನಿಗೆ ಬಳಸಿಕೊಂಡ ಬಂಡವಾಳದ ಪ್ರಮಾಣ ತುಂಬಾ ಮಿತವಾಗಿತ್ತು. ಆಗಲೇ ಬಂಡವಾಳ ಕೊರತೆಯನ್ನು ಅನುಭವಿಸುತ್ತಿದ್ದ ದೇಶ ಬ್ರಿಟಿಷರ ಉಪೇಕ್ಷೆಯಿಂದಾಗಿ ಬಂಡವಾಳ ಸಾಂದ್ರ ಕೈಗಾರಿಕೆಗಳನ್ನು ಸ್ಥಾಪಿಸಲಾಗಲಿಲ್ಲ. ಬಂಡವಾಳ ಸರಕುಗಳನ್ನು ಉತ್ಪಾದಿಸುವ ಕೈಗಾರಿಕೆಗಳು ಬ್ರಿಟಿಷರ ನೀತಿಯಿಂದಾಗಿ

ಅಭಿವೃದ್ಧಿಗೊಳ್ಳದಿರಲು ಕಾರಣವೇನೆಂದರೆ ಸ್ವಾತಂತ್ರ್ಯ ಸಂದರ್ಭದಲ್ಲಿ ಕೈಗಾರಿಕಾ ಸರಕುಗಳ ರಚನೆಯು ಮುಖ್ಯವಾಗಿ ಅನುಭೋಗಿ ಸರಕುಗಳನ್ನೇ ಒಳಗೊಂಡಿದ್ದವು.

ಹೀಗೆ ಭಾರತಕ್ಕೆ ಸ್ವಾತಂತ್ರ್ಯ ಬರುವ ವೇಳೆಯಲ್ಲಿ ಕೈಗಾರಿಕಾ ರಂಗವು ಅಸಮಾನ ಅಭಿವೃದ್ಧಿಯಿಂದ ಕೂಡಿದ ಹಿಂದುಳಿದ ವಲಯವಾಗಿತ್ತು. ಬ್ರಿಟಿಷರು ಭಾರತದಲ್ಲಿ ಕೈಗಾರಿಕಾ ಬೆಳವಣಿಗೆಗೆ ಸೂಕ್ತ ಬೆಂಬಲ ನೀಡದೆ ಭಾರತವನ್ನು ತಮ್ಮ ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆಯಾದ ಸಿದ್ಧಪಡಿಸಿದ ವಸ್ತುಗಳ ಮಾರಾಟಕ್ಕೆ ಮಾರುಕಟ್ಟೆಯನ್ನಾಗಿ ಬಳಸಿಕೊಂಡರು.

ಜಾಗತೀಕರಣ ಮತ್ತು ಕೃಷಿ

ವಿಶ್ವ ವ್ಯಾಪಾರ ಸಂಘಟನೆಯು ಜಾಗತೀಕರಣ ಪ್ರಕ್ರಿಯೆಗೆ ಒತ್ತು ನೀಡುವುದು ಹಾಗೂ ಕೃಷಿಯನ್ನು ಜಾಗತೀಕರಣಗೊಳಿಸುವ ಉದ್ದೇಶದಿಂದ ವಿಶ್ವ ವ್ಯಾಪಾರ ಸಂಘಟನೆಯು "ಟ್ರಿಪ್ಸ್ ನಿಯಮಗಳ ಮೂಲಕ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಖಾಸಗಿ ಹಕ್ಕುಗಳೆಂದು ಕರೆದು ತಳಿಗಳನ್ನು (ಜೀವಿಗಳನ್ನು) ಪೇಟೆಂಟು ವ್ಯಾಪ್ತಿಗೊಳಪಡಿಸಿದೆ. ಪೇಟೆಂಟು ಮಾಡುವುದು ಸಸ್ಯ ಸಂಕರಣಶಾಸ್ತ್ರಜ್ಞರ ಹಕ್ಕು ಎಂದು ವಿಶ್ವ ವ್ಯಾಪಾರ ಸಂಘಟನೆ ಭಾವಿಸುತ್ತದೆ.

ಕೃಷಿ ಪ್ರಧಾನ ಆರ್ಥಿಕತೆಗಳು ಜಾಗತೀಕರಣ ಪ್ರಕ್ರಿಯೆಯಿಂದ ತಳಮಟ್ಟಕೊಳಗಾಗಿರುವುದು. ವಿಶ್ವ ವ್ಯಾಪಾರ ಸಂಘಟನೆಯು ಪೇಟೆಂಟು ಹಕ್ಕುಗಳಿಗೆ ನೀಡಿರುವ ವ್ಯಾಖ್ಯಾನದಿಂದಾಗಿ ಭಾರತವು ಸೇರಿದಂತೆ ಹೆಚ್ಚಿನ ಅಭಿವೃದ್ಧಿಶೀಲ ದೇಶಗಳಲ್ಲಿ ಕೃಷಿ ಕ್ಷೇತ್ರವು ಗೊಂದಲಮಯವಾಗಿದೆ. ಭಾರತದ ಕೃಷಿ ವಲಯದ ಪ್ರಕೃತಿ ಸ್ಥಿತಿ ಮತ್ತು ಮುಂದಿನ ದಿನಗಳಲ್ಲಿ ಅದು ತಾಳಬಹುದಾದ ಸ್ವರೂಪದ ಬಗೆಗಿನ ಸಂಕ್ಷಿಪ್ತ ಚಿಂತನೆ ಇಲ್ಲಿದೆ.

ಭಾರತೀಯ ಕೃಷಿಯ ಈಗಿನ ಸ್ಥಿತಿ

ಭಾರತದ ಕೃಷಿ ೧೯೫೦ ರಿಂದ ೧೯೬೦ ರವರೆಗೆ ಅನುಕೂಲಕರ ಸ್ಥಿತಿಯಲ್ಲಿತ್ತು. ಆಹಾರಧಾನ್ಯಗಳ ಉತ್ಪಾದನೆಗೆ ಕೃಷಿಕರು ಮಹತ್ವ ನೀಡುತ್ತಿದ್ದ ಕಾರಣ ಮತ್ತು ಹವಾಮಾನದ ಅನುಕೂಲತೆ ಕೃಷಿಯನ್ನು ಸುಸ್ಥಿತಿಯಲ್ಲಿಟ್ಟಿದ್ದವು. ೧೯೬೦ ರಿಂದ ೧೯೬೫ ರವರೆಗೆ ಚೀನಾ-ಭಾರತ ಯುದ್ಧ ೧೯೬೫ ರಿಂದ ೧೯೭೦ ರವರೆಗಿನ ಅವಧಿಯಲ್ಲಿ ಹಸಿರು ಕ್ರಾಂತಿಯ ಹೆಸರಲ್ಲಿ ಕೃಷಿ ಉತ್ಪನ್ನ ಹೆಚ್ಚಿಸುವ ಪ್ರಯತ್ನಗಳಾದವು. ೧೯೭೦ ರಿಂದ ೧೯೯೦ ರ ವರೆಗಿನ ಅವಧಿಯಲ್ಲಿ ಕೃಷಿಯನ್ನು ಆಧುನೀಕರಣಗೊಳಿಸುವ ಯತ್ನಗಳಿಂದಾಗಿ ಭಾರತ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿತು. ೧೯೯೬ ರಲ್ಲಿ ಭಾರತವು ಹೊಸ ಆರ್ಥಿಕ ನೀತಿಯನ್ನು ಅನುಷ್ಠಾನಕ್ಕೆ ತಂದಿತು.

ಜಾಗತೀಕರಣ ಪ್ರಕ್ರಿಯೆಗೆ ಭಾರತ ತನ್ನನ್ನು ಹೊಂದಿಕೊಂಡಿದ್ದು ೧೯೯೧ ರಲ್ಲಾದರೂ ಏಳನೇ ಯೋಜನೆಯಿಂದೀಚೆಗೆ ಭಾರತದ ಕೃಷಿ ವಲಯದ ಒಟ್ಟು ಪರಿಸ್ಥಿತಿಯಲ್ಲಿ ವ್ಯಾಪಕ ಬದಲಾವಣೆಗಳಾಗತೊಡಗಿವೆ.

ಕೃಷಿಕರು ಎಂಬತ್ತರ ದಶಕದಲ್ಲಿ ಆಹಾರ ಬೆಳೆಗಳಿಗೆ ಮಹತ್ವ ನೀಡುವುದರಿಂದ ಹಾಗೂ ಆಹಾರೋತ್ಪಾದನೆಯಲ್ಲಿ ಸ್ವಾಲಂಬನೆ ಸಾಧಿಸಲು ಮತ್ತು ಕೃಷಿಯನ್ನು ಲಾಭದಾಯಕ ಉದ್ಯಮವಾಗಿ ಪರಿವರ್ತಿಸಲು ಹೊರಟಾಗ ರೈತರು ಆಹಾರ ಬೆಳೆಗಳ ಬದಲು ಆರ್ಥಿಕ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದರು.

ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯ (FAD) ಅಂದಾಜಿನಂತೆ ೨೧ ನೇಯ ಶತಮಾನಕ್ಕೆ ನಾವು ಕಾಲಿಡುವಾಗ ಜಗತ್ತಿನ ಜನಸಂಖ್ಯೆ ೭೦೦ ಕೋಟಿಗಳಷ್ಟಾಗಲಿದೆ. ವಿಶ್ವದ ಎಲ್ಲರಿಗೂ ಆಹಾರ ಒದಗಿಸಬೇಕಾದರೆ ಶೇಕಡ ೪೨ ರಷ್ಟು ಭೂ ಭಾಗವು ಆಹಾರ ಬೆಳೆಗಳಿಗೆ ಬಳಕೆಯಾಗಲೇಬೇಕು. ಈಗ ವಿಶ್ವದ ಶೇಕಡಾ ೨೫ ರಷ್ಟು ಭೂ-ಭಾಗ ಮಾತ್ರ ಆಹಾರ ಬೆಳೆಗಳಿಗೆ ಬಳಕೆಯಾಗುತ್ತಿದ್ದು ಇದು ಆಹಾರ ಸಮಸ್ಯೆಯ ತೀವ್ರತೆಗೆ ಕಾರಣವಾಗಲಿದ್ದು ಹೀಗೆ ಮುಂದುವರಿದರೆ ಭಾರತವೂ ಮುಂದಿನ ನಾಲ್ಕೈದು ವರ್ಷಗಳಲ್ಲಿ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಕಳೆದುಕೊಳ್ಳಬಹುದು.

ಅರ್ಥವ್ಯವಸ್ಥೆಯಲ್ಲಿ ಅಭಿವೃದ್ಧಿ ಸಾಧಿಸಬೇಕಾದರೆ ಆಹಾರೋತ್ಪಾದನೆಯಲ್ಲಿ ಅದು ಮೊದಲು ಸ್ವಾವಲಂಬನೆ ಸಾಧಿಸಬೇಕು ಜಾಗತೀಕರಣ ಪ್ರಕ್ರಿಯೆಯ ಕೃಷಿಯನ್ನು ಜೀವನಧಾರ ವ್ಯವಸ್ಥೆ ಎನ್ನುವುದನ್ನೇ ಮರೆತು ಹೇಗಾದರೂ ಹಣ ಸಂಪಾದನೆ ಮಾಡುವ ಉದ್ಯಮ ಎಂದು ಭಾವಿಸಿದೆ. ಕೃಷಿ ಪ್ರಧಾನ ರಾಷ್ಟ್ರಗಳು ಮತ್ತೆ ಆಹಾರ ಧಾನ್ಯಗಳ ಉತ್ಪಾದನೆಗೆ ಮಹತ್ವ ನೀಡದೆ ಇದ್ದರೆ ಮಾನವ ಕುಲಕ್ಕೆ ಭೀಕರ ದುರಂತ ಕಾದಿದೆಯೆಂದು ಕೃಷಿ ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ. ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯು 'ಎಲ್ಲರಿಗೂ ಆಹಾರ" ಎಂಬ ಘೋಷಣೆಯ ಮೂಲಕ ಆಹಾರ ಧಾನ್ಯಗಳ ಉತ್ಪಾದನೆಗೆ ವಿಶ್ವವು ಪ್ರಥಮ ಪ್ರಾಶಸ್ತ್ಯ ನೀಡಬೇಕೆಂದು ಕರೆ ನೀಡಿದೆ. ಕೃಷಿ ಕ್ರಾಂತಿಯ ಸಂಪೂರ್ಣ ಪ್ರಯೋಜನ ಪಡೆದುಕೊಂಡು ಪಂಜಾಬು ಮತ್ತು ಹರಿಯಾಣ ರಾಜ್ಯಗಳು ಭಾರತದ ಆಹಾರದ ಕಣಜವಾಗಿ ಪರಿವರ್ತನೆಗೊಂಡವು. ೧೯೯೦ ರ ಬಳಿಕ ಈಶಾನ್ಯದ ರಾಜ್ಯಗಳು ಈಗ ಕೃಷಿಯಲ್ಲಿ ಪಂಜಾಬು ಹರಿಯಾಣಗಳ ಮತ್ತು ಉತ್ತರ ಪ್ರದೇಶಗಳಿಗಿಂತ ಹೆಚ್ಚು ಪ್ರಗತಿ ಸಾಧಿಸುತ್ತಿದೆ. ಬಿಹಾರ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ ಈ ರಾಜ್ಯಗಳು ಕೃಷಿಯಲ್ಲಿ ಸಾಧಿಸುತ್ತಿರುವ ಪ್ರಗತಿಪರವಾದುದು ಹಾಗೂ ಅದ್ಭುತವಾದ ಬದಲಾವಣೆಯೆಂದು ಪರಿಗಣಿಸಲ್ಪಟ್ಟಿವೆ.

ಮುಂದಿನ ೫ ವರ್ಷಗಳಲ್ಲಿ ಆಹಾರ ಧಾನ್ಯಗಳ ಕೊರತೆಯನ್ನು ಅನುಭವಿಸಲಿದ್ದು ಒಂದು ವೇಳೆ ಆಹಾರ ಧಾನ್ಯಗಳು ಲಭ್ಯವಾದರೂ ಅವುಗಳ ಬೆಲೆ ಇನ್ನಷ್ಟು ಗಗನಕ್ಕೇರುವುದರಿಂದ ಬಡಬಗ್ಗರಿಗೆ ಅದನ್ನು ಕೊಂಡುಕೊಳ್ಳಲು ಸಾಧ್ಯವೇ ಇಲ್ಲ. ಸರ್ಕಾರವು ಸಬ್ಸಿಡಿ ನೀಡಿ ಬಡಬಗ್ಗರಿಗೆ ಅದನ್ನು ಒದಗಿಸುವಂತೆಯೂ ಇಲ್ಲ. ಏಕೆಂದರೆ ಜಾಗತೀಕರಣ ಪ್ರಕ್ರಿಯೆಯಲ್ಲಿ ಸಬ್ಸಿಡಿಗೆ ಅವಕಾಶವೇ ಇರುವುದಿಲ್ಲ.

ಕೃಷಿಯಲ್ಲಿ ಬಂಡವಾಳದ ಹೂಡಿಕೆಯು ಕಡಿಮೆಯಾಗಿತ್ತುರುವುದು ಇನ್ನೊಂದು ಅಪಯಕಾರಿ ಅಂಶವಾಗಿದೆ. ೧೯೮೫ ರವರೆಗೆ ಕೃಷಿ ಬಂಡವಾಳ ಹೂಡಿಕೆಯ ವಾರ್ಷಿಕ ಪ್ರಮಾಣವು ಶೇಕಡ ೩.೫ ರಷ್ಟಿತ್ತು. ೧೯೮೫ ರಿಂದೀಚೆಗೆ ಇದು ಶೇಕಡ ೧.೨ ರಷ್ಟಾಗಿ ಈಗ ೨೧ನೇ ಶತಮಾನದ ಆದಿಯಲ್ಲಿ ಈ ಪ್ರಮಾಣವು ಶೇಕಡ ಕ್ಕಿಂತಲೂ ಕಡಿಮೆಯಾಗುವ ಅಪಾಯವಿದೆ. ಕೃಷಿಯ ಲಾಭದಾಯಕವಲ್ಲವೆನ್ನುವುದನ್ನು ಸರಕಾರವೇ ಒಪ್ಪಿಕೊಂಡ ಕಾರಣ ಆಹಾರ ಧಾನ್ಯಗಳ ಬೆಳೆಯಲ್ಲಿ ಖಾಸಗಿ ಹೂಡಿಕೆಯ ಪ್ರಮಾಣ ಗಣನೀಯವಾಗಿ ಕುಗ್ಗುತ್ತಾ ಹೋಗುತ್ತಿದೆ.

ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಹಣಕಾಸು ಸಂಸ್ಥೆಗಳು ಕೃಷಿಯತ್ತ ದಿವ್ಯ ನಿರ್ಲಕ್ಷ್ಯ ತಾಳಿವೆ. ರೈತರು ಪಡೆಯುವ ಕೃಷಿ ಸಾಲದಲ್ಲಿ ದೀರ್ಘಾವಧಿ ಸಾಲದ ಪ್ರಮಾಣ ಶೇಕಡ ೨೦ ರಷ್ಟು ಮಾತ್ರ ಉಳಿದೆಲ್ಲವು ಅಲ್ಪಾವಧಿ ಮತ್ತು ಮಧ್ಯಾವದಿ ಸಾಲಗಳು. ಕೃಷಿಯ ಉದ್ಧಾರಕ್ಕಾಗಿಯೇ ಇರುವ ನಬಾರ್ಡ್ ಸಂಸ್ಥೆಯು ಒದಗಿಸುವ ಸಾಲ ಕೂಡ ರೈತರ ಪಾಲಿಗೆ ಅವೈಜ್ಞಾನಿಕವೆನಿಸಿದೆ. ನಬಾರ್ಡ್ ಸಂಸ್ಥೆಯು ಎಕರೆಗೆ ಮತ್ತು ಬೆಳೆಗನುಗುಣವಾಗಿ ಸಾಲ ನೀಡುತಿರುವುದರಿಂದ ರೈತರ ಪರಿಸ್ಥಿತಿಯನ್ನು ಸುಧಾರಿಸಲು ಅದಕ್ಕೆ ಸಾಧ್ಯವಾಗಿಲ್ಲ. ನಬಾರ್ಡಿನ ಸಾಲ ಷರತ್ತುಗಳ ಬದಲಾವಣೆ, ಉತ್ಪಾದನೆ ಸಂಸ್ಕರಣ ಮತ್ತು ಮಾರಾಟಗಳ ನಡುವೆ ಅನ್ಯೋನ್ಯ ಸಂಬಂಧ ಸಾಧಿಸುವುದು ಹಾಗೂ ಕೃಷಿ ಅಭಿವೃದ್ಧಿ ಸಾಲ ಪ್ರಮಾಣವನ್ನು ಹೆಚ್ಚಿಸುವುದು ಇಂದಿನ ಅಗತ್ಯವಾಗಿದೆ. ಆದರೆ ಜಾಗತೀಕರಣ ಪ್ರಕ್ರಿಯೆಯು ಈ ಅಗತ್ಯಗಳ ಬಗ್ಗೆ ಸರಕಾರವು ಹೆಚ್ಚು ಗಮನ ಹರಿಸದಂತಹ ವಾತಾವರಣವನ್ನು ಸೃಷ್ಟಿಸಿ ಬಿಟ್ಟಿದೆ.

೧೯೯೫ ರವರೆಗೆ ಭಾರತದ ಅರ್ಥವ್ಯವಸ್ಥೆಯನ್ನು ಸ್ಥೂಲವಾಗಿ ಪ್ರಾಥಮಿಕ ವಲಯ ದ್ವಿತೀಯ ವಲಯ, ತೃತೀಯ ವಲಯ ಎಂದು ವಿಂಗಡಿಸಲಾಗುತ್ತಿತ್ತು. ಕೃಷಿ ಪರಿಕಲ್ಪನೆಯನ್ನು ಬದಲಾಯಿಸಲು ೧೯೯೫ ರಲ್ಲಿ ಹೊಸ ವಲಯ ವ್ಯವಸ್ಥೆ ಜಾರಿಗೆ ಬಂದಿತ್ತು. ಈಗ ಭಾರತದ ಆರ್ಥಿಕತೆಯನ್ನು ಈ ಕೆಳಗಿನಂತೆ ಐದು ವಲಯಗಳಾಗಿ ವಿಂಗಡಿಸಲಾಗುತ್ತದೆ.

- ಕೃಷಿ ಉದ್ದಿಮೆ ಅಥವಾ ವ್ಯವಸಾಯ ಜಮೀನು ಕ್ಷೇತ್ರ.
- ತಯಾರಿಕಾ ಉದ್ದಿಮ ಕ್ಷೇತ್ರ (ಕೈಗಾರಿಕೆ)
- ಮೂಲ ಸೌಲ್ಯಭ್ಯ ಕ್ಷೇತ್ರ (ವ್ಯಾಪಾರ, ಹಣಕಾಸು, ರಸ್ತೆ ಇತ್ಯಾದಿ)
- ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರ
- ಕಲ್ಯಾಣ ಕ್ಷೇತ್ರ (ಸಂಶೋಧನೆ, ಬಡತನ ನಿರುದ್ಯೋಗ ನಿವಾರಣೆ ಇತ್ಯಾದಿ)

ಇದು ಕೃಷಿಗೆ ಉದ್ದಿಮೆಯ ಸ್ಥಾನಮಾನ ಕೊಟ್ಟಿರುವುದರ ದ್ಯೋತಕ. ವಿಶ್ವವ್ಯಾಪರ ಸಂಘಟನೆಯ ನಿಯಮದಂತೆ ಭಾರತವು

೧. ಕೃಷಿಗೆ ನೀಡುತ್ತಿರುವ ಸಬ್ಸಿಡಿಯನ್ನು ಕಾಲಕ್ರಮೇಣ ನಿಲ್ಲಿಸಬೇಕಾಗಬಹುದು

೨.ಗುಣಮಟ್ಟ ಮತ್ತು ಸ್ಪರ್ಧಾಶಕ್ತಿಯ ಹೆಚ್ಚಳಕ್ಕಾಗಿ ದ್ವಿ-ಬೆಲೆ ನೀತಿಯನ್ನು ಬಿಟ್ಟು ಬಿಡಬೇಕಾಗುತ್ತದೆ

೩. ಕಾಪು ದಾಸ್ತಾನು ಸಂಗ್ರಹ ಪ್ರಮಾಣವನ್ನು ಕಡಿಮೆ ಮಾಡಬೇಕಾಗುತ್ತದೆ, ಈ ಕ್ರಮಗಳು ಕೃಷಿಯ ಸ್ವರೂಪದಲ್ಲಿ ಬದಲಾವಣೆಗಳನ್ನು ಮಾಡಲಿದೆಯನ್ನುವುದು ವಿಶ್ವ ವ್ಯಾಪಾರ ಸಂಘಟನೆ ನೀಡುತ್ತಿರುವ ಸಮಾಜಾಯಿಷಿಯಾಗಿದೆ.

ಪರಿಹಾರ ಕ್ರಮಗಳು

ಆಹಾರ ಧಾನ್ಯಗಳ ಉತ್ಪಾದನೆಯ ಅಗತ್ಯಕ್ಕಿಂತ ಕಡಿಮೆಯಿರುವುದನ್ನು ಗಮನಿಸಿ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ (UNDP) ಕೆಲವು ಸೂಚನೆಗಳನ್ನು ನೀಡಲಾಗಿದೆ. ವಿಶ್ವಬ್ಯಾಂಕೂ ಸೇರಿದಂತೆ ಕೆಲವು ಅಂತರಾಷ್ಟ್ರೀಯ ಸಂಘಟನೆಗಳು ಆಹಾರ ಧಾನ್ಯಗಳ ಉತ್ಪಾದನೆಯ ಹೆಚ್ಚಳಕ್ಕೆ ಆದ್ಯತೆ ನೀಡುವ ಕಾರ್ಯಕ್ರಮಗಳನ್ನು ಸೂಚಿಸಬೇಕೆಂದು ಸರಕಾರಗಳನ್ನು ಕೇಳಕೊಂಡಿವೆ. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು 'ನೋಟ ೨೦೨೦ (Vision 2020) ಎಂಬ ಶಿರೋನಾಮೆಯಲ್ಲಿ ಮುಂದಿನೆರಡು ದಶಕಗಳಲ್ಲಿ ವಿಶ್ವದಲ್ಲಿ ಆಹಾರದ ಬೇಡಿಕೆ ಮತ್ತು ಪೂರೈಕೆ ಪರಿಸ್ಥಿತಿ ಹೇಗಿರಬಹುದು ಮತ್ತು ಆಹಾರದ ಅಭಾವ ಸಮಸ್ಯೆಯನ್ನು ಹೇಗೆ ಎದುರಿಸಬಹುದು ಎಂಬ ಬಗ್ಗೆ ಮಾಹಿತಿ ನೀಡಿದೆ.

ಪರಿಸರಕ್ಕೆ ಧಕ್ಕೆಯೊದಗದ ತಂತ್ರಜ್ಞಾನವನ್ನು ಬಳಸಿ ಕಡಿಮೆ ಭೂಮಿಯಲ್ಲಿ ತೀಕ್ಷ್ಣ ಕೃಷಿ ಕ್ರಮದಿಂದ ಹೆಚ್ಚು ಇಳುವರಿ ಪಡೆಯಲು ಸಾಧ್ಯ ಎನ್ನುವುದು ಸ್ವಾಮಿನಾಥನ್ ರವರ ಅಭಿಪ್ರಾಯ. ಮಣ್ಣು ಪರೀಕ್ಷೆ ಸಾವಯವ ಗೊಬ್ಬರ ಬಳಕೆ, ಅಗತ್ಯವಿರುವಷ್ಟೇ ನೀರಿನ ಬಳಕೆ ಇತ್ಯಾದಿ ಕ್ರಮಗಳು ಭೂಮಿಯ ಸಾರವನ್ನು ಹೆಚ್ಚಿಸಿ,

ಆಹಾರೋತ್ಪಾದನೆಯನ್ನು ಅಧಿಕಗೊಳಿಸಲಿವೆ. ಹೊಸ ತಳಿಗಳ ಸಂಶೋಧನೆ ಮತ್ತು ಅವುಗಳನ್ನು ರೈತರು ಬಳಸುವಂತೆ ಪ್ರೇರಣೆ ನೀಡುವುದು ಎರಡನೇಯ ಪ್ರಮುಖ ಕ್ರಮವಾಗಿದೆ. ಮಣ್ಣಿನ ಗುಣವನ್ನು ಮತ್ತು ಹವಾಮಾನದ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ತಳಿಶಾಸ್ತ್ರಜ್ಞರು ಅಧಿಕ ಇಳುವರಿಯ, ಪರಿಸರ ಸಮತೋಲನಕ್ಕೆ ಧಕ್ಕೆಯುಂಟು ಮಾಡದ ತಳಿಗಳನ್ನು ಸಂಶೋಧಿಸಬೇಕಾಗಿದೆ.

ಭತ್ತ, ಗೋಧಿ, ರಾಗಿ ಜೋಳದ ಬದಲು ಅಡಿಕೆ, ರಬ್ಬರ್, ಹೊಗೆಸೊಪ್ಪು, ಕೊಕ್ಕೋ ಮುಂತಾದ ಆರ್ಥಿಕ ಬೆಳೆಗಳತ್ತ ರೈತರು ವಾಲಲು ಬಹಳ ಮುಖ್ಯ ಕಾರಣ ಲಾಭದಾಯಕತೆಯ ಪ್ರಶ್ನೆ. ಆಹಾರ ಬೆಳೆಗಳ ಉತ್ಪಾದನಾ ವೆಚ್ಚ ಅಧಿಕ ಸರಕಾರ ಇನ್ನು ಐದು ವರ್ಷಗಳಲ್ಲಿ ಕನಿಷ್ಟ ರೂ ೮೦೦೦ ಕೋಟಿಯಷ್ಟು ಕೃಷಿ ವಲಯದಲ್ಲಿ ಬಂಡವಾಳ ಹೂಡಿ ಕೃಷಿಗೆ ಬೇಕಾದಷ್ಟು ನೀರಾವರಿ ಮತ್ತು ವಿದ್ಯುತ್ತು ಪೂರೈಕೆ ಮಾಡಬೇಕು. ಕೃಷಿಯ ಪರಿಸ್ಥಿತಿ ಹೇಗಿದ್ದರೂ ಈವರೆಗೂ ಭಾರತಕ್ಕೆ ಒಂದು ಕೃಷಿ ನೀತಿ ಎಂಬುದಿಲ್ಲ ಕೃಷಿಯು ಒಂದು ರಾಜ್ಯ ವಿಷಯವಾಗಿರುವುದು ಇದಕ್ಕೆ ಕಾರಣ. ಇನ್ನಾದರೂ ಕೇಂದ್ರ ಸರಕಾರವೂ ಒಂದು ಕೃಷಿ ನೀತಿಯನ್ನು ರೂಪಿಸಿ ಪರಿಸ್ಥಿತಿಯನ್ನು ಬದಲಾಯಿಸಬೇಕೆಂದು ಡಾ. ಸ್ವಾಮಿನಾಥನ್ ಹೇಳುತ್ತಾರೆ.

ಈ ಸಲಹೆಗಳೆಲ್ಲಾ ಅದ್ಭುತವಾಗಿದೆ ಆದರೆ ಜಾಗತೀಕರಣವು ಸರಕಾರದ ಹಸ್ತಕ್ಷೇಪವನ್ನು ಬಯಸುವುದಿಲ್ಲ. ಅದು ಬೃಹತ್ ಪ್ರಮಾಣದ ಉತ್ಪಾದನೆಯನ್ನು ಮಾತ್ರ ಬಯಸುತ್ತದೆ. ಸಣ್ಣ ರೈತರು, ಸಣ್ಣ ಹಿಂಡುವಳಿ, ಸಬ್ಸಿಡಿ, ಕಾಪು ದಾಸ್ತಾನು, ಸಾರ್ವಜನಿಕ ವಿತರಣಾ ವ್ಯವಸ್ಥೆ ಇತ್ಯಾದಿಗಳು ಜಾಗತೀಕರಣ ಪ್ರಕ್ರಿಯೆಗೆ ಸಹ್ಯವಾಗುವ ಪಾರಿಭಾಷಿಕಗಳಲ್ಲಿ ಬೌಧಿಕ ಆಸ್ತಿಯ ಹಕ್ಕಿನ ಪ್ರಕಾರ ತಂತ್ರಜ್ಞಾನವನ್ನು ವರ್ಗಾಯಿಸುವಂತಿಲ್ಲ. ಹಾಗಾಗಿ ಸಂಶೋಧನೆಯ ಪ್ರಯೋಜನ ಕೃಷಿ ರಾಷ್ಟ್ರಗಳಿಗೆ ದಕ್ಕುವಂತಿಲ್ಲ. ಇವೆಲ್ಲಾ ಆಹಾರಧಾನ್ಯ ಉತ್ಪಾದಿಸುವ ಭಾರತದ ಅನ್ನದಾತ ಎದುರಿಸುತ್ತಿರುವ ಸಮಸ್ಯೆಗಳು "ಅರ್ಥಾತ್ ಇದು ಅಂತಿಮವಾಗಿ ಭಾರತೀಯರೆಲ್ಲರ ಬದುಕಿನ ಪ್ರಶ್ನೆ. ಅಡಿಕೆ ರಬ್ಬರ್, ಹೊಗ್ಗೆಸೊಪ್ಪು ಮುಂತಾದ ಆರ್ಥಿಕ ಬೆಳೆಗಳು ನಮ್ಮ ಹೊಟ್ಟೆ ತುಂಬಿಸಲಾರದಷ್ಟೇ ಹಾಗಾಗಿ ಆಹಾರ ಬೆಳೆಗಳಿಗೆ ಹೆಚ್ಚು ಉತ್ತೇಜನ ನೀಡುವ ಕಾರ್ಯ ಸಮರದೋಪಾದಿಯಲ್ಲಿ ನಡೆಯಬೇಕಾಗಿದೆ. ಇದು ಸರಕಾರದ ಕಾರ್ಯವೆಂದು ನಾವೆಲ್ಲ ಕೈ ಕಟ್ಟಿ ಕೂರುವಂತಿಲ್ಲ.

ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಳಕೆ

ಭಾರತ ಒಂದು ಕೃಷಿ ಪ್ರಧಾನ ರಾಷ್ಟ್ರ. ಶೇಕಡ ೫೮ ಕ್ಕಿಂತಲೂ ಅಧಿಕ ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ದೇಶ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದರೂ ಕೃಷಿ ಕ್ಷೇತ್ರದಲ್ಲಿ ಈ ವೈಜಾನಿಕ ಮುನ್ನಡೆ ಬಳಕ್ಕೆ ಸಾಕಷ್ಟಿಲ್ಲದಿರಲೂ ಕಾರಣವೇನೆಂದರೆ ಹೆಚ್ಚಿನ ಭಾರತೀಯ ರೈತರು ಸಂಪ್ರದಾಯ ವಾದಿಗಳು, ಅಜ್ಞಾನಿಗಳು ಮತ್ತು ಅನಕ್ಷರಸ್ಥರು, ಹಳೆಯ ಕಾಲದ ಯಂತ್ರ-ಉಪಕರಣಗಳನ್ನು ಬಳಸಿಕೊಂಡು ಪುರಾತನ ಕೃಷಿ ಪದ್ಧತಿಯನ್ನು ಅನುಸರಿಸಿಕೊಂಡು ಹೋಗುತ್ತಿರುವುದರಿಂದ ಅವರು ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಮುಂದಾಗುತ್ತಿಲ್ಲ ಅತ್ಯಂತ ಅನಾರ್ಥಿಕ ಹಿಡುವಳಿಗಳ ಅಸ್ತಿತ್ವ, ಬಂಡವಾಳದ ಕೊರತೆ, ಅನಕ್ಷರತೆ, ಅಜ್ಞಾನ, ನೀರಾವರಿ ಸೌಲಭ್ಯಗಳ ಕೊರತೆ ಮುಂತಾದ ಅಂಶಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳನ್ನು ಕಡಿಮೆಗೊಳಸಿವೆ.

ನೂರಾರು ವರ್ಷಗಳಿಂದ ಭಾರತೀಯ ರೈತರು ಕಡಿಮೆ ಇಳುವರಿ ನೀಡುವ ಸಾಂಪ್ರದಾಯಿಕ ಬಿತ್ತನೆ ಬೀಜಗಳನ್ನೇ ಬಳಸುತ್ತಿದ್ದರು. ೧೯೬೦ ರ ದಶಕದಲ್ಲಿ ಉಂಟಾದ ಹಸಿರು ಕ್ರಾಂತಿಯ ಪರಿಣಾಮವಾಗಿ ಕೃಷಿ ಹೊಸ ಆಯಾಮವನ್ನು ಪಡೆಯಿತು. ಅನೇಕ ಬೀಜ ಉತ್ಪಾದನಾ ಕೇಂದ್ರಗಳು ಮತ್ತು ಬೀಜ ನಿಗಮಗಳನ್ನು ಸ್ಥಾಪಿಸಲಾಯಿತು. ಇದರಿಂದಾಗಿ ರೈತರು ಹೊಸ ಹೊಸ ಬಿತ್ತನೆ ಬೀಜಗಳನ್ನು ಬಳಸಲು ಮುಂದಾಗುತ್ತಿದ್ದಾರೆ. ಕೃಷಿ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. ಇತ್ತೀಚಿನ ದಿನಗಳಲ್ಲಿ ಅನೇಕ ಆಧುನಿಕ ರೀತಿಯ ಉಪಕರಣಗಳು ಮತ್ತು ಯಂತ್ರಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಉಳುವ ಯಂತ್ರಗಳು ಟ್ರಾಕ್ಟರ್ ಗಳು, ಅದ್ಭುತ ರೀತಿಯ ಯಂತ್ರಗಳನ್ನು ಸಂಶೋಧಿಸಲಾಗಿದೆ.

ಇದರಿಂದಾಗಿ ಆಧುನಿಕ ಉಪಕರಣಗಳ ವ್ಯಾಪಕ ಬಳಕೆಯಿಂದ ಕೃಷಿ ಉತ್ಪಾದನೆ ಹೆಚ್ಚಿದೆ ಹಾಗೂ ಉತ್ಪಾದನಾ ವೆಚ್ಚ ಕಡಿಮೆಗೊಂಡಿದೆ. ಕೃಷಿ ಉತ್ಪಾದನೆ ಸುಧಾರಿಸಲು ಹಾಗೂ ಕೃಷಿ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿ ಅಧಿಕ ಇಳುವರಿ ಪಡೆಯಲು ರಾಸಾಯನಿಕ ಗೊಬ್ಬರಗಳನ್ನು ಅಧಿಕ ಪ್ರಮಾಣದಲ್ಲಿ ಬಳಸಲಾಗುತ್ತಿದ್ದು, ಕೀಟಗಳು ಮತ್ತು ರೋಗಭಾದೆಗಳನ್ನು ತಡೆಗಟ್ಟಲು ಕ್ರಿಮಿ ಮತ್ತು ರೋಗ ನಾಶಕಗಳನ್ನು ಬಳಸಲಾಗುತ್ತಿದೆ. ಭೂ ಸವೆತವನ್ನು ತಡೆಗಟ್ಟಲು ಹಾಗೂ ಭೂ ಸಾರ ಸಂರಕ್ಷಣೆ ಮಾಡಲು ಅರಣ್ಯಗಳ ರಕ್ಷಣೆ ಹೊಸ ಅರಣ್ಯಗಳ ನಿರ್ಮಾಣ, ಒಣಭೂಮಿ ಅಭಿವೃದ್ಧಿ ಮುಂತಾದ ಕಾರ್ಯಕ್ಕೆ ಹೆಚ್ಚಿನ ಮಹತ್ವ ನೀಡಲು ಪ್ರಯತ್ನಿಸಲಾಗಿದೆ. ೧೯೫೩ ರಲ್ಲಿ ಕೇಂದ್ರ ಭೂಸಾರ ಸಂರಕ್ಷಣಾ ಮಂಡಳಿಯನ್ನು ಸ್ಥಾಪಿಸಲಾಗಿದ್ದು ಇದು ಭೂ ಸಾರ ಸಂರಕ್ಷಣಾ ವಿಚಾರದಲ್ಲಿ ವ್ಯಾಪಕ ಸಂಶೋಧನೆ ನಡೆಸುತ್ತಿದೆ.

ರೈತರಿಗೆ ಹಣಕಾಸು ಸೌಲಭ್ಯವನ್ನು ಪೂರೈಸಲು ಗಮನಹರಿಸಲಾಗಿದೆ ಹಾಗೂ ನೀರಾವರಿ ಸೌಲಭ್ಯಗಳನ್ನು ಒದಗಿಸಲಾಗಿದೆ. ಇದರಿಂದಾಗಿ ರೈತರು ಆಧುನಿಕ ಬೇಸಾಯ ಕ್ರಮಗಳನ್ನು ಅನುಸರಿಸಲು ಮುಂದಾಗುತ್ತಿದ್ದಾರೆ. ಮಿಶ್ರ ಬೇಸಾಯ ಪದ್ಧತಿಯಿಂದ ಹೆಚ್ಚು ಬೆಳೆ ತೆಗೆಯುತ್ತಿರುವ ರೈತರು ವರ್ಷದಲ್ಲಿ ಎರಡು ಮೂರು ಬೆಳೆ ಬೆಳೆಯುತ್ತಿದ್ದಾರೆ.

ಆಧುನಿಕ ಬೇಸಾಯಕ್ರಮವನ್ನು ಅಳವಡಿಸಿಕೊಳ್ಳುವುದನ್ನು ಪ್ರೋತ್ಸಾಹಿಸಲು ಮತ್ತು ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆಯನ್ನು ಹೆಚ್ಚಿಸುವ ಸಲುವಾಗಿ ಸರ್ಕಾರ ರಸಗೊಬ್ಬರಗಳು, ಬಿತ್ತನೆ ಬೀಜಗಳು, ಯಂತ್ರಗಳು, ಉಪಕರಣಗಳು, ಕೀಟನಾಶಕಗಳು ಮುಂತಾವುದನ್ನು ಸಹಾಯಧನದಲ್ಲಿ ಪೂರೈಸುತ್ತಿದೆ. ಸುಮಾರು ರೂ ೯೯,೪೫೬ ಕೋಟಿಗಿಂತ ಅಧಿಕ ರಾಸಾಯನಿಕ ಗೊಬ್ಬರಗಳ ಸಹಾಯಧನವನ್ನು ನೀಡಲಾಗುತ್ತಿದೆ.

ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ರೈತರು ಉತ್ಪಾದನೆಯನ್ನು ಹೆಚ್ಚಿಸಲು ಉತ್ತೇಜನ ನೀಡಲು ಹಾಗೂ ಪ್ರೋತ್ಸಾಹಿಸಲು ರೈತರಿಗೆ ವಿಶೇಷ ಪ್ರೋತ್ಸಾಹಗಳು, ಸನ್ಮಾನಗಳು, ಬಹುಮಾನಗಳು, ಪ್ರಶಸ್ತಿಪತ್ರಗಳು, ನಗದು ಬಹುಮಾನಗಳು, ಪುರಸ್ಕಾರಗಳು ಮುಂತಾವುದನ್ನು ನೀಡಲಾಗುತ್ತಿದೆ. ಪ್ರಯೋಗಲಾಯ ಮತ್ತು ಸಂಶೋಧನ ಕೇಂದ್ರಗಳನ್ನು ಕೃಷಿಯೊಂದಿಗೆ ಸಂಪರ್ಕಿಸಲಾಗಿದೆ.

ಮೇಲಿನ ಎಲ್ಲಾ ಕ್ರಮಗಳಿಂದಾಗಿ ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ ಹೆಚ್ಚಿದೆ. ಇದರಿಂದಾಗಿ ಆಹಾರ ಉತ್ಪಾದನೆ ೧೯೫೦-೫೧ ರ ಕೇವಲ ಶೇಕಡ ೫೦ ಮಿಲಿಯಟನ್ನುಗಳಿಂದ ಇತ್ತೀಚಿಗೆ ೨೧೮ ಮಿಲಿಯಟನ್ನುಗಳಗೇರಿದೆ. ಆದರೆ ಆಧುನೀಕರಣದ ಕಾರ್ಯಕ್ರಮ ಇನ್ನೂ ವ್ಯಾಪಕವಾಗಿ ನಡೆದಿಲ್ಲ ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು. ಪಂಜಾಬ್, ಹರಿಯಾಣ ಮತ್ತು ಉತ್ತರಪದೇಶದಂತಹ ರಾಜ್ಯಗಳಲ್ಲಿ ಆಧುನೀಕರಣ ವ್ಯಾಪಕವಾಗಿ ನಡೆದಿದ್ದು ಇನ್ನುಳಿದ ರಾಜ್ಯಗಳು ಆ ನಿಟ್ಟಿನಲ್ಲಿ ಪ್ರಯತ್ನ ನಡೆಸಬೇಕಿದೆ.

ಕೃಷಿಯಲ್ಲಿ ನಗರೀಕರಣ

ಹಿಂದೆ ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿತ್ತು. ಶೇಕಡ ೭೦ ಕ್ಕಿಂತ ಹೆಚ್ಚು ಜನ ಕೃಷಿಯನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದರು ಮತ್ತು ಜನರ ಕಸುಬು ಕೂಡ ಕೃಷಿಯೇ ಆಗಿತ್ತು. ಯಾವಾಗ ವಾಣಿಜ್ಯ ಬೆಳೆಯಾಗಿ ಕೃಷಿ ಮಾರ್ಪಾಡಾಯಿತೋ, ಆಗಿನಿಂದ ವ್ಯವಸಾಯ ರೈತಾಪಿ ವೃತ್ತಿ ಕೂಡ ನಿಧಾನವಾಗಿ ಬದಲಾಗತೊಡಗಿತು. ಕಾರಣವೆಂದರೆ ಹಳ್ಳಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ನಗರಕ್ಕೆ ಉದ್ಯೋಗ ನಿಮಿತ್ತ

ಬರುವಂತಹ ಯುವಜನರು ಯುವಕರು ಶಾಶ್ವತವಾಗಿ ಹಳ್ಳಿಯನ್ನು ತೊರೆದು ಪಟ್ಟಣವನ್ನು ಆಶ್ರಯಿಸಿದಾಗ ಬಹುಸಂಖ್ಯಾತ ಹಳ್ಳಿಗಳಲ್ಲಿದ್ದ ಕೃಷಿ ಕಾರ್ಯ ಕುಂಠಿತವಾಯಿತು ಮತ್ತು ಕೃಷಿಯ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಸಿಗದೆ ಅದನ್ನು ಹಾಳು ಬಿಡುವ ಸ್ಥಿತಿ ನಿರ್ಮಾಣವಾಯಿತು.

ಹೀಗೆ ಹಾಳುಬಿದ್ದ ಭೂಮಿಯನ್ನು ಕೈಗಾರಿಕೆಗಳಿಗೆ ಆಯ್ಕೆ ಮಾಡಿ ಅದನ್ನು ಸದುದ್ದೇಶದಿಂದ ಉಪಯೋಗಿಸಲು ಮುಂದಡಿ ಇಡಲಾಯಿತು, ಅದರಂತೆಯೇ ಕೃಷಿ ಮತ್ತು ಕೃಷಿಯೇತರ ಜಮೀನು ಕೈಗಾರೀಕೀಕರಣದ ಅಡಿಯಲ್ಲಿ ಸಂಪೂರ್ಣ ನಾಶವಾಗುತ್ತ ಸಾಗಿತು. ನಗರದಲ್ಲಿದ್ದ ಅನುಕೂಲತೆಗಳನ್ನು ಗಮನಿಸಿ ಎಲ್ಲ ಸೌಲಭ್ಯಗಳನ್ನು ಆಧುನಿಕತೆಗಳನ್ನು ಮೈಗೂಡಿಸಿಕೊಂಡಾಗ ಅದೇ ಬೃಹತ್ ಪ್ರಮಾಣದಲ್ಲಿ ಬೆಳೆದು ಹಳ್ಳಿಯ ವಾತಾವರಣ ಹೋಗಿ ನಗರವಾಗಿ ಮಾರ್ಪಡಾಯಿತು. ಹೇಗೆ ಕೃಷಿಯಿಂದ ಲಾಭವಿಲ್ಲ ಎಂಬ ಅಂಶ ಮನದಟ್ಟಾದಾಗ ಕೃಷಿಕರೂ ತಮ್ಮ ಫಲವತ್ತಾದ ಕೃಷಿ ಭೂಮಿಯನ್ನು ಕಡಿಮೆ ಬೆಲೆಗೆ ಮಾರಿ ನಗರಕ್ಕೆ ವಲಸೆ ಹೊರಟರು. ಇದರ ನೇರ ಪರಿಣಾಮ ಕೃಷಿಯಿಂದ ನಗರೀಕರಣಕ್ಕೆ ಮೂಲವಾಯಿತು.

ಬೇಕಾದ ಹಾಗೆ ಕೃಷಿ ಭೂಮಿ ಜಾನುವಾರುಗಳು ಮೇಯುವ ಗೋಮಾಳ ಬೇಸಾಯ ಮಾಡುವ ಗದ್ದೆ ಇವುಗಳೆಲ್ಲ ಆಧುನಿಕೀಕರಣದ ಭರಾಟೆಯಲ್ಲಿ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಅಸಮತೋಲಿತ ಸ್ಥಿತಿಗೆ ತಲುಪಿತು. ನಗರೀಕರಣವೆಂದರೆ ಇದ್ದ ವ್ಯವಸಾಯಕ ಜಾಗ ಹಂತ ಹಂತವಾಗಿ ಮಾಯವಾಗಿ ಅದರಲ್ಲಿ ಜನರಿಗೆ ಉದ್ಯೋಗ ದೊರಕಿಸುವ ಕಾರ್ಖಾನೆಗಳು, ಅಂಗಡಿಗಳು, ವಾಸಕ್ಕೆ ಮನೆಗಳು, ಆಧುನಿಕ ಮನೋಭೂಮಿಕೆಯ ವಸತಿಗೃಹಗಳು, ವಿಲಾಸ ರಿಸಾರ್ಟ್ ಗಳು, ಬಾರ್ ಗಳು, ವಸತಿ ಸಮುಚ್ಛಯಗಳು ನಿರ್ಮಾಣವಾಗಿ ಅಲ್ಲಿ ನಗರದ ಅಥವಾ ಪೇಟೆಯ ವಾತಾವರಣ ನಿರ್ಮಿಸಿರುವುದಾಗಿದೆ. ಜನರಿಗೆ ಬೇಕಾದ ಸೌಲಭ್ಯಗಳನ್ನು ಮನೆ ಬಾಗಿಲಿಗೆ ತಂದು ಮುಟ್ಟಿಸುವ ಏಜೆನ್ಸಿಗಳು ಅನೇಕ ಕಛೇರಿಗಳಿವೆ. ಹೀಗಾಗಿ ಕೃಷಿಯಲ್ಲಿ ನಗರೀಕರಣ ಹೆಚ್ಚು ಹೆಚ್ಚು ಪ್ರಭಾವ ಬೀರಿತು ಎಂದರೆ ತಪ್ಪಾಗಲಾರದು.

ಕೃಷಿ ಚಟುವಟಿಕೆಯಿಂದ ಆರ್ಥಿಕವಾಗಿ ಅಂತಹ ಹೇಳಿಕೊಳ್ಳುವ ಲಾಭವೇನೂ ದೊರಕುತ್ತಿಲ್ಲ ಎಂಬುದು ಇತ್ತೀಚಿನ ದಿನಗಳಲ್ಲಿ ಮನದಟ್ಟಾಗಿದೆ. ಏಕೆಂದರೆ ಹಾಕಿದ ಬಂಡವಾಳಕ್ಕೆ ಮೋಸವಾಗಿ ಬೆಳೆ ಬರದೆ, ಬೆಳೆ ಬಂದಾಗ ಬೆಲೆ ಸಿಗದೆ ರೈತ ರೈತಾಪಿ ಕಸುಬನ್ನು ಬಿಡಲು ಸಿದ್ಧತೆ ನಡೆಸುತ್ತಿದ್ದಾನೆ. ಆಧುನಿಕ ಯಂತ್ರಗಳ ಭರಾಟೆ, ಕೃಷಿ ಕೂಲಿ ಕಾರ್ಮಿಕರ ಕೊರತೆ, ಕೌಶಲ್ಯದ ಕೊರತೆಗಳು ಮೇಲ್ನೋಟಕ್ಕೆ ಕಂಡು ಬರುತ್ತಿರುವ ಕಾರಣಗಳು.

ಇನ್ನೂ ಆಳವಾಗಿ ಚಿಂತಿಸಿದರೆ ನಗರಗಳಿಂದ ಹಳ್ಳಿಗಳ ಜನರು ಆಕರ್ಷಣೆಗೊಳಗಾಗಿರುವುದೂ ಆಗಿದೆ. ಇದ್ದ ಜಮೀನನ್ನೆಲ್ಲ ಮಾರಿ ಅದರಿಂದ ಪೇಟೆಯಲ್ಲಿ ಆರಾಮವಾಗಿ ಬದುಕಬೇಕೆಂಬ ತುಡಿತವೂ ಕಾರಣವಾಗಿರಬಹುದು.

ಆದರೆ ನಾವು ಆಲೋಚಿಸಲೇ ಬೇಕಾದ ಸಂಗತಿಯೊಂದಿದೆ, ಕೃಷಿ ಭೂಮಿಯೆಲ್ಲ ಪರಬಾರೆಯಾದರೆ ಮುಂದೆ ನಗರೀಕರಣವೇ ಜನರಿಗೆ ಶಾಪವಾಗಬಲ್ಲದು. ನಗರ ಪ್ರದೇಶದಲ್ಲಿ ವಾಸವಾಗಿರುವವರು ಹೊಟ್ಟೆ ತುಂಬಿಸಲು ಸಂಬಳವನ್ನು ತರಬಹುದು ಆದರೆ ತಿನ್ನುವ ಆಹಾರ ವಸ್ತುವೇ ಇಲ್ಲವಾದಲ್ಲಿ ಅಂದರೆ ಬೆಳೆಯನ್ನು ಬೆಳೆಯುವ ಕೃಷಿಕ ಮತ್ತು ಕೃಷಿ ಭೂಮಿಯೇ ಇಲ್ಲವಾದಲ್ಲಿ ಕಾಂಕ್ರೀಟ್ ಗಳನ್ನು, ಆಧುನಿಕ ಉಪಕರಣಗಳನ್ನು ಯಂತ್ರಗಳನ್ನು ಇಲೆಕ್ಟ್ರಾನಿಕ್ ವಸ್ತುಗಳನ್ನು ತಿನ್ನಲು ಸಾಧ್ಯವಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಕೃಷಿಯಲ್ಲಿ ಆಧುನಿಕ ಪರಿಕ್ರಮ, ಉತ್ತಮ ಬೆಳೆ ಬೆಳೆಯುವ ವಿಧಾನಗಳು, ಯಂತ್ರಗಳು ಬೇಕು. ಕೃಷಿಗೆ ಪೂರಕವಾದ ರೈತರ ಜಮೀನನ್ನು ಕಬಳಸದ ನಗರೀಕರಣ ಇಂದಿನ ಆದ್ಯತೆಯಾಗಬೇಕು. ಕೃಷಿ ಭೂಮಿಯನ್ನು ನುಂಗಿ ಕೃಷಿಕರ ಸ್ಥಿತಿಯನ್ನು ಅದೋಗತಿಗೆ ತಳ್ಳುವ ಕೊಳ್ಳಬಾಕ ಸಂಸ್ಕೃತಿ ನಗರ ಸಂಸ್ಕೃತಿ ಬೇಡ ಎಂದು ತಿಳಿಯಬೇಕು. ಆದರೆ ಆಧುನಿಕತೆಯ ಹೆಸರಿನಲ್ಲಿ ಕೃಷಿ ಭೂಮಿಯನ್ನು ಹಾಳು ಮಾಡುವುದು ಉಚಿತವಲ್ಲ. ನಗರೀಕರಣ ಕೃಷಿಗೆ ಮಾರಕವಾಗದೇ ಪೂರಕವಾಗಿ ಬೆಳೆಯಲಿ ಕೃಷಿಯನ್ನು ಪ್ರೋತ್ಸಾಹಿಸಲಿ ಎಂದು ಸತ್ಯವನ್ನು ಕಂಡುಕೊಳ್ಳಬೇಕಾಗಿದೆ.

ಕೃಷಿ ಜೀವನ ಸುಧಾರಣೆಯಾಗಲಿ ನಗರ ಮತ್ತು ನಗರೀಕರಣ ಕೃಷಿಯ ಮಿತಿಯಲ್ಲಿ ಬೆಳೆಯಲಿ ಹಾಗೆ ಬೆಳೆದಾಗ ನಗರೀಕರಣದಿಂದ ಕೃಷಿಗೂ ಲಾಭ.

ಕೃಷಿ ಕೈಗಾರಿಕೆಯ ಧಕ್ಕೆ ಹಾಗೂ ಒಟ್ಟು ಪರಿಣಾಮ :

ಕೃಷಿಯಲ್ಲಿ ಕೈಗಾರಿಕೀಕರಣದ ಪ್ರವೇಶದ ನಂತರ ಸುಧಾರಣೆಯಾದದ್ದು ನಿಜವಾದರೂ, ಅದರಿಂದ ಆಹಾರ ಕ್ಷೇತ್ರದ ಅಂದರೆ ಭೂಮಿಯ ಸಮತೋಲನ ತಪ್ಪಿದ್ದು ಸುಳ್ಳಲ್ಲ. ಕಾರಣ ಕೃಷಿಯನ್ನು ಸುಧಾರಿಸಲು, ಹೆಚ್ಚು ಇಳುವರಿ ಪಡೆಯಲು ಹೋಗಿ ಭೂಮಿ ತನ್ನ ಸಹಜತೆಯನ್ನು ಕಳೆದುಕೊಳ್ಳುವಂತಾಗಿದೆ. ಹೇಗೆಂದರೆ ಹೆಚ್ಚು ಹೆಚ್ಚು ಕೈಗಾರಿಕೆಗಳ ಸ್ಥಾಪನೆಯಾದಂತೆ ಅದಕ್ಕೆ ಅನೇಕ ಕೃಷಿ ಭೂಮಿಗಳು ನಾಶವಾಗಬೇಕಾಯಿತು. ಅದರ ಪರಿಣಾಮ ಭೂಮಿಯ ಮೇಲೆ ಅಪರಿಮಿತವಾದ ಭಾರ ಬೀಳುವಂತಾಯಿತು.

ಬೃಹತ್ ಪ್ರಮಾಣದ ಕೈಗಾರಿಕೀಕರಣಕ್ಕೆ ಮೂಲ ಅವಶ್ಯಕತೆಯೇ ಭೂಮಿ ಮತ್ತು ಉತ್ತಮ ನೀರಿನ ವ್ಯವಸ್ಥೆ ವ್ಯವಸಾಯಕ್ಕೆ ಬೇಕಾಗುವ ನೀರಿಗಿಂತ ದುಪ್ಪಟ್ಟು ಪ್ರಮಾಣದ ನೀರು ಕೈಗಾರಿಕೆಗಳಿಗೆ ಅಗತ್ಯ ಹಾಗೆಯೇ ಉಚಿತವಾಗಿ ವಿದ್ಯುತ್ ನ್ನು ಕೂಡ ಅಪೇಕ್ಷಿಸುತ್ತವೆ.

ರಾಷ್ಟ್ರ ಬಲಶಾಲಿಯಾಗಲು ಕೈಗಾರಿಕೆಗಳು ಬೇಕು. ನಿಜ ಆದರೆ ಈ ಕೈಗಾರಿಕೆಗಳಿಂದಲೇ ಜೀವನ ಹಸಿವು ಕಡಿಮೆಯಾಗಲಾರದು. ಕೃಷಿ ಕಾರ್ಯಕ್ಕೆ ರೈತ ಇಲ್ಲವಾದಲ್ಲಿ ಕೇವಲ ಯಂತ್ರದಿಂದ ಬೆಳೆ ಬೆಳೆಯಲು ಸಾಧ್ಯವಿಲ್ಲ. ಕೆಲಸಗಾರರ ನೆರವಿಲ್ಲದೆ ಬೆಳೆ ಬರಲಾರದು. ಹಾಗೆಯೇ ಈ ಕೈಗಾರಿಕೀಕರಣ ಹೆಚ್ಚಿದಂತೆ ವಾತಾವರಣದಲ್ಲಿ ಏರುಪೇರುಗುತ್ತದೆ. ಅನೇಕ ಸಣ್ಣ ರೈತರು ತಮ್ಮ ಜಮೀನನ್ನು ಕಳೆದುಕೊಳ್ಳುವಂತಾಗುತ್ತದೆ ಮತ್ತು ಆ ಹೊಲದಿಂದ ಉತ್ಪತ್ತಿಯಾಗುವ ಬೆಳೆಗಳ ಪ್ರಮಾಣ ನಷ್ಟವಾಗುತ್ತದೆ. ಇದು ಅನೇಕ ಕೃಷಿ ಕೂಲಿ ಕಾರ್ಮಿಕರ ಕೆಲಸವನ್ನು ಕಸಿದುಕೊಳ್ಳುತ್ತದೆ. ಹೇಗೆಂದರೆ ೧೦ ಜನರು ಮಾಡುವ ಕಾರ್ಯವನ್ನು ಒಂದು ಯಂತ್ರ ಮಾಡಿದಾಗ ೯ ಜನ ನಿರುದ್ಯೋಗಿ ನಿರಾಶ್ರಿತರಾಗುತ್ತಾರೆ.

ಕೃಷಿಯಲ್ಲಿ ಸಾರ್ವಜನಿಕ ರಂಗದ ಉದ್ದಿಮೆ ಕೈಗಾರಿಕೆಗಳು ಬಂದಂತೆ ಕೃಷಿಯ ಉತ್ಪಾದನೆಯ ಪ್ರಮಾಣ ಕುಸಿಯುತ್ತದೆ. ಏಕೆಂದರೆ ಅಷ್ಟು ಕೃಷಿ ಭೂಮಿ ಕೈಗಾರಿಕಾ ಸ್ಥಾಪನೆಗೆ ಬಲಿಯಾಗುತ್ತದೆ. ಅದು ಇಡೀ ದೇಶವನ್ನು ಗಣನೆಗೆ ತೆಗೆದುಕೊಂಡಾಗ ಅಪಾರ ಪ್ರಮಾಣದ ಕೃಷಿ ಚಟುವಟಿಕೆ ನಡೆಸುತ್ತಿದ್ದ ಭೂಮಿ ನಾಶವಾಗುತ್ತದೆ.

ಇನ್ನು ಕೈಗಾರಿಕೆಗಳ ಪ್ರಭಾವದಿಂದ ರೈತರಿಗೆ ಒಂದಷ್ಟು ಲಾಭವಾದರೂ ಅದರ ಹಾನಿಯಂತೂ ಇದ್ದೇ ಇದೆ. ಇಂದು ಎಷ್ಟೋ ವಿದೇಶಿ ಕೈಗಾರಿಕಾ ಸಂಸ್ಥೆಗಳು ಜಾಗತೀಕರಣದ ನಂತರ ಭಾರತಕ್ಕೆ ಕಾಲಿಟ್ಟಿವೆ ಅವುಗಳು ರೈತನ ಭೂಮಿಯನ್ನು ಬಾಡಿಗೆಯ ಆಧಾರದ ಮೇಲೆ ಕೊಂಡು ಕೊಂಡು, ಆ ಕೃಷಿ ಭೂಮಿಯನ್ನು ವಿವಿಧ ರಾಸಯನಿಕಗಳಿಂದ ತುಂಬ ಬರಡಾಗುವಂತೆ ಮಾಡಿ ತಮಗೆ ಲಾಭ ಬರುವಂತೆ ಮಾಡಿಕೊಳ್ಳುತ್ತವೆ. ಲಾಭ ಬಂದನಂತರ ರೈತನಿಗೆ ಭೂಮಿಯನ್ನು ಹಿಂತಿರುಗಿಸುತ್ತವೆ. ಆದರೆ ಆ ವೇಳೆಗೆ ಭೂಮಿಯ ಸತ್ವ ಪಾತಳಕ್ಕಿಳಿದಿರುತ್ತವೆ. ಅಂತರ್ಜಲದ ಮಟ್ಟ ಕುಸಿದಿರುತ್ತವೆ ಭೂಮಿ ಯಾವುದಕ್ಕೂ ಬೇಡದ ಹಾಗೆ ಮಾರ್ಪಾಡು ಆಗುತ್ತದೆ.

ಜಾಗತೀಕರಣದ ವಿಷಯ ಬಂದಾಗ ಎಲ್ಲರೂ ತಾವು ಲಾಭಗಳಿಸಲು ಪ್ರಯತ್ನಿಸುತ್ತಾದೆ. ಈ ಹಿಂದೆ ಬಂದ ಎಷ್ಟೋ ಕಂಪೆನಿಗಳನ್ನು ನಾವು ಕಂಡಿದ್ದೇವೆ ಕೊಜೆಂಟ್ರಿಕ್ಸ್, SEZ ಗಳಂತ ಯೋಜನೆಗಳು ಬಂದಾಗ

ಅದರ ದುಷ್ಪರಿಣಾಮಗಳನ್ನು ಗಮನಿಸಬೇಕು. ದೇಶದಲ್ಲಿ ಕೃಷಿಯಲ್ಲಿ ಬದಲಾವಣೆಯಾಗಬೇಕೆಂಬುದು ನಿಜ. ಆದರೆ ಪರಿಸರಕ್ಕೆ ಮಾರಕವಾಗುವ ಯಾವ ಕೈಗಾರಿಕೆಗಳೂ ನಮಗೆ ಬೇಡ ಎಂಬುದನ್ನು ತಿಳಿದಿರಬೇಕು. ಒಂದು ಝಾಚ ಬಂದರೆ ಸಾವಿರಾರು ಹೆಕ್ಟೇರು ಅರಣ್ಯ ಭೂಮಿ ನಾಶಹೊಂದುತ್ತದೆ. ಪರಿಣಾಮ ಅನಾವೃಷ್ಟಿಯಾಗಿ ಬೆಳೆದ ಬೆಳೆ ಸರಿಯಾದ ಫಸಲು ನೀಡದೆ ನಷ್ಟವಾಗುತ್ತದೆ.

ಈ ಕಾರಣದಿಂದ ವಿಶ್ಲೇಷಣೆ ಏನೆಂದರೆ ಕೃಷಿ ರಂಗಕ್ಕೆ ಕೈಗಾರಿಕೀಕರಣ ಸ್ವಲ್ಪ ಮಟ್ಟಿಗೆ ಅಪಾಯ ಎಂದೇ ಕರೆಯಬಹುದು. ಸಾಂಪ್ರದಾಯಕ ಕೃಷಿಯ ಸ್ವರೂಪದೊಂದಿಗೆ ಹೊಸ ಹೊಸ ಪ್ರಯೋಗಗಳಿಗೆ ತೆರೆದುಕೊಂಡಾಗಲೇ ಸಹಜ ವ್ಯವಸಾಯ ಆಗುತ್ತದೆ. ಇಲ್ಲವಾದಲ್ಲಿ ಕೇವಲ ಯಾಂತ್ರೀಕೃತ ಕಾಂಕ್ರೀಟೀಕರಣವಾಗಿ ಅದು ಮಾರಕವಾಗಬಹುದು. ಬಹುಪಾಲು ಕೃಷಿಯ ಮತ್ತು ಕೃಷಿ ಭೂಮಿಗೆ ಕೊಡಲಿಯೇಟಾಗುತ್ತದೆ. ಆದ್ದರಿಂದ ಕೃಷಿಯ ಬಗ್ಗೆ ಗಂಭೀರವಾಗಿ ಚಿಂತನೆ, ಎಷ್ಟು ಕೈಗಾರಿಕೆಗಳ ಅಗತ್ಯವಿದೆಯೇ ಅಷ್ಟು ಸ್ಥಾಪನೆಯಾದರೆ ಸಾಕು. ಇನ್ನು ಉಳಿದ ಅನಾವಶ್ಯಕ ಕೇವಲ ಲಾಭವನ್ನು ಮಾತ್ರ ಬಯಸುವ ಕೃಷಿ ಚಟುವಟಿಕೆಗಳಿಗೆ ಧಕ್ಕೆ ತರುವಂತಹ ಯಾವ ಕೈಗಾರಿಕಾ ಯೋಜನೆಗಳೂ ಬೇಕಾಗಿಲ್ಲ ಎಂಬ ದೂರದೃಷ್ಟಿಯ ಚಿಂತನೆಯಾಗಬೇಕು. ಅದರ ಪರಿಣಾಮವನ್ನು ಗಮನದಲ್ಲಿರಿಸಿ ಕೃಷಿ ಪೂರಕ ಕೈಗಾರಿಕೆಗಳು ಸ್ಥಾಪನೆಯಾದರೆ ದೇಶಕ್ಕೆ ಒಳಿತು.

ಮಂಗಳೂರಿನಲ್ಲಿ ಕೈಗಾರಿಕಾಭಿವೃದ್ಧಿ :

ವಿಶ್ವವ್ಯಾಪ್ತಿಯಾಗಿರುವ ಕೈಗಾರಿಕೆಗಳು ಅದರಲ್ಲೂ ಮುಂದುವರಿದ ದೇಶಗಳಲ್ಲಿ ಕೈಗಾರಿಕೀಕರಣ ಉನ್ನತ ಪಾತ್ರ ವಹಿಸಿವೆ. ಅಮೇರಿಕ, ಇಂಗ್ಲೆಂಡ್, ಜಪಾನ್ ಚೀನಾಗಳಲ್ಲಿ ಬೃಹತ್ ಕೈಗಾರಿಕೆಗಳು ಜನರ ಜೀವನ ಮಟ್ಟವನ್ನು ಸುಧಾರಿಸುವ ಅದೇ ಪ್ರಕಾರವಾಗಿ ಭಾರತವು ಕೂಡ ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದೆ.

ಭಾರತದ ಭೌಗೋಳಿಕತೆಯನ್ನು ಅವಲೋಕಿಸಿದರೆ ಈ ನೆಲದಲ್ಲಿ ಬೃಹತ್ ಪ್ರಮಾಣದ ಖನಿಜ ಸಂಪತ್ತಿದೆ. ಭೂಮಿಯ ಆಳದಲ್ಲಿ ಅನೇಕ ಅಮೂಲ್ಯವಾದ ನಿಸರ್ಗ ಧಾತುಗಳಿವೆ. ಅವುಗಳನ್ನು ಹೊರತೆಗೆದು, ಶುದ್ಧೀಕರಿಸಲು ಮಾನವ ಶಕ್ತಿ ಸಾಕಾಗದು. ಅದಕ್ಕೆ ಬದಲಾಗಿ ಬೃಹತ್ ಉದ್ಯಮಗಳು ತಯಾರಾಗಿ ಅವು ದೇಶದ ಉಪಯೋಗಕ್ಕೆ ಬರುವಂತಾಗಬೇಕು. ೧೯೩೦ ರ ದಶಕದ ನಂತರ ಭಾರತದಲ್ಲಿ ಅನೇಕ ಬೃಹತ್ ಕೈಗಾರಿಕೆಗಳು ಕಾಲಿಟ್ಟಿವೆ. ದೇಶದ ಬೆಳವಣಿಗೆಯ ದರದಲ್ಲಿ ಬಹುಪಾಲು ನೀಡಿವೆ ಉದ್ಯಮ ಅಥವಾ ಉದ್ದಿಮೆಗಳು ಒಂದು ದೇಶದಲ್ಲಿ ಕಾರ್ಯಾಚರಿಸಲು ಅವುಗಳಿಗೆ ಪೂರಕ ವಾತಾವರಣ ಒದಗಿಸಿ ಕೊಡಬೇಕಾಗುತ್ತದೆ. ಅರ್ಥಿಕ ಸಂಪನ್ಮೂಲ

ಕ್ರೋಢೀಕರಣಕ್ಕೆ ನೆರವು ನೀಡಬೇಕಾಗುತ್ತದೆ. ಹೀಗೆ ಸಹಾಯ ನೀಡಿದಾಗ ಅನೇಕ ಉದ್ದಿಮೆಗಳು ಸ್ಥಾಪನೆಯಾಗುತ್ತವೆ.

ಭಾರತದ ಆರ್ಥಿಕತೆಯನ್ನು ಉದಾಹರಿಸುವುದಾದರೆ ದೇಶದಲ್ಲಿ ಅನೇಕ ಕೈಗಾರಿಕೆಗಳ ಸ್ಥಾಪನೆಯಾಗಿ ಅದರ ಮೂಲಕ ದೇಶದ ಆರ್ಥಿಕ ಪ್ರಗತಿ ಕೆಲವು ಅಂಕಗಳ ಮೇಲ್ಮೈಯನ್ನು ಕಂಡಿದೆ. ಅದರ ಮೂಲಕ ದೇಶದ ಶ್ರೀ ಸಾಮಾನ್ಯನ ತಲಾ ಆದಾಯ ಹೆಚ್ಚಾಗಿದೆ. ಅನೇಕ ನಿರುದ್ಯೋಗಿಗಳಿಗೆ ಕೆಲಸ ಸಿಗುವಂತಾಗಿದೆ. ನಮ್ಮ ದೇಶದಲ್ಲಿ ದೊರೆತ ಸಂಪನ್ಮೂಲಗಳನ್ನು ಉಪಯೋಗಿಸಿ ಇಲ್ಲಿಯೇ ತಯಾರಿಸಿ ಕಡಿಮೆ ಬೆಲೆಯಲ್ಲಿ ಜನರಿಗೆ ಸಿಗುವಂತಾಗಿದೆ.

ಮುಖ್ಯವಾಗಿ ಟಾಟಾ, ಬಿರ್ಲಾ, ಅಂಬಾನಿ, ಇನ್ಫೋಸಿಸ್, ಮಿತ್ತಲ್, ವಿಪ್ರೋ, ಹಿಂದೂಸ್ತಾನ್, ಅಶೋಕ್ ಲೇಲ್ಯಾಂಡ್, ಪೆಪ್ಸಿ ಕೋ, ಹೊಂಡಾ, ಸುಜುಕಿ ಮಾರುತಿ ಮೋಟಾರ್ಸ್, ಮಹಿಂದ್ರಾ ಟೆಕ್, ಕಿರ್ಲೋಸ್ಕರ್, ರಿಲಯನ್ಸ್, ಮೈಸೂರು ಸ್ಯಾಂಡಲ್ ನಂತಹ ಕೈಗಾರಿಕೆಗಳು ಸ್ಥಾಪನೆಯಾಗಿ ದೇಶದ ಆಶೋತ್ತರಗಳನ್ನು ಪೂರೈಸಿವೆ. ಸಾಮಾನವಾದ ಕಾರ್ಯದಕ್ಷತೆಯನ್ನು ಮೆರೆದಿವೆ. ಕಚ್ಚಾ ವಸ್ತುಗಳನ್ನು ಪರದೇಶಗಳಿಗೆ ಕಳುಹಿಸಿ ಅಲ್ಲಿಂದ ಸಿದ್ಧ ವಸ್ತುವನ್ನು ಆಮದು ಮಾಡಿಕೊಳ್ಳುವುದರ ಬದಲಿಗೆ ಕಚ್ಚಾ ವಸ್ತುಗಳನ್ನು ಇಲ್ಲಿಯೇ ಸಂಸ್ಕರಿಸಿ ಅದನ್ನು ದೇಶದಲ್ಲಿಯೇ ತಯಾರು ಮಾಡಿ ಮಾರಾಟ ಮಾಡಿದರೆ ಮಾರಾಟ ತೆರಿಗೆಯೊಂದಿಗೆ ಆಮದು ಶುಲ್ಕವು ಉಳಿಯುತ್ತದೆ. ವಿದೇಶಗಳಿಗೆ ಹರಿದು ಹೋಗುವ ಲಾಭವು ತಪ್ಪುತ್ತದೆ. ಅದರ ಪರಿಣಾಮ ಇನ್ನೂ ಹತ್ತಾರು ಬೃಹತ್ ಕಾರ್ಖಾನೆಗಳನ್ನು ಸ್ಥಾಪಿಸಲು ನೆರವಾಗುತ್ತದೆ.

ಕರ್ನಾಟಕದಲ್ಲಿ ಕೈಗಾರಿಕೆಗಳು ಸಾಕಷ್ಟಿವೆ. ಸಣ್ಣ ಕೈಗಾರಿಕೆಗಳಿಂದ ಆರಂಭವಾಗಿ ಬೃಹತ್ ಕೈಗಾರಿಕೆಗಳು ಇಲ್ಲಿವೆ. ಅನೇಕ ಉಕ್ಕಿನ ಕಾರ್ಖಾನೆಗಳು ಸಾಬೂನಿನ ಕಾರ್ಖಾನೆಗಳು, ಖನಿಜ ಆಧಾರಿತ ಕೈಗಾರಿಕೆಗಳು ಇಲ್ಲಿವೆ ಮೈಸೂರು ಮಿನರಲ್ಸ್ , ಅಲ್ಟ್ರಾಟೆಕ್ ಸಿಮೆಂಟ್, ಎಸಿಸಿ ಸಿಮೆಂಟ್, ಕಿರ್ಲೋಸ್ಕರ್ ಊ.ಓ.ಏ. ಖಇಚ (ವಿಶೇಷ ಆರ್ಥಿಕ ವಲಯ) ಗಾರ್ಮೆಂಟ್ ಕೈಗಾರಿಕೆ ಗುಡಿಕೈಗಾರಿಕೆಗಳು, ಮರದ ಮಿಲ್ಲುಗಳು ಜನರ ಆಶೋತ್ತರಗಳನ್ನು ಈಡೇರಿಸಿವೆ.

ಕರ್ನಾಟಕದ ಮಂಗಳೂರನ್ನು ಅವಲೋಕಿಸಿದರೆ ದಕ್ಷಿಣ ಕನ್ನಡ, ಉಡುಪಿಯಲ್ಲಿ ಅನೇಕ ಕೈಗಾರಿಕೆಗಳಿವೆ. ಎಂ.ಆರ್. ಪೌಲ್ ಸುಜ್ಲಾನ್ ಖಇಚ ಸುವರ್ಣ ಕಾಂಡಾರ್ ಯೋಜನೆ, ಎಂ.ಸಿ.ಎಫ್, ಸಕ್ಕರೆ ಕಾರ್ಖಾನೆಗಳು

ಸ್ಥಾಪಿತವಾಗಿವೆ. ಟೆಲಿ ಕಮ್ಯುನಿಕೇಶನ್, ಇಂಜಿನಿಯರಿಂಗ್ ಕೇಂದ್ರಗಳು ಸ್ಥಾಪನೆಯಾಗಿವೆ. ಈ ಕೈಗಾರಿಕೆಯಿಂದಾಗಿ ಲಕ್ಷಾಂತರ ಜನರಿಗೆ ಜೀವನಕ್ಕೆ ಒಂದು ದಾರಿಯಾಗಿದೆ. ನಂದಿಕೂರು ಉಷ್ಣ ವಿದ್ಯುತ್ ಸ್ಥಾವರದಿಂದ ಕರ್ನಾಟಕದ ವಿದ್ಯುತ್ ಅಭಾವ ನೀಗಿದೆ. ಕುದುರೆಮುಖ ಗಣಿಗಾರಿಕೆಯಿಂದ ಖನಿಜ ಸಂಪತ್ತಿನ ಹೇರಳ ಉಪಯೋಗವಾಗಿದೆ. ಮೀನು ಸಂಸ್ಕರಣ ಕೇಂದ್ರಗಳಿವೆ. ಮಂಜುಗಡ್ಡೆ ಘಟಕಗಳಿವೆ ಪವನ ವಿದ್ಯುತ್ ಯೋಜನೆಯಿದೆ. ಪ್ರಮುಖ ಸಾಗಾಣಿಕಾ ಕೇಂದ್ರಗಳಾದ (ಹಡಗು) ಬಂದರುಗಳಿವೆ. ನವ ಮಂಗಳೂರು, ಮಲ್ಪೆಗಳು, ಅಂತರಾಷ್ಟ್ರೀಯ ವ್ಯಾಪಾರಿ ಕೇಂದ್ರಗಳಾಗಿವೆ. ಆಹಾರ ಸಂಸ್ಕರಣಾ ಕೇಂದ್ರ ಉಪಕೇಂದ್ರಗಳಿವೆ. ಇವೆಲ್ಲವುಗಳಿಂದ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಎಂದು ವಿಶ್ಲೇಶಿಸಬಹುದು.

ಕೈಗಾರಿಕೀಕರಣದಲ್ಲಿ ಕೃಷಿಯ ಮಹತ್ವ :

ಒಂದು ದೇಶ ಮುಂದುವರಿಯಬೇಕಾದರೆ ಅದಕ್ಕೆ ಕೈಗಾರಿಕೆಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ ಕೈಗಾರಿಕೆಗಳಿಂದ ದೇಶದ ವರಮಾನವು ವೃದ್ಧಿಸುವುದರ ಜೊತೆಗೆ ವಿದೇಶಿ ಬಂಡವಾಳಗಳೂ ಹರಿದು ಬರುತ್ತದೆ. ತನ್ಮೂಲಕ ದೇಶದ ಉತ್ಪಾದನೆಯಲ್ಲಿ ವಾಣಿಜ್ಯ ವಹಿವಾಟಿನಲ್ಲಿ ಗಮನಾರ್ಹ ಏರಿಕೆ ಕಂಡುಬರುತ್ತದೆ ಹಾಗೆಯೇ ವಿದೇಶಿ ವಿನಿಮಯವು ಹೆಚ್ಚುತ್ತದೆ.

ಕೈಗಾರಿಕೆಗಳಿಲ್ಲದೇ ಯಾವುದೇ ದೇಶವೂ ಶೀಘ್ರವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂಬುದು ಸರ್.ಎಂ.ವಿಶ್ವೇಶ್ವರಯ್ಯನವರ ನಿಲುವಾಗಿತ್ತು ಅದಕ್ಕಾಗಿಯೇ ಅವರು "ಕೈಗಾರಿಕೆಗಳಿಗೆ ತೆರೆದುಕೊಳ್ಳಿ, ಇಲ್ಲವೇ ನಾಶವಾಗುವಿರಿ"ಎಂದು ಹೇಳುತ್ತಿದ್ದರು. ಇಂದು ನಾವು ಪ್ರಪಂಚದ ಎಲ್ಲ ಕ್ಷೇತ್ರಗಳಲ್ಲಿಯೂ ಕೈಗಾರಿಕೆಯನ್ನು ಕಾಣುತ್ತೇವೆ. ಬೃಹತ್, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳೂ ಸಹ ಇಂದು ಆಧುನಿಕ ಯಂತ್ರಗಳಿಗೆ ತೆರೆದು ಕೊಂಡಿವೆ. ಕೃಷಿ ಕ್ಷೇತ್ರದಲ್ಲೂ ಇದರ ದಟ್ಟ ಪ್ರಭಾವ ಕಾಣುತ್ತೇವೆ. ಯಾಂತ್ರೀಕರಣದಿಂದ ದೇಶೀಯ ಉತ್ಪಾದನೆ ಹೆಚ್ಚಿದೆ. ಬಹುಪಾಲು ರಫ್ತು ಈ ಕಾರಣದಿಂದಲೇ ವೇಗ ಪಡೆದುಕೊಂಡಿದೆ. ಸಾಂಪ್ರದಾಯಿಕ ಕೃಷಿ ಪದ್ಧತಿಗಿಂತಲೂ ಹೆಚ್ಚಿನ ಅಭಿವೃದ್ಧಿ ಯಾಂತ್ರೀಕರಣದ ಕೃಷಿಯಿಂದ ಉತ್ಪಾದನೆ ಹೆಚ್ಚಾಗಿದೆ. ಈ ಮೂಲಕ ವಿವಿಧ ಬೆಳೆಗಳನ್ನು ಅತ್ಯಂತ ಸಮರ್ಥವಾಗಿ ಅಧಿಕ ಮಾನವ ಶ್ರಮವಿಲ್ಲದೆ ಬೆಳೆಸಲಾಗಿದೆ. ಹಾಗೆಯೇ ಅದಕ್ಕೆ ಸರಿಯಾದ ಮಾರುಕಟ್ಟೆಯೂ ದೊರಕುವಂತಾಗಿದೆ. ಆಧುನಿಕ ಬೇಸಾಯ ಪದ್ಧತಿ ಜನಪ್ರಿಯಗೊಂಡಿದೆ. ದಿನಗಟ್ಟಲೆ ಮಾಡಬೇಕಾದ ಕೆಲಸ ಇಂದು ಕೆಲವೇ ಗಂಟೆಗಳಲ್ಲಿ ಮುಗಿಯುವಂತಾಗಿದೆ.

ಕೇವಲ ಕೃಷಿಯನ್ನು ಮಾತ್ರ ನಂಬಿಕೊಂಡಿದ್ದರೆ ಅದು ದೇಶದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಲಾರದು. ಹೊಸ ಹೊಸ ಉದ್ದಿಮೆಗಳಿಗೆ ತೆರೆದುಕೊಂಡಾಗ ಸಾಕಷ್ಟು ಉದ್ಯೋಗವಕಾಶಗಳೂ ಸೃಷ್ಟಿಯಾಗುತ್ತವೆ ಮತ್ತು ಅನೇಕರಿಗೆ ನಿರುದ್ಯೋಗದಿಂದ ಉದ್ಯೋಗ ದೊರಕುತ್ತದೆ. ಜನರ ಜೀವನ ಮಟ್ಟ ಸುಧಾರಣೆಯಾಗುತ್ತದೆ. ಆರ್ಥಿಕವಾಗಿ ಕುಟುಂಬಗಳೂ ಬಲಿಷ್ಟವಾಗುತ್ತದೆ.

ದೇಶದ ಉತ್ಪನ್ನವು ವರ್ಧಿಸುತ್ತದೆ. ಹತ್ತು ಜನರಿಗೆ ಕೆಲಸ ಮಾಡಲು ಅವಕಾಶ ನೀಡಿದಾಗ ಅಷ್ಟು ಜನರ ಬಡತನ ರೇಖೆಯಿಂದ ಮೇಲಕ್ಕೆ ಬಂದಂತಾಗುತ್ತದೆ. ಇದರಿಂದ ಜನರ ತಲಾ ಆದಾಯವೂ ಗಣನೀಯವಾಗಿ ಏರಿಕೆಯಾಗುತ್ತದೆ. ದೇಶದ ಅಭಿವೃದ್ಧಿ ಸೂಚ್ಯಂಕ ಮೇಲೇರುತ್ತದೆ.

ಕೃಷಿ ದೇಶದ ಬೆನ್ನೆಲುಬು ಎಂಬುದು ಸತ್ಯವಾದರೂ ಅವನ್ನೇ ನಂಬಿ ಕುಳಿತುಕೊಳ್ಳಲು ಆಗುವುದಿಲ್ಲ. ನಮಗೆ ಸರ್ವರಿಗೂ ಸುಧಾರಣೆ ತರುವ ಉದ್ದಿಮೆ, ಕೈಗಾರಿಕೆ, ಬಂಡವಾಳ, ಶಿಕ್ಷಣ, ಆರೋಗ್ಯ, ವ್ಯವಹಾರ ಕೇಂದ್ರಗಳು ಹೆಚ್ಚಾಗಿ ಸ್ಥಾಪನೆಯಾಗಬೇಕು. ಹೊಸ ಹೊಸ ಯಂತ್ರಗಳ ಆವಿಷ್ಕಾರವಾಗಬೇಕು ಕೃಷಿಯಲ್ಲಿಯೂ ಆಧುನಿಕ ಪದ್ಧತಿ ಬರಬೇಕು. ದೇಶದ ಆಹಾರ ಉತ್ಪಾದನೆ ಹೆಚ್ಚಾಗಿ ದೇಶ ಸ್ವಾವಲಂಬಿಯಾಗಬೇಕು. ಆರ್ಥಿಕ ವಲಯಗಳು ಹೆಚ್ಚು ಸ್ಥಾಪನೆಯಾಗಿ ರೈತರಿಗೆ ತಾವು ಬೆಳದ ಬೆಳಗಳಿಗೆ ಉತ್ತಮ ಬೆಲೆ ದೊರೆಯುವಂತಾಗಬೇಕು. ರೈತ ತಾನು ಬೆಳೆಯುವ ಬೆಳೆಗಳೊಂದಿಗೆ ವಾಣಿಜ್ಯ ಬೆಳೆಗಳ ಕಡೆಗೂ ಗಮನ ಹರಿಸಬೇಕು ವಿಶೇಷವಾಗಿ ವಿದೇಶಿ ವಿನಿಮಯ ತಂದುಕೊಡುವ ಬೆಳೆಗಳತ್ತ ಗಮನವಿಟ್ಟರೆ ಅತ್ಯಂತ ಲಾಭಕರವಾಗಬಲ್ಲದು.

ಕೈಗಾರಿಕೆಗಳು ಎಂದರೆ ಅವು ಭೂಮಿಯನ್ನು ಬರಡು ಮಾಡಿ ಕೊಳ್ಳೆ ಹೊಡೆಯದೇ ಕೃಷಿ ಮತ್ತು ಕೃಷಿ ಚಟುವಟಿಕೆಗಳಿಗೆ ಪೂರಕವಾಗಬೇಕು. ದೇಶದ ಬೆನ್ನೆಲುಬೇ ತುಂಡಾದರೆ ಅದನ್ನು ಸಮತೋಲನಗೊಳಿಸಲು ಕೈಗಾರಿಕೆಯಿಂದ ಮಾತ್ರವೇ ಆಗುವುದಿಲ್ಲ. ಅದಕ್ಕಾಗಿ ದೇಶದ ಮೂಲೆ ಮೂಲೆಯಲ್ಲಿ ಕೃಷಿ ವಿಶ್ವ ವಿದ್ಯಾಲಯಗಳ ಸ್ಥಾಪನೆಯಾಗಬೇಕು. ಅದಕ್ಕೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಬೇಕು. ಕೈಗಾರಿಕೆಗಳಿಂದ ಅನ್ನ ಉತ್ಪಾದಿಸಲು ಅಸಾಧ್ಯ ಎಂಬ ಅರಿವಿನೊಂದಿಗೆ ಜನರೂ ಸಹ ಕೇವಲ ಲಾಭದ ಮುಖವನ್ನು ಮಾತ್ರ ನೋಡದೇ ಕೃಷಿಯ ಕಡೆಗೂ, ಆಹಾರ ಬೆಳೆಗಳ ಕಡೆಗೂ ದೃಷ್ಟಿ ಹರಿಸಬೇಕು. ವಿವಿಧ ಮುಂದುವರಿದ ದೇಶಗಳಿಂದ ಕೃಷಿಗೆ ಪೂರಕವಾಗದ ಕೈಗಾರಿಕೆಗಳನ್ನು ತರಬೇಕು. ಅದನ್ನು ಬೆಳಸಬೇಕು. ತನ್ಮೂಲಕ ದೇಶದ ಅಭಿವೃದ್ಧಿಯಲ್ಲಿ ಕೈಗಾರಿಕೀರರಣವೂ ಪ್ರಮುಖ ಪಾತ್ರವಹಿಸಬೇಕು. ಅಂತಿಮವಾಗಿ ಕೃಷಿ ನಮ್ಮ ಮೂಲ ಆಶಯಗಳನ್ನು ಈಡೇರಿಸಬೇಕು.

ಕೃಷಿಯಲ್ಲಿ ಕೈಗಾರಿಕೆಯ ಪರಿಣಾಮ :

ದೇಶದ ಬೆನ್ನೆಲುಬಾದ ಕೃಷಿ ಕಾರ್ಯಗಳು ಸರಿಯಾಗಿ ನಡೆದಾಗ ಮಾತ್ರ ಆಹಾರ ಸ್ವಾವಲಂಬನೆ ಪಡೆಯಲು ಸಾಧ್ಯ. ಭಾರತ ಹಳ್ಳಿಗಳ ದೇಶ. ಕೃಷಿ ಈ ದೇಶದ ಮೂಲಕಸುಬು ಕೃಷಿ ಪ್ರಧಾನವಾದ ರಾಷ್ಟ್ರ ಈ ದೇಶದ ಶೇಕಡ ೭೫ ಜನ ಕೃಷಿಕರು. ತಮ್ಮ ಹೊಲದಲ್ಲಿ ದುಡಿದು ಜನರ ಹಸಿವನ್ನು ನೀಗಿಸುತ್ತಿರುವವರು.

ಇಂದು ಆಧುನಿಕತೆ ಎಲ್ಲೆಲ್ಲೂ ಲಗ್ಗೆ ಇಟ್ಟಿದೆ. ಹಿಂದೆ ಇದ್ದ ಸಾಂಪ್ರದಾಯಿಕ ಕೃಷಿ ಬಿಟ್ಟು ಆಧುನಿಕ ಪದ್ಧತಿಯ ಬೇಸಾಯಕ್ಕೆ ರೈತ ಮನ ಮಾಡಿದ್ದಾನೆ. ಹಿಂದಿನ ಕಾಲದಲ್ಲಿ ಇದ್ದ ಬೇಸಾಯದ ಕ್ರಮ ಇಂದು ಮರೆಯಾಗುತ್ತಿದೆ. ಹೊಸ ಹೊಸ ಯಂತ್ರಗಳ ಬಳಕೆಯಾಗುತ್ತಿದೆ. ಕೃಷಿ ರಂಗದಲ್ಲೂ ಬದಲಾವಣೆ ಕಂಡು ಬರುತ್ತಿದೆ. ಬೇರೆ ಬೇರೆ ರೀತಿಯ ಉತ್ತಮ ಇಳುವರಿ ನೀಡುವ ರಸಗೊಬ್ಬರಗಳು, ಬೀಜಗಳು, ಪದ್ಧತಿಗಳು ಬಂದಿವೆ. ಹೈಬ್ರಿಡ್ ತಳಿಗಳ ಆವಿಷ್ಕಾರವಾಗಿದೆ. ಹಾಗಾಗಿ ಈ ಹಿಂದಿನ ಕೃಷಿಗಿಂತಲೂ ಈಗಿನ ಕೃಷಿ, ಕೃಷಿಯೇತರ ಚಟುವಟಿಕೆಗಳಲ್ಲಿ ನಾವು ಬದಲಾವಣೆ ಕಾಣುತ್ತಿದ್ದೇವೆ.

ಕೃಷಿ ಚಟುವಟಿಕೆಗಳಲ್ಲಿ ಮಾನವ ಶ್ರಮವನ್ನು ಕೈಗಾರಿಕೆಗಳು ಕಡಿಮೆ ಮಾಡಿವೆ ಎನ್ನಬಹುದು. ಕೈಗಾರಿಕೆಗಳಿಂದ ಸರಿಯಾದ ಸಮಯಕ್ಕೆ ರೈತನಿಗೆ ಉಳುಮೆ, ಕೊಯ್ಲು, ನಾಟಿ ಮಾಡಲು ಹೊಸ ಹೊಸ ಯಂತ್ರಗಳು ಸಾಧ್ಯವಾಗಿಸಿವೆ. ಹಿಂದೆ ಇದ್ದ ಪದ್ದತಿಯಲ್ಲಿ ಎತ್ತು ಕೋಣಗಳಿಂದ ಸಾಗುವಳಿ ಮಾಡುತ್ತಿದ್ದ ಜಾಗದಲ್ಲಿ ಇಂದು ಪವರ್ ಟಿಲ್ಲರ್ ಗಳು ಬಂದಿವೆ. ಹೀಗೆ ನಾಟಿ ಮಾಡಿದ ಬೆಳೆಗಳು ಕೀಟಗಳಿಂದ ನಾಶವಾಗುವುದನ್ನು ತಡೆಗಟ್ಟಲು ಅನೇಕ ರಾಸಾಯನಿಕಗಳು ಮಾರುಕಟ್ಟೆಯಲ್ಲಿ ಬಂದಿವೆ. ಹೀಗೆ ರೈತನಿಗೆ ಆಗುತ್ತಿದ್ದ ಶ್ರಮದ ಜೊತೆಗೆ ನಷ್ಟವನ್ನು ಕಡಿಮೆ ಮಾಡಿವೆ.

ಅನೇಕ ಕೈಗಾರಿಕೆಗಳಿಂದ ಇಂದು ರೈತನ ಜೀವನ ಮಟ್ಟ ಸುಧಾರಿಸಿದೆ ತಾನು ಬೆಳದ ಬೆಳೆಗೆ ಯೋಗ್ಯ ಬೆಲೆ (ಮೌಲ್ಯ) ಸಿಗುವಂತಾಗಿದೆ. ಮಾರುಕಟ್ಟೆ ವ್ಯವಸ್ಥೆ ಸುಧಾರಿಸಿದೆ. ಸುಧಾರಿತವಾದ ಯಂತ್ರೋಪಕರಣಗಳ ಬಳಕೆಯಿಂದ ಎಷ್ಟೋ ಮಾನವನ ದುಡಿಮೆಯ ಶ್ರಮವನ್ನು ಕಷ್ಟವನ್ನು ಕಡಿಮೆ ಮಾಡಿವೆ. ಕೂಲಿ ಕೆಲಸಗಾರರು ದೊರಕದ ಇಂದಿನ ದಿನದಲ್ಲಿ ಯಂತ್ರಗಳ ಬಳಕೆ ಅನಿವಾರ್ಯವೂ ಆಗಿದೆ.

ಹಾಗೆಯೇ ಈ ಕೈಗಾರಿಕೆಗಳಿಂದ ಭೂಮಿಯ ಒಳಗಿನ ಸತ್ವ ಕಡಿಮೆ ಆಗುವ ಸಂಭವವಂತೂ ಇದ್ದೇ ಇದೆ ಹಾಗೂ ಆದಾಷ್ಟು ಮಟ್ಟಿಗೆ ಭೂಮಿ ಬಂಜರಾಗದಂತೆ ತಡೆಯುವ ಅನಿವಾರ್ಯವೂ ಇದೆ.

ಹಿಂದೆ ಸಾಂಪ್ರದಾಯಿಕ ಕೃಷಿಯಲ್ಲಿ ಧಾನ್ಯವನ್ನು ಬೇರ್ಪಡಿಸಲು ಕೆಲವು ದಿನಗಳೇ ಬೇಕಾಗಿದ್ದವು. ಆದರೆ ಈಗ ಸುಧಾರಿತ ತಂತ್ರಜ್ಞಾನದಿಂದ ಕೆಲವೇ ಗಂಟೆಗಳಲ್ಲಿ ಧಾನ್ಯ ಬೇರ್ಪಡಿಸಿ ಆಗಿರುತ್ತವೆ. ಒಂದು ದಿನದ ಹೆಚ್ಚಿನ ಸಮಯ ಇದಕ್ಕೆ ನಷ್ಟವಾಗುತ್ತಿದ್ದುದು ತಪ್ಪಿದೆ. ಅಂತೆಯೇ ಮಾನವನ ದಿನದ ಒಂದಷ್ಟು ಸಮಯವನ್ನು ಇನ್ನಿತರ ಕೆಲಸಗಳಿಗೆ ಮೀಸಲಿಡಲು ಸಾಧ್ಯವಾಗಿದೆ.

ಬೆಳೆದ ಬೆಳೆಗೆ ಯೋಗ್ಯ ಬೆಲೆಯನ್ನು ನಿಗದಿಮಾಡಿ ಅದನ್ನು ಸಂಸ್ಕರಿಸಿ ಕೊಡಲು ಬೃಹತ್ ಯಂತ್ರಗಳು ಇಂದಿನ ಕೈಗಾರಿಕಾ ಕ್ರಾಂತಿಯಿಂದ ಆಗಿದೆ. ಹಾಗೆಯೇ ಬೆಳೆಯು ಹಾಳಾಗದಂತೆ ಕಾಪಾಡಿಕೊಳ್ಳಲು ಕೈಗಾರಿಕೆಗಳಿಂದ ಉತ್ಪಾದನೆಯಾದ ವಸ್ತುಗಳಿಂದ ಸಾಧ್ಯವಾಗಿದೆ.

ಒಂದರ್ಥದಲ್ಲಿ ಕೈಗಾರಿಕೆಗಳು ಅನೇಕ ಜನರು ಕೆಲಸಗಳನ್ನು ಕಿತ್ತು ಕೊಂಡಿರುವುದು ಸತ್ಯವಾದರೂ, ವೇಗದ ಬದುಕಿಗೆ ಹೊಂದಿಕೊಂಡು ಹೋಗಲು ಕೈಗಾರಿಕೆಗಳು ಅತೀ ಅಗತ್ಯ ಮತ್ತು ಪ್ರಮುಖವಾಗಿದೆ. ಹಾಗೆಂದು ಎಲ್ಲ ಕಾರ್ಯಗಳಿಗೂ ಯಂತ್ರಗಳೇ ಬೇಕೆಂದಿಲ್ಲ. ಎಲ್ಲಿ ಎಷ್ಟು ಅಗತ್ಯವೋ ಅಷ್ಟು ಬಳಸಿದರೆ ಪರಿಣಾಮ ಲಾಭದಾಯಕ.

ಇಂದು ನಮಗೆ ಬೇಕಾಗಿರುವುದು ಮೂಲಕೃಷಿ ಪದ್ಧತಿಯೊಂದಿಗೆ ಆಧುನಿಕ ಬೇಸಾಯವು ಆಗಿದೆ. ಅಭಿವೃದ್ಧಿ ಪರವಾದ ದೃಷ್ಟಿ ಕೋನವಾಗಿದೆ. ಇಡೀ ದೇಶದ ಆಹಾರ ಸಮಸ್ಯೆಯನ್ನು ತೀರಿಸಲು ಕೈಗಾರಿಕೆಗಳು ಅವುಗಳಿಂದ ಉತ್ಪತ್ತಿಯಾದ ಉತ್ಪಾದನಾ ವಸ್ತುಗಳು ಬೇಕೆ ಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮದು ಅಭಿವೃದ್ಧಿ ಹೊಂದುತ್ತಿರುವ ದೇಶವಾದ ಕಾರಣ ಅತೀ ಶೀಘ್ರವಾಗಿ ಕೃಷಿಯಲ್ಲಿ ಸ್ವಾವಲಂಬನೆಯಾಗಿ ಎದ್ದು ನಿಲ್ಲಬೇಕು. ಭೂಮಿ ಮುಂದಿನ ಜನಾಂಗಕ್ಕೂ ಅನ್ನ ನೀಡುವಂತಾಗಬೇಕು. ಜನರ ಆರ್ಥಿಕ ಪರಿಸ್ಥಿತಿ ಕೃಷಿಯಿಂದ ಸುಧಾರಿಸಬೇಕು. ಮಾರುಕಟ್ಟೆ ವ್ಯವಸ್ಥೆ ಬದಲಾಗಿ ರೈತನಲ್ಲಿ ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗುತ್ತದೆಂಬ ಆಶಾದಾಯಕ ವಾತಾವರಣ ನಿರ್ಮಿಸಬೇಕು ಇದು ಕೈಗಾರಿಕೆಗಳ ಪ್ರಭಾವದಿಂದ ಆಗಬೇಕು.

ಅಧ್ಯಯನ ಸ್ಥಳದ ಪರಿಚಯ

ಅಧ್ಯಯನದ ಸಮಸ್ಯೆಗಳ ವಿಶ್ಲೇಷಣೆ ಹಾಗೂ ಪರೀಕ್ಷೆಗೆ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಳ್ಳಲಾಗುವುದು. ಜಿಲ್ಲೆಯಲ್ಲಿ ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಪುತ್ತೂರು ಮತ್ತು ಸುಳ್ಯ ಎಂಬ ೫ ತಾಲೂಕುಗಳಿವೆ. ವಿವರವಾದ ವಿಶ್ಲೇಷಣೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕನ್ನು ಆರಿಸಲಾಗಿದೆ. ಇಲ್ಲಿನ ಜನರು ಸಹಜವಾಗಿಯೇ ಸಾಹಸ ಪ್ರಿಯರು ಹಿಗಾಗೀ ಎಲ್ಲಾ ಕ್ಷೇತ್ರದಲ್ಲಿಯೂ ಅದ್ವಿತೀಯ ಸಾಧನೆ . ಅನಾದಿಕಾಲದಿಂದಲೂ ವ್ಯವಸಾಯ ಮತ್ತು ಮೀನುಗಾರಿಕೆ ಇಲ್ಲಿನ ಜನರ ಬದುಕಿನ ಮೂಲಾಧಾರ.

ವ್ಯವಸಾಯದಲ್ಲಿ ಭತ್ತವೇ ಪ್ರಧಾನ ಬೆಳೆಯಾಗಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಭತ್ತದ ಕೃಷಿಯ ಪ್ರಮಾಣ ಇಳಿಮುಖವಾಗುತ್ತಿದೆ. ಕೃಷಿಗೆ ತಗಲುವ ವೆಚ್ಚದಲ್ಲಿನ ಸತತ ಹೆಚ್ಚಳ, ವಾಣಿಜ್ಯ ಉದ್ದೇಶಗಳಿಗೆ ಕೃಷಿ ಭೂಮಿಯ ಬಳಕೆ, ಕೃಷಿ ಕಾರ್ಮಿಕರ ಅಲಭ್ಯತೆ, ನೀರಾವರಿ ಸೌಲಭ್ಯದ ಕೊರತೆ ಇತ್ಯಾದಿಗಳನ್ನು ಕಾರಣವಾಗಿ ಕೊಡಬಹುದು. ಆದ್ದರಿಂದ ಜಿಲ್ಲೆಯ ಅಗತ್ಯದ ಶೇಕಡ ೬೦ ರಷ್ಟು ಪ್ರಮಾಣವನ್ನು ಮಾತ್ರ ಇಲ್ಲಿ ಬೆಳೆಯಲಾಗುತ್ತಿದೆ. ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗು, ಕೊಕ್ಕೋ ಮುಂತಾದ ಬೆಳೆಗೆ ಕಳೆದ ಎರಡು ದಶಕಗಳಲ್ಲಿ ರೈತರು ಆದ್ಯತೆ ನೀಡುತ್ತಿದ್ದಾರೆ.

ಅಧ್ಯಾಯ –೪: ಮಾಹಿತಿ ವಿಶ್ಲೇಷಣೆ

ಅಧ್ಯಾಯ :೪ ಮಾಹಿತಿ ವಿಶ್ಲೇಷಣೆ

ನಮ್ಮ ಸಮೀಕ್ಷೆಯು ಕೃಷಿಯ ಮೇಲೆ ಕೈಗಾರಿಕೆಯು ಯಾವ ರೀತಿ ಪ್ರಭಾವ ಬೀರಿದೆ ಎಂಬ ಉತ್ತಮ ನಿಷ್ಕರ್ಷ ಮಾಹಿತಿಯನ್ನು ನೀಡುತ್ತದೆ. ಕೈಗಾರಿಕೀಕರಣದಿಂದ ಬೆಳೆಗಳಲ್ಲಿ ಬದಲಾವಣೆ ಆಹಾರ ಉತ್ಪಾದನೆಯ ಮೇಲೆ ಪರಿಣಾಮ ಹಾಗೂ ಕೈಗಾರಿಕೀಕರಣದಿಂದ ಕೃಷಿಗೆ ಯಾವ ರೀತಿ ಹಾನಿಯಾಗಿದೆ ಎಂಬುದನ್ನು ಕೇಂದ್ರೀಕರಿಸುತ್ತದೆ.

ಮಾಹಿತಿಯನ್ನು ಪ್ರಶ್ನಾವಳಿ ಸಂದರ್ಶನ ಮತ್ತು ಅವಲೋಕನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಯನದಲ್ಲಿ ರೇಖಾಚಿತ್ರಗಳನ್ನು ಮತ್ತು ಕೋಷ್ಟಕಗಳನ್ನು ಅಳವಡಿಸಲಾಗಿದೆ. ಈ ಅಧ್ಯಯನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಿಂದ ಮಾಹಿತಿಯನ್ನು ಪಡೆಯಲಾಗಿದೆ. ಮುಖ್ಯವಾಗಿ ಮಂಗಳೂರಿನ ಗ್ರಾಮೀಣ ಪ್ರದೇಶದಲ್ಲಿ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಂಗಳೂರು ಪರಿಸರದ ಸೂರಿಂಜೆ, ನಿಡ್ಡೋಡಿ, ಗಂಜಿಮಠ, ಸುಂಕದಕಟ್ಟೆ, ಬಜಪೆ, ಪರಾರಿ ಇತ್ಯಾದಿ ಸ್ಥಳಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮೂಲದಿಂದ ಸಂಗ್ರಹಿಸಲಾದ ಅಂಕಿ ಅಂಶಗಳ ವಿಶ್ಲೇಷಣೆಯನ್ನು ಕೆಳಗೆ ನಮೂದಿಸಲಾಗಿದೆ.

೪.೧ ಮಾಹಿತಿದಾರರ ವಯೋಮಾನ


ಕೆಳಗಿನ ಕೋಷ್ಟಕದಲ್ಲಿ ಮಾಹಿತಿದಾರರ ವಯೋಮಾನವನ್ನು ತಿಳಿಯಬಹುದು.
ಕೋಷ್ಟಕ ೪.೧ ರಲ್ಲಿ ಮದುವೆಯಾದವರ ವಯೋಮಾನ ಹಾಗೂ ಮದುವೆ ಆಗದೆ ಇರುವವರ ವಯಸ್ಸಿನ ಸಂಖ್ಯೆಯನ್ನು ತೋರಿಸಲಾಗಿದೆ. ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಗ್ರಾಮೀಣ ಪ್ರದೇಶದ ರೈತರಿಂದ ಮಾಹಿತಿಯನ್ನು ಪಡೆಯಲಾಗಿದೆ.

ಕೋಷ್ಟಕ ೪.೧ ಮಾಹಿತಿದಾರರ ವಯೋಮಾನ

ಕ್ರಮ ಸಂಖ್ಯೆ	ವಯೋಮಾನ	ಅವಿವಾಹಿತರು	ವಿವಾಹಿತರು
೧	೧೮–೨೮	೨೫	೪
೨	೨೯–೩೮	೦೨	೨೫
೩	೩೯–೪೮	೦	೨೧
೪	೪೯–೫೮	೦೧	೧೧
೫	೫೯ ಕ್ಕಿಂತ ಮೇಲ್ಪಟ್ಟು	೦	೧೧

ಮೂಲ: ಸಂಶೋಧಕರ ಕ್ಷೇತ್ರ ಕಾರ್ಯಾಧರಿತ

ಕೋಷ್ಟಕದಲ್ಲಿ ೧೮ ವಯಸ್ಸಿನಿಂದ ಹಿಡಿದು ೬೮ ವಯಸ್ಸಿನವರೊಗಿನ ಕೃಷಿಕರ (ಮಾಹಿತಿದಾರ) ಮಾಹಿತಿಯನ್ನು ತೋರಿಸಲಾಗಿದೆ. ಇಲ್ಲಿ ಒಟ್ಟು ೨೮ ಮಂದಿ ಅವಿವಾಹಿತ ಕೃಷಿಕ ಮಾಹಿತಿದಾರರು ಹಾಗೂ ೭೨ ಮಂದಿ ವಿವಾಹಿತ ಮಾಹಿತಿದಾರರ ವಯೋಮಾನವನ್ನು ತೋರಿಸಲಾಗಿದೆ. ಇಲ್ಲಿ ಮದುವೆಯಾಗಿರುವ ಮಾಹಿತಿದಾರರ ಸಂಖ್ಯೆಯು ಹೆಚ್ಚಾಗಿರುತ್ತದೆ, ಇದನ್ನು ಮುಂದಿನ ನಕ್ಷೆಯಿಂದ ತಿಳಿಯಬಹುದು. ಸಾಮನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಬೇಸಾಯಗಾರರು ಹೆಚ್ಚಾಗಿ ವಿವಾಹಿತರಾಗಿರುತ್ತಾರೆ ಎಂದು ಸಮೀಕ್ಷೆಯ ಮೂಲಕ ತಿಳಿಯುತ್ತದೆ.



ನಕ್ಷೆ ೪.೧ ಮಾಹಿತಿದಾರರ ವಯೋಮಾನ


೪.೨ ಮಾಹಿತಿದಾರರ ಶಿಕ್ಷಣ ಮಟ್ಟ

ಕೋಷ್ಟಕ ೪.೨ ಮಾಹಿತಿದಾರರ ಶಿಕ್ಷಣ ಮಟ್ಟ

ಕ್ರಮ ಸಂಖ್ಯೆ	ಶಿಕ್ಷಣ ಮಟ್ಟ	ಮಾಹಿತಿದಾರರ ಸಂಖ್ಯೆ
೧	ಪ್ರಾಥಮಿಕ	೪೦
೨	ಪ್ರೌಢ	೩೨
೩	ಪದವಿ ಪೂರ್ವ	೧೩
೪	ಪದವಿ	೦೬
೫	ಸ್ನಾತಕೋತ್ತರ	೦೬
೬	ಅಶಿಕ್ಷಿತರು	೦೩

ಕೋಷ್ಟಕ ೪.೨ ರಲ್ಲಿ ಮಾಹಿತಿದಾರರ ಶಿಕ್ಷಣ ಮಟ್ಟವನ್ನು ತಿಳಸಲಾಗಿದೆ. ಒಟ್ಟು ೧೦೦ ಮಂದಿ ಮಾಹಿತಿದಾರರಲ್ಲಿ ೪೦ ಮಂದಿ ಪ್ರಾಥಮಿಕ ಶಿಕ್ಷಣವನ್ನು, ೩೨ ಮಂದಿ ಪ್ರೌಢ ಶಿಕ್ಷಣವನ್ನು ೧೩ ಮಂದಿ ಪದವಿಪೂರ್ವ ಶಿಕ್ಷಣವನ್ನು, ೬ ಮಂದಿ ಪದವಿ ಶಿಕ್ಷಣವನ್ನು, ೩ ಮಂದಿ ಅಶಿಕ್ಷಿತರು ಹಾಗೂ ಉಳಿದ ೬ ಮಂದಿ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಇಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದವರ ಸಂಖ್ಯೆಯು ಅತ್ಯಂತ ಹೆಚ್ಚಿದ್ದು, ಸ್ನಾತಕೋತ್ತರ ಶಿಕ್ಷಣವನ್ನು ಪಡೆದವರ ಸಂಖ್ಯೆಯು ತೀರಾ ಕಡಿಮೆ ಇದೆ.

ಮಂಗಳೂರು ನಗರ ಪ್ರದೇಶಗಳಲ್ಲಿ, ಶಿಕ್ಷಣದ ಗುಣಮಟ್ಟವು ಉತ್ತಮವಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣದ ಗುಣಮಟ್ಟವು ಕಡಿಮೆ ಇದೆ. ಸುಮಾರು ೭೦% ಮಾಹಿತಿದಾರರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣಕ್ಕೆ ಓದನ್ನು ನಿಲ್ಲಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಶಿಕ್ಷಣ ಮಟ್ಟ ತೀರ ಕಡಿಮೆ ಇದೆ. ಇದರಿಂದ ಗ್ರಾಮೀಣ ಪ್ರದೇಶದ ಜನರು ತಮ್ಮ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಸುತ್ತಿದ್ದಾರೆ. ಈ ಕೆಳಗಿನ ನಕ್ಷೆಯು ಗ್ರಾಮೀಣ ಪ್ರದೇಶದ ಮಾಹಿತಿದಾರರ ಶಿಕ್ಷಣ ಮಟ್ಟವನ್ನು ತೋರಿಸುತ್ತದೆ.



ನಕ್ಷೆ ೪.೨ ಮಾಹಿತಿದಾರರ ಶಿಕ್ಷಣ ಮಟ್ಟ


೪.೩ ಮಾಹಿತಿದಾರರ ಕೌಟಂಬಿಕ ಹಿನ್ನಲೆ

ಕೋಷ್ಟಕ ೪.೩ ಮಾಹಿತಿದಾರರ ಕೌಟಂಬಿಕ ಹಿನ್ನಲೆ

ಕ್ರಮ ಸಂಖ್ಯೆ	ವಯೋಮಾನ	ವಿಭಕ್ತ ಕುಟುಂಬ	ಅವಿಭಕ್ತ ಕುಟುಂಬ
೧	೧೮-೨೮	೨೦	೬
೨	೨೯-೩೮	೨೧	೭
೩	೩೯-೪೮	೧೮	೩
೪	೪೯-೫೮	೦೮	೪
೫	೫೯ ಕ್ಕಿಂತ ಹೆಚ್ಚು	೧೦	೧

ಕೋಷ್ಟಕ ೪.೩ ರಲ್ಲಿ ಮಾಹಿತಿದಾರರ ವಯೋಮಾನ ಮತ್ತು ಕೌಟುಂಬಿಕ ಹಿನ್ನಲೆಯನ್ನು ತೋರಿಸಲಾಗಿದೆ. ಒಟ್ಟು ೧೦೦ ಮಂದಿ ಮಾಹಿತಿ ನೀಡಿದವರಲ್ಲಿ ಸುಮಾರು ೭೭ ಮಂದಿ ವಿಭಕ್ತ ಕುಟುಂಬ, ೨೩ ಮಂದಿ ಅವಿಭಕ್ತ ಕುಟುಂಬಕ್ಕೆ ಸೇರಿದ್ದಾರೆ.

ರೈತಾಪಿ ಜನರು ಎಂದ ಕೂಡಲೇ ಅವರು ಅವಿಭಕ್ತ ಕುಟುಂಬದಲ್ಲಿ ಇರುವವರು ಎಂಬ ಕಲ್ಪನೆ ಇದೆ. ಅಧ್ಯಯನದ ಪ್ರಕಾರ ಹಳ್ಳಿಗಳಲ್ಲಿಯೂ ನಗರ ಪ್ರದೇಶದ ಹಾಗೆ ವಿಭಕ್ತ ಕುಟುಂಬದ ಜನರು ಹೆಚ್ಚು ಕಾಣಸಿಗುತ್ತಾರೆ. ನಗರಗಳಂತೆ ಗ್ರಾಮೀಣ ಪ್ರದೇಶದ ಜನರು ವಿಭಕ್ತ ಕುಟುಂಬ ಜೀವನಕ್ಕೆ ಹೆಚ್ಚಿನ ಒಲವು ಹೊಂದಿದ್ದಾರೆ ಎಂದು ತಿಳಯುತ್ತದೆ. ಈ ಮುಂದಿನ ನಕ್ಷೆಯು ಇದನ್ನು ತಿಳಸುತ್ತದೆ.



ನಕ್ಷೆ ೪.೩ ಮಾಹಿತಿದಾರರ ಕೌಟುಂಬಿಕ ಹಿನ್ನಲೆ

೪.೪ ಕೃಷಿ ಭೂಮಿ ಕಡಿಮೆಯಾಗಲು ಕಾರಣ

ಕೋಷ್ಟಕ ೪.೪ ಕೃಷಿ ಭೂಮಿ ಕಡಿಮೆಯಾಗಲು ಕಾರಣ.


ಕ್ರಮ ಸಂಖ್ಯೆ	ಕಾರಣ	ಮಾಹಿತಿದಾರರ ಸಂಖ್ಯೆ
೧	ಕೈಗಾರಿಕೆ	೪೦
೨	ನಗರೀಕರಣ	೨೪
೩	ಜನಸಂಖ್ಯೆ	೧೫
೪	ನೀರಾವಾರಿ ಸಮಸ್ಯೆ	೧೧
೫	ಸರಕಾರದ ನಿರ್ಲಕ್ಷ	೧೦

ಮೇಲಿನ ಕೋಷ್ಟಕವು ಕೃಷಿ ಭೂಮಿ ಕಡಿಮೆಯಾಗಲು ಮುಖ್ಯ ಕಾರಣಗಳನ್ನು ತಿಳಿಸುತ್ತದೆ. ನಮ್ಮ ಪ್ರಶ್ನಾವಳಿಗೆ ಮಾಹಿತಿ ನೀಡಿದ ೧೦೦ ಮಂದಿ ಮಾಹಿತಿದಾರರಲ್ಲಿ, ೪೦ ಮಂದಿ ಕೈಗಾರಿಕೆ, ೨೪ ಮಂದಿ

ನಗರೀಕರಣ, ೧೫ ಮಂದಿ ಜನಸಂಖ್ಯೆ, ೧೧ ಮಂದಿ ನೀರಾವರಿ ಸಮಸ್ಯೆ ಮತ್ತು ೧೦ ಮಂದಿ ಸರಕಾರದ ನಿರ್ಲಕ್ಷ ಎಂಬ ಕಾರಣಗಳನ್ನು ಕೃಷಿ ಭೂಮಿ ಕಡಿಮೆಯಾಗಲು ನೀಡಿದ್ದಾರೆ. ಈ ಮಾಹಿತಿದಾರರ ಪ್ರಕಾರ ಕೃಷಿ ಭೂಮಿಯು ಕೈಗಾರಿಕೆಯಿಂದಾಗಿ ಹೆಚ್ಚು ಆವ್ರತಗೊಂಡಿದೆ, ಎಂಬುದನ್ನು ಶೇಕಡ ೪೦ ಉ್ವ ಮಾಹಿತಿದಾರರು ತಿಳಿಯಪಡಿಸಿದ್ದಾರೆ ಹಾಗೂ ಶೇಕಡ ೧೦ ರ ಜನರು ಸರಕಾರದ ನಿರ್ಲಕ್ಷವೇ ಕಾರಣ ಎಂದಿದ್ದಾರೆ.

ಸಂಶೋಧನಾ ಉದ್ದೇಶ ೪ ರ ಪ್ರಕಾರ ಕೈಗಾರೀಕರಣದಿಂದ ಕೃಷಿ ಭೂಮಿ ಕಡಿಮೆಯಾಗಿದೆ. ಎಂದು ಇಲ್ಲಿ ಸ್ಪಷ್ಟವಾಗುತ್ತದೆ. ನಗರೀಕರಣವು ಕೈಗಾರೀಕರಣದಿಂದಲೇ ಉಂಟಾಗಿರುವುದರಿಂದ ಸುಮಾರು ೭೦% ಕೈಗಾರೀಕರಣವೇ ಕೃಷಿ ಭೂಮಿ ಕಡಿಮೆಯಾಗಲು ಮುಖ್ಯ ಕಾರಣವಾಗಿದೆ. ಈ ಕೆಳಗಿನ ನಕ್ಷೆಯು ಅದನ್ನು ಸ್ಪಷ್ಟಪಡಿಸುತ್ತದೆ.

ಕೃಷಿ ಭೂಮಿ ಕಡಿಮೆಯಾಗಲು ಕಾರಣ.



ನಕ್ಷೆ ೪.೪ ಕೃಷಿ ಭೂಮಿ ಕಡಿಮೆಯಾಗಲು ಕಾರಣ


೪.೫ ಮಾಹಿತಿದಾರರ ಕುಟುಂಬದ ವಾರ್ಷಿಕ ಆದಾಯ

ಕೋಷ್ಟಕ ೪.೫ ಮಾಹಿತಿದಾರರ ಕುಟುಂಬದ ವಾರ್ಷಿಕ ಆದಾಯ

ಕ್ರಮ ಸಂಖ್ಯೆ	ವಾರ್ಷಿಕ ಆದಾಯ(ರೂ)	ಮಾಹಿತಿದಾರರ ಸಂಖ್ಯೆ
೧	೬,೦೦೦-೧೦,೦೦೦	೧೮
೨	೧೧,೦೦೦-೧೫,೦೦೦	೩೦
೩	೧೬,೦೦೦-೨೦,೦೦೦	೪೧
೪	೨೦,೦೦೦ ಕ್ಕಿಂತ ಮೇಲ್ಪಟ್ಟು	೧೧

ಈ ಕೋಷ್ಟಕದಲ್ಲಿ ಮಾಹಿತಿ ನೀಡಿದವರಲ್ಲಿ ೧೮ ಮಂದಿ ರೂಪಾಯಿ ೬,೦೦೦ ರಿಂದ ೧೦,೦೦೦, ೩೦ ಮಂದಿ ರೂಪಾಯಿ ೧೧,೦೦೦ ದಿಂದ ೧೫,೦೦೦, ೪೧ ಮಂದಿ ರೂಪಾಯಿ ೧೬,೦೦೦ ದಿಂದ ೨೦,೦೦೦ ಹಾಗೂ ೧೧ ಮಂದಿ ೨೦,೦೦೦ ಕ್ಕಿಂತಲೂ ಹೆಚ್ಚು ವಾರ್ಷಿಕ ಆದಾಯವನ್ನು ಗಳಸುತ್ತಿದ್ದಾರೆ. ಇದರಲ್ಲಿ ಸುಮಾರು ೮೯% ಜನರು ರೂಪಾಯಿ ೨೦,೦೦೦ ಕ್ಕಿಂತಲೂ ಕಡಿಮೆ ವಾರ್ಷಿಕ ಆದಾಯವನ್ನು ಪಡೆಯುತ್ತಿದ್ದಾರೆ.

ಈ ಎಲ್ಲಾ ಮಾಹಿತಿದಾರರು ಕೃಷಿ ಅವಲಂಬಿತ ಜೀವನ ನಡೆಸುತ್ತಿದ್ದಾರೆ ಆದರೆ ಕೃಷಿಯು ಇವರಿಗೆ ಉತ್ತಮ ಆದಾಯ ಗಳಿಸಿ ಕೊಡುವಲ್ಲಿ ವಿಫಲವಾಗಿದೆ. ಕಾರಣ ಹೆಚ್ಚಿನ ಭೂಮಿ ಕೃಷಿ ಚಟುವಟಿಕೆಗೆ ಬಳಸಲು ಸಾಧ್ಯವಾಗುತ್ತಿಲ್ಲ. ನೀರಾವರಿ ಸಮಸ್ಯೆ, ಕಾರ್ಮಿಕರ ಸಮಸ್ಯೆ, ತಂತ್ರಜ್ಞಾನದ ಕೊರತೆ, ವಿಷಪೂರಿತ ರಾಸಯಾನಿಕಗಳ ಬಳಕೆ ಮುಂತಾದ ಸಮಸ್ಯೆಗಳಿಂದ ಕೃಷಿ ಭೂಮಿಯಿದ್ದರೂ ಕೃಷಿ ಮಾಡಲು ಸಾಧ್ಯವಾಗುತ್ತಿಲ್ಲ. ಮಾಹಿತಿಯ ಪ್ರಕಾರ ಕೃಷಿಕರ ವಾರ್ಷಿಕ ಆದಾಯ ಕಡಿಮೆ ಇರುವುದರಿಂದ ಕೃಷಿ ಚಟುವಟಿಕೆಗೆ ಬೇಕಾದ ಉತ್ತಮ ಬಂಡವಾಳದ ಕೊರತೆ ಎದುರಾಗುತ್ತದೆ. ಈ ಮುಂದಿನ ನಕ್ಷೆಯು ಅದನ್ನು ಸ್ಪಷ್ಟಪಡಿಸುತ್ತದೆ.



ನಕ್ಷೆ ೪.೫ ಮಾಹಿತಿದಾರರ ಕುಟುಂಬದ ವಾರ್ಷಿಕ ಆದಾಯ


೪.೬ ರೈತರು ಎದುರಿಸುತ್ತಿರುವ ಸಮಸ್ಯೆಗಳು

ಕೋಷ್ಟಕ ೪.೬ ರೈತರು ಎದುರಿಸುತ್ತಿರುವ ಸಮಸ್ಯೆಗಳು

ಕ್ರಮ ಸಂಖ್ಯೆ	ಸಮಸ್ಯೆಗಳು	ಮಾಹಿತಿದಾರರ ಸಂಖ್ಯೆ
೧	ಭೂ ಹಿಡುವಳಿ ಗಾತ್ರ	೩೫
೨	ಹಣದ ಸಮಸ್ಯೆ	೪೫
೩	ಮಾರುಕಟ್ಟೆ	೦೩
೪	ಕೈಗಾರಿಕೆ	೧೦
೫	ತಂತ್ರಜ್ಞಾನದ ಕೊರತೆ	೦೧
೬	ಕಾರ್ಮಿಕರ ಕೊರತೆ	೦೬

ಈ ಕೋಷ್ಟಕದಲ್ಲಿ ಮಂಗಳೂರು ಪ್ರದೇಶದಲ್ಲಿರುವ ಗ್ರಾಮೀಣ ರೈತಾಪಿ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಸಲಾಗಿದೆ. ಈ ಕೋಷ್ಟಕದ ಪ್ರಕಾರ ರೈತರು ಮುಖ್ಯವಾಗಿ ೪೫ ಮಂದಿ ಹಣದ ಸಮಸ್ಯೆ, ೩೫ ಮಂದಿ ಭೂ ಹಿಡುವಳಿ ಗಾತ್ರದ ಸಮಸ್ಯೆ , ೩ ಮಂದಿ ಉತ್ತಮ ಮಾರುಕಟ್ಟೆ ಸಮಸ್ಯೆ, ೧೦ ಮಂದಿ ಕೈಗಾರಿಕೆ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇವರ ಪ್ರಕಾರ ರೈತರು ಮುಖ್ಯವಾಗಿ ಬಂಡವಾಳ ಸಮಸ್ಯೆ ಎದುರಿಸುತ್ತಿದ್ದಾರೆ. ಅಂದರೆ ಉತ್ತಮವಾಗಿ ಕೃಷಿ ಮಾಡಲು ಹಣದ ಬಂಡವಾಳ ಅತ್ಯಗತ್ಯ ತಿಳಿಯುತ್ತದೆ.

ಈ ಕೋಷ್ಟಕದ ಪ್ರಕಾರ ಭೂ ಹಿಡುವಳಿ ಗಾತ್ರವು ರೈತರಿಗೆ ಸಮಸ್ಯೆಯಾಗಿದೆ. ಹೆಚ್ಚಿನ ರೈತರು ಚಿಕ್ಕ ಚಿಕ್ಕ ಭೂ ಹಿಡುವಳಿಯನ್ನು ಹೊಂದಿದ್ದಾರೆ. ರೈತರ ಪ್ರಕಾರ ಮುಖ್ಯವಾಗಿ ಹಣದ ಸಮಸ್ಯೆ ಮತ್ತು ಭೂ ಹಿಡುವಳಿ ಗಾತ್ರದ ಸಮಸ್ಯೆ ಅವರಿಗೆ ಉತ್ತಮವಾಗಿ ಕೃಷಿ ಫಸಲು ತೆಗೆಯಲು ಅವಕಾಶ ಮಾಡಿಕೊಡುವುದಿಲ್ಲ.



ನಕ್ಷೆ ೪.೩ ರೈತರು ಎದುರಿಸುತ್ತಿರುವ ಸಮಸ್ಯೆಗಳು


೪.೭ ಕೃಷಿ ಚಟುವಟಿಕೆಯಲ್ಲಿ ಸೇವಾನುಭವ

ಕೋಷ್ಟಕ ೪.೭ ಕೃಷಿ ಚಟುವಟಿಕೆಯಲ್ಲಿ ಸೇವಾನುಭವ

ಕ್ರಮ ಸಂಖ್ಯೆ	ಸೇವಾನುಭವದ ವರ್ಷ	ಮಾಹಿತಿದಾರರ ಸಂಖ್ಯೆ
೧	೧-೫	೧೬
೨	೬-೧೦	೪೭
೩	೧೦ ರಿಂದ ಹೆಚ್ಚು	೩೭

ಈ ಕೋಷ್ಟಕದಲ್ಲಿ ಮಾಹಿತಿದಾರರು ಕೃಷಿ ಚಟುವಟಿಕೆಗಳಲ್ಲಿ ಇರುವ ಸೇವಾನುಭವಗಳನ್ನು ತೋರಿಸಲಾಗಿದೆ. ಇದರ ಪ್ರಕಾರ ೧೬ ಮಂದಿ ೫ ವರ್ಷ ಕ್ಕಿಂತ ಕಡಿಮೆ, ೪೭ ಮಂದಿ ೫ ರಿಂದ ೧೦ ವರ್ಷ, ೩೭ ಮಂದಿ ೧೦ ವರ್ಷಕ್ಕಿಂತಲೂ ಹೆಚ್ಚು ಸೇವಾನುಭವ ಹೊಂದಿದ್ದಾರೆ.

ಸಮೀಕ್ಷೆಯ ಪ್ರಕಾರ ಯುವ ಪೀಳಗೆಯ ಸಂಖ್ಯೆ ಕಡಿಮೆಯಾಗುತ್ತಿದೆ. ಇದರ ಪ್ರಕಾರ ಯುವಪೀಳಗೆಯು ಕೃಷಿಯಲ್ಲಿ ಆಸಕ್ತಿಯನ್ನು ಹೊಂದಿಲ್ಲ ಎಂದು ತಿಳಯುತ್ತದೆ. ಹೆಚ್ಚಿನ ಮಾಹಿತಿದಾರರು ಆರ್ಥಿಕ ಒತ್ತಡದಿಂದ ಕೃಷಿಯನ್ನು ಅವಲಂಭಿಸಿದ್ದಾರೆ. ಮಾಹಿತಿದಾರರ ಪ್ರಕಾರ ೫೦ ವರ್ಷ ದಾಟಿದ ಕೃಷಿಕರು ಕೃಷಿಯನ್ನು ಭಾರತದ ಸಂಸ್ಕೃತಿಯ ಒಂದು ಭಾಗ ಎಂದು ನಂಬಿದ್ದಾರೆ.



ನಕ್ಷೆ ೪.೭ ಕೃಷಿ ಚಟುವಟಿಕೆಯಲ್ಲಿ ಸೇವಾನುಭವ


೪.೮ ಭೂ ಹಿಡುವಳಿಯ ಗಾತ್ರ.

ಕೋಷ್ಟಕ ೪.೮ ಭೂ ಹಿಡುವಳಿಯ ಗಾತ್ರ

ಕ್ರಮ ಸಂಖ್ಯೆ	ಭೂ ಹಿಡುವಳಿ ಗಾತ್ರ	ಪ್ರತ್ಯುತ್ತರ
೧	ಸಣ್ಣ ಹಿಡುವಳಿ	೭೮
೨	ದೊಡ್ಡ ಹಿಡುವಳಿ	೧೨
೩	ಮಧ್ಯಮ ಹಿಡುವಳಿ	೨೦

ಈ ಕೋಷ್ಟಕದಲ್ಲಿ ಮಾಹಿತಿದಾರರು ಹೊಂದಿರುವ ಭೂ ಹಿಡುವಳಿಯ ಗಾತ್ರವನ್ನು ತೋರಿಸಲಾಗಿದೆ. ಇದರ ಪ್ರಕಾರ ೭೮ ಮಂದಿ ಸಣ್ಣ ಹಿಡುವಳಿ, ೧೨ ಮಂದಿ ದೊಡ್ಡ ಹಿಡುವಳಿ ೨೦ ಮಂದಿ ಮಧ್ಯಮ ಹಿಡುವಳಿಯ ಭೂಮಿಯನ್ನು ಹೊಂದಿದ್ದಾರೆ. ಈ ಮಾಹಿತಿಯ ಪ್ರಕಾರ ಸಣ್ಣ ಹಿಡುವಳಿದಾರ ಎಂದರೆ ೧ ಎಕ್ರೆಗಿಂತ ಕಡಿಮೆ ಕೃಷಿ ಭೂಮಿ. ದೊಡ್ಡ ಹಿಡುವಳಿದಾರೆಂದರೆ ೨ ಎಕ್ರೆಗಿಂತ ಜಾಸ್ತಿ ಕೃಷಿ ಭೂಮಿ, ಮಧ್ಯಮ ಹಿಡುವಳಿದಾರೆಂದರೆ ೧ ರಿಂದ ೨ ಎಕ್ರೆ ಭೂ ಹಿಡುವಳಿ ಇರುವವರು ಎಂದರ್ಥ. ಸಾಮಾನ್ಯವಾಗಿ ಇಲ್ಲಿ ಸುಮಾರು ೬೮% ಜನರು ಸಣ್ಣ ಹಿಡುವಳಿದಾರರಾಗಿದ್ದಾರೆ ಇದಕ್ಕೆ ಮುಖ್ಯ ಕಾರಣ ವಿಭಕ್ತ ಕುಟುಂಬಗಳು.

ಅವಿಭಕ್ತ ಕುಟುಂಬದಿಂದ ವಿಭಕ್ತ ಕುಟುಂಬ ಆಗುವಾಗ ಭೂ ಹಿಡುವಳಿ ಚಿಕ್ಕ ಚಿಕ್ಕ ಹಿಡುವಳಿಯಾಗಿ ಮಾರ್ಪಡಾಗಿದೆ. ಹೆಚ್ಚಿನ ದೊಡ್ಡ ದೊಡ್ಡ ಹಿಡುವಳಿಗಳು ಛಿದ್ರ ಛಿದ್ರಗೊಂಡು ಸಣ್ಣ ಹಿಡುವಳಿಯಾಗಿ ಮಾರ್ಪಾಡಾಗಿದೆ. ಭೂ ಹಿಡುವಳಿಯ ಗಾತ್ರವನ್ನು ಈ ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ.



ನಕ್ಷೆ ೪.೮ ಭೂ ಹಿಡುವಳಿಯ ಗಾತ್ರ.


೪.೯ ಕೃಷಿಯಲ್ಲಿರುವ ಆಸಕ್ತಿ

ಕೋಷ್ಟಕ ೪.೯ ಕೃಷಿಯಲ್ಲಿರುವ ಆಸಕ್ತಿ

ಕ್ರಮ ಸಂಖ್ಯೆ	ಮಾಹಿತಿದಾರರ ವಯಸ್ಸು	ಆಸಕ್ತಿ ಇರುವವರ ಸಂಖ್ಯೆ.	ಶೇಕಡಾ
೧	೧೮-೨೮	೨ (೨೯)	೭.೮೯ %
೨	೨೯-೩೮	೧೦(೨೭)	೩೭.೦೪%
೩	೩೯-೪೮	೧೪(೨೧)	೭೭.೭೭%
೪	೪೯-೫೮	೧೧(೧೨)	೯೧.೭೭%
೫	೫೯ ಕ್ಕಿಂತ ಹೆಚ್ಚು	೧೧(೧೧)	೧೦೦%

ಈ ಕೋಷ್ಟಕದಲ್ಲಿ ಮಾಹಿತಿದಾರರಲ್ಲಿರುವ ಕೃಷಿಯ ಆಸಕ್ತಿಯನ್ನು ತೋರಿಸಲಾಗಿದೆ. ಮಾಹಿತಿದಾರರ ಪ್ರತ್ಯುತ್ತರದ ಮೇರೆಗೆ ೧೮ ರಿಂದ ೨೮ ವರ್ಷದ ಒಟ್ಟು ೨೯ ಜನರಲ್ಲಿ ಕೇವಲ ೨ ಜನರಿಗೆ ಕೃಷಿಯಲ್ಲಿ ಆಸಕ್ತಿ ಇದೆ. ೨೯ ರಿಂದ ೩೮ ವರ್ಷದ ಒಟ್ಟು ೨೭ ಜನರಲ್ಲಿ ೧೦ ಜನರಿಗೆ ಕೃಷಿಯಲ್ಲಿ ಆಸಕ್ತಿಯಿದೆ, ೩೯ ರಿಂದ ೪೮ ವರ್ಷದ ಒಟ್ಟು ೨೧ ಜನರಲ್ಲಿ ೧೪ ಜನರಿಗೆ ಆಸಕ್ತಿ ಇದೆ, ೪೯ ರಿಂದ ೫೮ ವರ್ಷದ ಒಟ್ಟು ೧೨ ಜನರಲ್ಲಿ ಕೃಷಿಯಲ್ಲಿ ಆಸಕ್ತಿ ಇದೆ. ೫೯ ವರ್ಷ ಕ್ಕಿಂತ ಹೆಚ್ಚಿನ ಎಲ್ಲಾ ೧೧ ಮಂದಿಗೆ ಕೃಷಿಯ ಮೇಲೆ ಆಸಕ್ತಿ ಇದೆ.

ಈ ಕೋಷ್ಟಕದ ಪ್ರಕಾರ ವರ್ಷಗಳು ಕಳೆದಂತೆ ಕೃಷಿಯ ಮೇಲಿನ ಆಸಕ್ತಿ ಕಡಿಮೆಯಾಗುತ್ತಿದೆ. ಅದರಲ್ಲೂ ಯುವ ಪೀಳಿಗೆಗೆ ಕೃಷಿಯ ಮೇಲೆ ಯಾವುದೇ ಆಸಕ್ತಿ ಇಲ್ಲ. ಕೇವಲ ೭.೮೯% ಯುವಜನರು ಕೃಷಿಯಲ್ಲಿ ಆಸಕ್ತಿ ಹೊಂದಿದ್ದಾರೆ. ಇದೇ ರೀತಿ ಮುಂದುವರಿದರೆ ಕೃಷಿಯು ಅಪಾಯದ ಹಂಚನ್ನು ಎದುರಿಸಬೇಕಾಗುತ್ತದೆ.ಹಿರಿಯ ಕೃಷಿಕರು ಬೇಸಾಯವನ್ನು ತಮ್ಮ ಜೀವನದ ಒಂದು ಭಾಗ ಎಂದು ತಿಳದುಕೊಂಡಿದ್ದಾರೆ. ೪೯ ಪ್ರಾಯಕ್ಕಿಂತ ಮೇಲ್ಪಟ್ಟ ಕೃಷಿಕರು ಕೃಷಿಯ ಮೇಲೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ. ಕೃಷಿಯ ಮೇಲಿನ ಆಸಕ್ತಿಯನ್ನು ಈ ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ.



ನಕ್ಷೆ ೪.೯ಕೃಷಿಯಲ್ಲಿರುವ ಆಸಕ್ತಿ


.೧೦ ಕೃಷಿ ಭೂಮಿಯನ್ನು ಮಾರಿದ ಉದ್ದೇಶ

ಕೋಷ್ಟಕ ೪.೧೦ ಕೃಷಿ ಭೂಮಿಯನ್ನು ಮಾರಿದ ಉದ್ದೇಶ

ಕ್ರಮ ಸಂಖ್ಯೆ	ಮಾರಿದ ಉದ್ದೇಶ	ಮಾಹಿತಿದಾರರ ಸಂಖ್ಯೆ.
೧	ಕೈಗಾರಿಕೆ	೪೧
೨	ಕೃಷಿ	೦೩
೩	ಕೃಷಿಯೇತರ	೨೧
೪	ಇತರ	೦೭

ಈ ಕೋಷ್ಟಕದಲ್ಲಿ ಕೃಷಿ ಭೂಮಿಯನ್ನು ಮಾರಿದ ಉದ್ದೇಶವನ್ನು ತೋರಿಸಲಾಗಿದೆ. ಪ್ರತ್ಯುತ್ತರ ನೀಡಿದ ಒಟ್ಟು ೧೦೦ ಮಂದಿಯಲ್ಲಿ ೭೨ ಮಂದಿ ಕೃಷಿ ಭೂಮಿಯನ್ನು ಮಾರಿದ್ದಾರೆ ಅದರಲ್ಲಿ ೪೧ ಮಂದಿ ಕೈಗಾರಿಕೆಗಳಿಗೆ, ೩ ಮಂದಿ ಕೃಷಿಗೆ, ೨೧ ಮಂದಿ ಕೃಷಿಯೇತರ ಉದ್ದೇಶಕ್ಕೆ ಮಾರಿದ್ದಾರೆ. ಮಾಹಿತಿದಾರರಲ್ಲಿ ಹೆಚ್ಚಿನ ಅಂದರೆ ೫೭% ಜನರು ತಮ್ಮ ಕೃಷಿ ಭೂಮಿಯನ್ನು ಕೈಗಾರಿಕೆಗಳಿಗೆ ಮಾರಿದ್ದಾರೆ. ಹಾಗೆಯೇ ೨೯% ಜನರು ಕೃಷಿಯೇತರ ಉದ್ದೇಶಗಳಿಗೆ ಮಾರಿದ್ದಾರೆ.

ಕೃಷಿಯೇತರ ಎಂದರೆ ವಸತಿ, ಕಟ್ಟಡ ನಿರ್ಮಾಣಕ್ಕೆ ಮಾರಿದ್ದಾರೆ. ಇದರಿಂದಾಗಿ ಕೈಗಾರಿಕೆಗಳು ನೇರವಾಗಿ ಕೃಷಿ ಭೂಮಿಯ ಮೇಲೆ ಪ್ರಭಾವ ಬೀರಿದೆ ಎಂದು ಈ ಕೆಳಗಿನ ನಕ್ಷೆಯಲ್ಲಿ ತಿಳಿಯುತ್ತದೆ.



ನಕ್ಷೆ ೪.೧೦ ಕೃಷಿ ಭೂಮಿಯನ್ನು ಮಾರಿದ ಉದ್ದೇಶ

೪.೧೧ ಕೃಷಿ ಕಾರ್ಮಿಕರು ನಗರ ಪ್ರದೇಶಗಳಿಗೆ ವಲಸೆ ಹೋಗಲು ಕಾರಣ

ಕೋಷ್ಟಕ ೪.೧೧


ಕೃಷಿ ಕಾರ್ಮಿಕರು ನಗರ ಪ್ರದೇಶಗಳಿಗೆ ವಲಸೆ ಹೋಗಲು ಕಾರಣ

ಕ್ರಮ ಸಂಖ್ಯೆ	ಕಾರಣ	ಮಾಹಿತಿದಾರರ ಸಂಖ್ಯೆ.
೧	ಶಿಕ್ಷಣ	೨೪
೨	ಉದ್ಯೋಗ	೫೫
೩	ಸಾರಿಗೆ ಸಂಪರ್ಕ	೧೧
೪	ಇತರ	೧೦

ಈ ಕೋಷ್ಟಕದಲ್ಲಿ ಕೃಷಿ ಕಾರ್ಮಿಕರು ನಗರಗಳಿಗೆ ವಲಸೆ ಹೋಗಲು ಇರುವ ಮುಖ್ಯ ಕಾರಣಗಳನ್ನು ತೋರಿಸಲಾಗಿದೆ. ಮಾಹಿತಿದಾರರ ಪ್ರತ್ಯುತ್ತರ ಪ್ರಕಾರ ೨೪ ಜನ ಶಿಕ್ಷಣಕ್ಕೆ ಸಂಬಂಧಿಸಿದ ಕಾರಣಗಳನ್ನು, ೫೧ ಜನ ಉದ್ಯೋಗ, ೧೧ ಮಂದಿ ಸಾರಿಗೆ ಸಂಪರ್ಕ, ೧೦ ಮಂದಿ ಇತರ ಕಾರಣಗಳನ್ನು ನೀಡಿದ್ದಾರೆ. ಆದರೆ ಇದರಲ್ಲಿ ಹೆಚ್ಚಿನ ಭಾಗದ ಜನ ಉನ್ನತ ಉದ್ಯೋಗದ ಕಾರಣ ವಲಸೆ ಹೋಗುತ್ತಾರೆ. ನಗರ ಪ್ರದೇಶದಲ್ಲಿ ಕೈಗಾರಿಕೆಗಳು

ಹೆಚ್ಚಿನ ಆದಾಯವನ್ನು ನೀಡುವುದು ಮತ್ತು ವರ್ಷವಿಡಿ ಉದ್ಯೋಗ ಲಭಿಸುವುದು ಇದಕ್ಕೆ ಮುಖ್ಯ ಕಾರಣ ಈ ವಲಸೆಯ ಕಾರಣ ಕೃಷಿ ಕಾರ್ಮಿಕರ ಕೊರತೆ ಎದ್ದು ಕಾಣುತ್ತದೆ.

ಕೃಷಿ ಕಾರ್ಮಿಕರ ವಲಸೆಯಿಂದಾಗಿ ಹೆಚ್ಚಿನ ಕೃಷಿ ಭೂಮಿಗಳು ಬಂಜರು ಪ್ರದೇಶಗಳಾಗಿ ಮಾರ್ಪಡಾಗಿದೆ. ಕೃಷಿ ಕಾರ್ಮಿಕರ ವಲಸೆಗೆ ಇರುವ ಮುಖ್ಯ ಕಾರಣಗಳನ್ನು ಈ ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ.




ನಕ್ಷೆ ೪.೧೧ ಕೃಷಿ ಕಾರ್ಮಿಕರು ನಗರ ಪ್ರದೇಶಗಳಿಗೆ ವಲಸೆ ಹೋಗಲು ಕಾರಣ

೪.೧೨ ಕೈಗಾರೀಕರಣ ಕೃಷಿಯ ಮೇಲೆ ಬೀರುವ ಪರಿಣಾಮ

ಕೋಷ್ಟಕ ೪.೧೨ ಕೈಗಾರೀಕರಣ ಕೃಷಿಯ ಮೇಲೆ ಬೀರುವ ಪರಿಣಾಮ

ಕ್ರಮ ಸಂಖ್ಯೆ	ಪರಿಣಾಮ	ಮಾಹಿತಿದಾರರ ಸಂಖ್ಯೆ.
೧	ಕೃಷಿ ಭೂಮಿ ಕಡಿಮೆಯಾಗಿದೆ	೩೫
೨	ಕೃಷಿ ಕಾರ್ಮಿಕರ ಕೊರತೆ	೩೦
೩	ನೀರಾವರಿ ಕೊರತೆ	೧೦
೪	ಆಹಾರೋತ್ಪನ್ನಗಳ ಕೊರತೆ	೨೫

ಈ ಕೋಷ್ಟಕದಲ್ಲಿ ಕೈಗಾರೀಕರಣವು ಕೃಷಿಯ ಮೇಲೆ ಬೀರುವ ಪರಿಣಾಮವನ್ನು ತೋರಿಸಲಾಗಿದೆ. ಮಾಹಿತಿ ನೀಡಿದವರಲ್ಲಿ ೩೫ ಮಂದಿ ಕೃಷಿ ಭೂಮಿ ಕಡಿಮೆಯಾಗಿರುವುದನ್ನು, ೩೦ ಮಂದಿ ಕೃಷಿ ಕಾರ್ಮಿಕರ ಕೊರತೆ, ೨೫ ಮಂದಿ ಆಹಾರೋತ್ಪನ್ನಗಳ ಕೊರತೆ, ೧೦ ಮಂದಿ ನೀರಾವರಿ ಸಮಸ್ಯೆಯಿಂದಾಗಿ ಕೃಷಿಯ ಮೇಲೆ ಅತ್ಯಂತ ಪರಿಣಾಮ ಬೀರುತ್ತಿದೆ ಎಂದಿದ್ದಾರೆ.



ನಕ್ಷೆ ೪.೧೨ ಕೈಗಾರೀಕರಣ ಕೃಷಿಯ ಮೇಲೆ ಬೀರುವ ಪರಿಣಾಮ

ಈ ನಕ್ಷೆಯ ಪ್ರಕಾರ ಕೈಗಾರೀಕರಣವು ಕೃಷಿಯ ಮೇಲೆ ನೇರವಾಗಿ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ತೋರಿಸುತ್ತದೆ. ಕೈಗಾರೀಕೆಗಳಿಂದಾಗಿ ಹೆಚ್ಚಿನ ಆಹಾರ ಬೆಳೆಗಳು ವಾಣಿಜ್ಯ ಬೆಳೆಗಳು ಪರಿವರ್ತನೆಗೊಂಡು ಆಹಾರೋತ್ಪನ್ನಗಳ ಕೊರತೆ ಉಂಟಾಗುತ್ತಿದ್ದೆ ಎಂದು ತಿಳಿಯುತ್ತದೆ, ಆಹಾರ ಬೆಳೆಗಳಿಗಿಂತ ವಾಣಿಜ್ಯ ಬೆಳೆಗಳು ಹೆಚ್ಚಿನ ಲಾಭದಾಯಕವಾದರಿಂದ, ಜನರು ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇದರಿಂದಾಗಿ ಮಂಗಳೂರಿನ ಗ್ರಾಮೀಣ ಪ್ರದೇಶಗಳಲ್ಲಿ ಭತ್ತದ ಬೆಳೆಯು ಕಡಿಮೆಯಾಗುತ್ತಿದೆ. ಕೈಗಾರೀಕರಣವು ಕೃಷಿಯ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ಎಂದು ಈ ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ.

ಅಧ್ಯಾಯ –೫: ಉಪಸಂಹಾರ, ಸಲಹೆ ಮತ್ತು ಸೂಚನೆಗಳು

- ಸಾರಾಂಶ
- ಅಧ್ಯಯನದ ಶೋಧ
- ಕೊನೆಯ ಮಾತು
- ಸಲಹೆ ಸೂಚನೆಗಳು

ಅಧ್ಯಾಯ :೫ ಉಪಸಂಹಾರ, ಸಲಹೆ ಮತ್ತು ಸೂಚನೆಗಳು

ಸಾರಾಂಶ :

ಭಾರತ ಕೃಷಿ ಪ್ರಧಾನವಾದ ದೇಶ ಕೃಷಿಯು ಇಲ್ಲಿಯ ಜನರ ಮುಖ್ಯ ಉದ್ಯೋಗ ಸ್ವಾತಂತ್ರ್ಯ ನಂತರ ಕೃಷಿಗೆ ವ್ಯಾಪಕವಾದ ಪ್ರೋತ್ಸಾಹ, ಯೋಜನೆಗಳು ರೂಪುಗೊಂಡವು ಇದರ ಪರಿಣಾಮವಾಗಿ ಕೃಷಿಯಲ್ಲಿ ಹೆಚ್ಚಿನ ಅಭಿವೃದ್ಧಿ , ಕ್ರಾಂತಿ ಆರಂಭವಾಯಿತು, ರೈತರಿಗೆ ಉತ್ತಮ ಬಿತ್ತನೆ ಬೀಜಗಳು ರಾಸಾಯನಿಕ ಗೊಬ್ಬರ ಕ್ರಿಮಿನಾಶಕ ಇತ್ಯಾದಿ ಅವ್ವಶ್ಯಕ ವಸ್ತುಗಳು ಮಿತದರದಲ್ಲಿ ದೊರಕುವಂತೆ ಸರಕಾರ ಕ್ರಮಗಳನ್ನು ಕೈಗೊಂಡಿತು. ಇದರ ಫಲವಾಗಿ ಕೃಷಿಯಲ್ಲಿ ಜನರು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಕೊಂಡರ ಪರಿಣಾಮವಾಗಿ ಕೃಷಿ ಕ್ಷೇತ್ರದಲ್ಲಿ ವ್ಯಾಪಕ ಅಭಿವೃದ್ಧಿಯಾಯಿತು.

ಜಾಗತೀಕರಣದ ಪರಿಣಾಮವಾಗಿ ಕೈಗಾರಿಕೆಗಳು ಅತೀ ವೇಗವಾಗಿ ಬೆಳೆಯ ತೊಡಗಿತು. ಸರಕಾರವು ಉತ್ತಮ ಪ್ರಮಾಣದಲ್ಲಿ ಬೆಳೆಯ ತೊಡಗಿತು. ಇದರ ಪರಿಣಾಮವಾಗಿ ಕೃಷಿಯ ಬಗೆಗಿನ ಕಾಳಜಿ ಕಡಿಮೆಯಾಯಿತು. ಇದಕ್ಕೆ ಹಲವಾರು ಕಾರಣಗಳಿವೆ. ಆಹಾರ ಬೆಳೆಯಾದ ಭತ್ತವು ದಕ್ಷಿಣ ಕನ್ನಡ ಪರಿಸರದ ಪ್ರಮುಖ ಬೆಳೆ. ಈ ಬೆಳೆಗೆ ಹೆಚ್ಚಿನ ಕೆಲಸಗಾರರ ಅವಶ್ಯಕತೆಯಿದೆ. ಆದರೆ ಹೆಚ್ಚು ಕೂಲಿಯಾಳುಗಳನ್ನು ಬಯಸುವ ಆಹಾರ ಬೆಳೆಗಳು, ಕಡಿಮೆಯಾಗ ತೊಡಗಿ ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗು, ರಬ್ಬರ್ ಮುಂತಾದ ಕಡಿಮೆ ಆಳುಗಳನ್ನು ಬಯಸುವ ಬೆಳೆಗಳ ಕಡೆಗೆ ಆಕರ್ಷಿತರಾದರು. ಇಲ್ಲಿಯೂ ನಿರೀಕ್ಷಿಸದ ಮಟ್ಟದಲ್ಲಿ ಪ್ರತಿಫಲವನ್ನು ಪಡೆಯಲು ಸಾಧ್ಯವಾಗಲಿಲ್ಲ, ಬೆಳೆದ ಬೆಳೆಗೆ ಯೋಗ್ಯ ಬೆಲೆ ಮಾರುಕಟ್ಟೆಯಲ್ಲಿ ದೊರೆಯದ ಪರಿಣಾಮ ಕೃಷಿಯ ಬಗೆಗಿನ ಆಸಕ್ತಿ ಕಡಿಮೆಯಾಯಿತು. ಉತ್ತಮ ಬೆಲೆ, ಸೂಕ್ತ ಮಾರುಕಟ್ಟೆ ದೊರಕದ ಚಿಂತೆಯಲ್ಲಿರುವ ರೈತರಿಗೆ ಕೈಗಾರೀಕರಣದ ಬಿಸಿ ಬಲು ಬೇಗವಾಗಿ ತಟ್ಟತೊಡಗಿತು. ವಿದ್ಯಾಭ್ಯಾಸವನ್ನು ಪಡೆದ ಯುವಜನಾಂಗ ಕೃಷಿ ಕಾಯಕವನ್ನು ಇಷ್ಟಪಡಲಿಲ್ಲ. ಇದರ ಜೊತೆಗೆ ಕಡಿಮೆ ಶ್ರಮದ ದುಡಿಮೆಗೆ ಹೆಚ್ಚು ಹಣವನ್ನು ಕಾರ್ಖಾನೆಗಳು ನೀಡಿತು. ಹಳ್ಳಿಗಳಲ್ಲಿ ಅಥವಾ ಕೃಷಿಯಾಧರಿತ ಕುಟುಂಬಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಕೆಲಸಗಾರರ ಅಭಾವ ಕಾಡತೊಡಗಿತ್ತು.

ಕೃಷಿ ಕಾಯಕದಲ್ಲಿ ತೊಡಗಿದ ಮಹಿಳೆಯರು ಕೂಡಾ ಗುಡಿ ಕೈಗಾರಿಕೆ, ಬೀಡಿಕಟ್ಟುವ ಕೆಲಸದಲ್ಲಿ ತೊಡಗಿ ಅದರ ಮೂಲಕ ಕೃಷಿ ಕೆಲಸವನ್ನು ಬಿಟ್ಟು ಬಿಟ್ಟರು. ಇದರ ಪರಿಣಾಮವಾಗಿ ಕೃಷಿ ಭೂಮಿ ಇದ್ದರೂ ಕೃಷಿ ಕೆಲಸಗಳಲ್ಲಿ ದುಡಿಯಲು ಜನರಿಲ್ಲದೆ ಕೃಷಿಯ ಬಗೆಗಿನ ಆಸಕ್ತಿ ಕಡಿಮೆಯಾಗಿತು. ಇದಕ್ಕೆ ಅನುಗುಣವಾಗುವಂತೆ ಕೈಗಾರಿಕೆಗಳು ವ್ಯಾಪಕವಾಗಿ ಬೆಳೆದ ಪರಿಣಾಮ ಭೂಮಿಗೆ ವಿಪರೀತ ಬೇಡಿಕೆ ಆರಂಭವಾಯಿತು. ಸಾಮಾನ್ಯವಾದ ಭೂಮಿಯು ಕೂಡಾ ಬಂಗಾರದಂತಹ ಬೆಲೆಯನ್ನು ಪಡೆಯಲು ಆರಂಭಿಸಿದರು. ಇದರಿಂದಾಗಿ ರೈತರು ತಮ್ಮ ಭೂಮಿಯನ್ನು ಉದ್ದಿಮೆಗಳಿಗೆ ಹೆಚ್ಚಿನ ಬೆಲೆಗೆ ನೀಡಲಾರಂಭಿಸಿದರು.

ಮಂಗಳೂರಿನಲ್ಲಿ ಸಾಮಾನ್ಯವಾಗಿ ಕ್ರೆಜೆಂಟಿಕ್ಸ್ ಇನ್ಫೋಸಿಸ್, MCF, MRPL ನಂತರ ಉದ್ದಿಮೆಗಳ ಮೂಲಕ ಕೃಷಿ ಭೂಮಿ ವಿವಿಧ ಕೈಗಾರಿಕೆಗಳ ವಶವಾಗಿದೆ. ವಿಶೇಷ ಅರ್ಥಿಕ ವಲಯದಂತಹ ಯೋಜನೆಗಳಲ್ಲಿ ಕೂಡಾ ಈ ರೀತಿಯ ಪ್ರಯತ್ನ ಮುಂದುವರಿದಿದೆ. ಈ ಕಾರ್ಖನೆಗಳ ಮೂಲಕ ಬಹಳಷ್ಟು ಕೃಷಿಯನ್ನು ಮಾಡುತ್ತಿರುವ ಭೂಮಿ ಇಂದು ದೊಡ್ಡ ದೊಡ್ಡ ಕಾರ್ಖಾನೆಗಳ ಉಗಮಕ್ಕೆ ಕಾರಣವಾಗಿದೆ.

ಕೈಗಾರಿಕೆಗಳ ಸೃಷ್ಟಿಯ ಜೊತೆ ಜೊತೆಗೆ ಅನೇಕ ಸಮಸ್ಯೆಗಳು ಸೃಷ್ಟಿಯಾಗುತ್ತಿದೆ. ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪ್ರದೇಶಗಳಲ್ಲಿ ವಸತಿಗಾಗಿ, ಮನೆ ನಿರ್ಮಿಸಲು ಕೂಡಾ ಕೃಷಿ ಭೂಮಿಯನ್ನು ಉಪಯೋಗಿಸಿಕೊಳ್ಳತೊಡಗಿದರು. ಭೂಮಿಗೆ ಅದು ಎಷ್ಟು ಬೇಕಾದರೂ ಬೆಲೆಯನ್ನು ನೀಡಲು ಸಿದ್ದರಿರುವ ವ್ಯವಸ್ಥೆ ಸೃಷ್ಟಿಯಾಗಿದೆ. ಈ ಕಾರಣದಿಂದಾಗಿ ಕೃಷಿ ಭೂಮಿಯೆನ್ನುವುದು ಕಾಣೆಯಾಗಿ ಕೈಗಾರಿಕಾ ವಲಯ ನಿರ್ಮಾಣವಾಯಿತು. ಸ್ವಲ್ಪ ಮಟ್ಟಿನ ಕೃಷಿ ಇದ್ದರೂ ರಾಸಾಯನಿಕ ವಸ್ತುಗಳ ಮಿಶ್ರಣದಿಂದಾಗಿ ಅದು ಕೂಡಾ ಸರಿಯಾದ ಹಿಡುವಳಿಯನ್ನು ಕೊಡುವುದಿಲ್ಲ. ಪರಿಣಾವವಾಗಿ ಆ ಭೂಮಿ ಕೂಡಾ ಕೈಗಾರಿಕೆಗಳ ಸ್ಥಾಪನೆಗೆ ಅಥವಾ ಇನ್ನಿತರ ಯಾವುದಾದರೂ ಉದ್ದಿಮೆಗಳ ಸೃಷ್ಟಿಗೆ ಅವಕಾಶವಾಗುತ್ತದೆ. ಕೃಷಿಯ ಮೇಲಿನ ಆಸಕ್ತಿ ಕಡಿಮೆಯಾಗಿ ಅರ್ಥಿಕ ಲೆಕ್ಕಚಾರದ ಪರ್ಯಾಯ ವಿಧಾನವನ್ನು ಜನರು ಅನುಸರಿಸಲು ತೊಡಗುತ್ತಾರೆ. ಇದರ ಪರಿಣಾಮವಾಗಿ ಆಹಾರ ಬೆಳೆಗಳು, ವಾಣಿಜ್ಯ ಬೆಳೆಗಳು ಹೆಚ್ಚಿನ ಬೆಳೆಯನ್ನು ಪಡೆದುಕೊಂಡು ಹೊರಪ್ರದೇಶಗಳಿಂದ ಆಮದು ಮಾಡಿಕೊಳ್ಳುವ ಸಂಧರ್ಭ ಸೃಷ್ಟಿಯಾಗಿದೆ.

ಕೈಗಾರೀಕರಣದ ಪ್ರಭಾವ ಕೇವಲ ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲ, ಅದು ಹಳ್ಳಿಗಳಿಗೂ ತನ್ನ ಬಿಸಿತಟ್ಟಿಸಿದೆ. ಆಹಾರ ಬೆಳೆಯ ಕೈ ಬಿಟ್ಟ ರೈತರು ವಾಣಿಜ್ಯ ಬೆಳೆಯ ಕಡೆಗೆ ಆರ್ಕಷಿತರಾಗಿದ್ದರೂ ಅಲ್ಲಿಯೂ ಕೂಡಾ ಅವರಿಗೆ ಸಮಸ್ಯೆಗಳು ಎದುರಾಯಿತು. ಹೊಲ ತೋಟಗಳಲ್ಲಿ ದುಡಿಯುವ ಕೆಲವೇ ಕೆಲವು ಶ್ರಮಿಕರು

ತಮ್ಮ ವೇತನವನ್ನು ಹೆಚ್ಚುಗೊಳಿಸಿದರು. ಇದರಿಂದಾಗಿ ಬೆಳೆಯುವ ರೈತನಿಗೆ ಕೃಷಿಯಿಂದ ದೊರೆಯುವ ಲಾಭವು ಕಡಿಮೆಯಾಯಿತು. ಇರುವ ಕೃಷಿ ಭೂಮಿಯಲ್ಲಿ ಕೂಡಾ ಕಾರ್ಖಾನೆಗಳ ಅನುಪಯುಕ್ತ ವಸ್ತುಗಳಿಂದಾಗಿ ಫಲವತ್ತತೆಯನ್ನು ಕಳೆದುಕೊಂಡವು. ಪರಿಸರ ಮಾಲಿನ್ಯವು ಎಲ್ಲಾ ರೀತಿಯ ಕೃಷಿಯ ಮೇಲೆಯು ಕೆಟ್ಟ ಪರಿಣಾಮವನ್ನು ಉಂಟು ಮಾಡುತ್ತದೆ. ಅಲ್ಪ ಪ್ರಮಾಣದ ಕೃಷಿಯು ಎಲ್ಲಿಯಾದರೂ ಕಂಡು ಬಂದರೂ, ಇನ್ನು ಕೆಲವೇ ವರ್ಷಗಳಲ್ಲಿ ಅದು ಮಾಯವಾಗಬಹುದು. ಆ ಸ್ಥಳದಲ್ಲಿ ನಗರದ ಯಾಂತ್ರಿಕ ಬದುಕಿನ ಚಿತ್ರಣ ಗೋಚರಗೊಳ್ಳಲಾರಂಭಿಸುತ್ತದೆ.

ಒಟ್ಟಿನಲ್ಲಿ ಕೃಷಿಯ ಮೇಲೆ ಕೈಗಾರೀಕರಣವು ತುಂಬ ಕೆಟ್ಟ ಪರಿಣಾಮವನ್ನು ಉಂಟು ಮಾಡಿದೆ. ಕೃಷಿ ಭೂಮಿ ಎಲ್ಲವು ನಾಶವಾಗಿ ಅಲ್ಲಿ ಸಕಲ ಚರಾಚರಗಳಿಗೂ ಭವಿಷ್ಯತ್ ನಲ್ಲಿ ಕೇಡನ್ನು ಉಂಟು ಮಾಡುವ ಸಂಧರ್ಭ ಸೃಷ್ಟಿಯಾಗುತ್ತದೆ. ಇದೇ ಪರಿಸ್ಥಿತಿ ಮುಂದುವರಿದರೆ ಇನ್ನು ನಮ್ಮ ಆಹಾರ ಕ್ರಮಗಳಲ್ಲಿಯೂ ಬದಲಾವಣೆಗಳಾದರೆ ಆಶ್ಚರ್ಯ ಪಡಬೇಕಾಗಿಲ್ಲ. ಕೃಷಿಯನ್ನೇ ನಂಬಿ ಬದುಕುತ್ತಿರುವ ಕೃಷಿಕರು ಕೈಗಾರೀಕರಣದ ಭೀಕರತೆಗೆ ತತ್ತರಿಸಿ ಹೋಗಿದ್ದಾರೆ. ಯುವಜನಾಂಗ ಉತ್ತಮ ಉದ್ಯೋಗವನ್ನು ಪಡೆದುಕೊಂಡು ಕೃಷಿಯಿಂದ ದೂರ ಉಳಿದಿದ್ದಾರೆ. ಆ ಮೂಲಕ ಕೃಷಿ ಭೂಮಿ ಬೇರೆ ಬೇರೆ ಕಾರ್ಖಾನೆಗಳ ಉಗಮಕ್ಕೆ ಅವಕಾಶವನ್ನು ಮಾಡಿಕೊಡುತ್ತದೆ. ಇದರ ಪರಿಣಾಮವಾಗಿ ಪ್ರಾಕೃತಿಕ ವಿಕೋಪಗಳು, ಅಸಮತೋಲನಗಳು ಉಂಟಾಗಿ ಭೂಮಿಯ ಮೇಲಿನ ವ್ಯವಸ್ಥೆಗಳು ಅಲ್ಲೋಲ ಕಲ್ಲೋಲವಾಗಲು ಬಹುದು.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶಗಳು, ವ್ಯಾಪ್ತಿ, ಮಹತ್ವವನ್ನು ತಿಳಿಸಲಾಗಿದೆ. ಯಾವ ಉದ್ದೇಶವನ್ನು ಮುಂದಿಟ್ಟುಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅಧ್ಯಯನವು ಏಕೆ ಮಹತ್ವ ಪೂರ್ಣವಾಗಿದೆ ಹಾಗೂ ವ್ಯಾಪ್ತಿಯಲ್ಲಿ ಯಾವೆಲ್ಲಾ ಪರಿಕಲ್ಪನೆ ವಿಷಯಗಳನ್ನು ಬಳಸಿಕೊಳ್ಳಲಾಗಿದೆ ಎಂದು ವಿವರಿಸಲಾಗಿದೆ. ಅಧ್ಯಯನವು ಕೈಗಾರಿಕೆಗಳು ಕೃಷಿಯ ಮೇಲೆ ಪ್ರಭಾವ ಬೀರಿರುವ ಬಗ್ಗೆ ಸೂಕ್ತ ಚಿತ್ರಣ ನೀಡಲಾಗಿದೆ. ಮಂಗಳೂರು ಪರಿಸರದ ಗ್ರಾಮೀಣ ಪ್ರದೇಶದ ಕೃಷಿಯ ಚಿತ್ರಣ ನೀಡಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಕೃಷಿಯ ಸ್ಥಾನಮಾನ ಆಹಾರ ಭದ್ರತೆ ಸಮಸ್ಯೆ, ಕೃಷಿ ಕಾರ್ಮಿಕರ ಸಮಸ್ಯೆಗಳು, ಭಾರತದಲ್ಲಿ ಕೃಷಿ ಹಿಂದುಳಿಕೆಗೆ ಕಾರಣಗಳು, ಕೃಷಿ ಕಾರ್ಮಿಕರ ಸ್ಥಿತಿಗತಿಗಳ, ಕೃಷಿಯ ಸ್ಥಿತಿಗತಿಯ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಭಾರತವು ಎದುರಿಸುತ್ತಿರುವ ಆಹಾರ ಸಮಸ್ಯೆಯ ಬಗ್ಗೆ ತಿಳಿಸಲಾಗಿದೆ,

ಮೂರನೇ ಅಧ್ಯಾಯದಲ್ಲಿ ಭಾರತದ ಅರ್ಥಿಕತೆಯಲ್ಲಿ ಕೈಗಾರಿಕೆಗಳ ಮಹತ್ವ ಕೃಷಿ ಮತ್ತು ಕೈಗಾರಿಕೆಗಳ ಪೈಪೋಟಿ ಜಾಗತೀಕರಣದಿಂದ ಕೃಷಿಯ ಮೇಲೆ ಪರಿಣಾಮದ ಬಗ್ಗೆ ವಿವರಿಸಲಾಗಿದೆ. ಪ್ರಸುತ್ತ ಮಂಗಳೂರಿನಲ್ಲಿರುವ ಕೈಗಾರೀಕರಣ ಕೈಗಾರಿಕೆಯಿಂದ ಕೃಷಿಗೆ ದಕ್ಕೆ ಇತ್ಯಾದಿಗಳನ್ನು ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಕೃಷಿಕರಿಂದ ಪಡೆದ ಮಾಹಿತಿಯಿಂದ ಮಂಗಳೂರಿನಲ್ಲಿ ಕೈಗಾರೀಕರಣ ಕೃಷಿಯ ಮೇಲೆ ಬೀರಿರುವ ಪ್ರಭಾವದ ಬಗ್ಗೆ ಮಾಹಿತಿ ವಿಶ್ಲೇಷಣೆ ಮಾಡಲಾಗಿದೆ ಮತ್ತು ವಿಶ್ಲೇಷಣೆಯಿಂದ ತಿಳಿದು ಬಂದ ಕೈಗಾರಿಕೆಗಳ ವ್ಯತಿರಿಕ್ತ ಪರಿಣಾಮದಿಂದ ಕೃಷಿಯ ಅಭಿವೃದ್ಧಿಯ ಕುಸಿತದ ಬಗ್ಗೆ ತಿಳಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಇಡೀ ಅಧ್ಯಯನದ ಸಾರ, ಶೋಧ ಮತ್ತು ಕೆಲವು ಸಲಹೆ ಸೂಚನೆ ನೀಡಲಾಗಿದೆ.

ಅಧ್ಯಯನದ ಶೋಧ :

ಅಭಿವೃದ್ಧಿಯು ದೇಶದ ಸರ್ವತೋಮುಖ ಪ್ರಗತಿಯನ್ನು ಬಯಸುತ್ತದೆ. ಭಾರತದಂತಹ ಕೃಷಿ ಆಧಾರಿತ ದೇಶದಲ್ಲಿ ಕೃಷಿಯ ಅಭಿವೃದ್ಧಿ ಮುಖ್ಯವಾಗಿದೆ. ಭಾರತದಲ್ಲಿ ಸುಮಾರು ೭೦% ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಾರೆ. ಆದ್ದರಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿಯಾದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಗ್ರಾಮೀಣಾಭಿವೃದ್ಧಿಯಾಗಬೇಕಾದರೆ ಕೃಷಿಯ ಅಭಿವೃದ್ಧಿಯಾಗಬೇಕು. ಆದರೆ ಕೃಷಿಯ ಬಹಳ ಕುಸಿತವನ್ನು ಕಾಣುತ್ತದೆ. ಈ ನಿಟ್ಟಿನಲ್ಲಿ ಕೃಷಿಯ ಕುಸಿತಕ್ಕೆ ಮುಖ್ಯ ಕಾರಣವಾದ ಕೈಗಾರೀಕರಣ ಪ್ರಭಾವ ಬೀರಿರುವ ಬಗ್ಗೆ ಸರಿಯಾಗಿ ವಿಶ್ಲೇಷಿಸಲು ಮತ್ತಷ್ಟು ಅಧ್ಯಯನದ ಅವಶ್ಯಕತೆ ಇದೆ.

ಕೈಗಾರೀಕರಣ ಕೃಷಿಯ ಮೇಲೆ ಬೀರಿರುವ ಪರಿಣಾಮ ಮತ್ತು ಪ್ರಭಾವಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮಾಹಿತಿಯನ್ನು ಮಂಗಳೂರಿನ ಗ್ರಾಮೀಣ ಪ್ರದೇಶದಲ್ಲಿ ಸಂಗ್ರಹಿಸಲಾಗಿದೆ. ಕೃಷಿಯ ಅಭಿವೃದ್ಧಿಯಾಗಲು ಮುಖ್ಯ ತಡೆಯನ್ನು ಕೈಗಾರಿಕೆ ಮಾಡುತ್ತಿದೆ. ಈ ಅಧ್ಯಯನದ ಬಗೆಗಿನ ದತ್ತಾಂಶ ವಿಶ್ಲೇಷಣೆಯ ಕೆಲವು ಶೋಧಗಳನ್ನು ಕೆಳಗೆ ತಿಳಸಲಾಗಿದೆ.

- ಅಧ್ಯಯನವನ್ನು ಮುಖ್ಯವಾಗಿ ಮಂಗಳೂರಿನ ಗ್ರಾಮೀಣ ಪ್ರದೇಶದ ರೈತರಿಂದ ದತ್ತಾಂಶವನ್ನು ಸಂಗ್ರಹಿಸಲಾಗಿದೆ.
- ಎಲ್ಲಾ ಪ್ರದೇಶಗಳಲ್ಲಿಯೂ ಕೃಷಿಯು ಕುಂಠಿತಗೊಳ್ಳಲು ಕೃಷಿ ಕಾರ್ಮಿಕರ ಸಮಸ್ಯೆ ಮುಖ್ಯ ಕಾರಣ ಎಂದು ತಿಳಿದಿದೆ.
- ಮಂಗಳೂರಿನಲ್ಲಿ ಕೈಗಾರಿಕೆಗಳು ಕೃಷಿ ಭೂಮಿಯನ್ನು ವಶಪಡಿಸಿದೆ.
- ಕೈಗಾರಿಕೆಗಳು ಹೆಚ್ಚಾಗಿ ಬೆಳೆಯುದರಿಂದ ಕೃಷಿ ಕಾರ್ಮಿಕರು ವಲಸೆ ಹೋಗುತ್ತಿದ್ದಾರೆ.
- ಕೈಗಾರಿಕೆಗಳು ಹೆಚ್ಚಿನ ನೀರನ್ನು ಬಳಸುವುದರಿಂದ ಕೃಷಿಗೆ ನೀರಾವರಿ ಸಮಸ್ಯೆ ಉಂಟಾಗಿದೆ.
- ಕೈಗಾರಿಕೆಗಳು ಹೆಚ್ಚಿನ ತಮ್ಮ ಪರಿಸರದ ಕೃಷಿ ಭೂಮಿ ಫಲವತ್ತತೆ ಕಡಿಮೆ ಮಾಡಿದೆ.
- ಕೈಗಾರೀಕರಣದಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಆಹಾರ ಬೆಳೆಗಳು ವಾಣಿಜ್ಯ ಬೆಳೆಗಳಾಗಿ ಪರಿವರ್ತನೆಗೊಂಡಿದೆ.
- ಹೆಚ್ಚಿನ ಆರ್ಥಿಕ ಲಾಭಕ್ಕಾಗಿ ರೈತರು ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ ಮುಂತಾದವುಗಳನ್ನು ಬೆಳೆಸುತ್ತಿದ್ದಾರೆ.
- ಮಂಗಳೂರಿನ ಪ್ರಸಿದ್ಧವಾದ ಭತ್ತದ ಕೃಷಿಯು ವಿಪರೀತ ಕಡಿಮೆಯಾಗಿದೆ.
- ಕೃಷಿ ಭೂಮಿಯನ್ನು ಕೃಷಿಯೇತರ ಅಂದರೆ ವಸತಿ, ಸಮುಚ್ಚಯ ಕಟ್ಟಡಗಳ ನಿರ್ಮಾಣಕ್ಕೆ ಬಳಸಲಾಗುತ್ತಿದೆ.
- ಕೈಗಾರಿಕೆ ತ್ಯಾಜ್ಯಾಗಳು ತಮ್ಮ ಹತ್ತಿರದ ಪರಿಸರದ ಕೃಷಿ ಭೂಮಿಯ ಮೇಲೆ ಪರಿಣಾಮ ಬೀರಿ ಹಿಡುವಳಿ ಕಡಿಮೆಯಾಗಿದೆ. ಕೃಷಿಗೆ ಸರಕಾರದ ಸಹಾಯ ಸರಿಯಾಗಿ ಸಿಗದ ಕಾರಣ ರೈತರು ತಮ್ಮ ಕೃಷಿ ಭೂಮಿಯನ್ನು ಹಾಳು ಬಿಟ್ಟಿದ್ದಾರೆ.
- ಕೈಗಾರಿಕೆಗಳಿಗೆ ಸರಕಾರ ಹೆಚ್ಚಿನ ಪ್ರೋತ್ಸಾಹ ನೀಡುವುದರಿಂದ ಕೃಷಿಯು ಅವನತಿಯತ್ತ ಸಾಗಿದೆ.

ಕೊನೆ ಮಾತು :

ಭಾರತವು ಒಂದು ಮುಂದುವರೆಯುತ್ತಿರುವ ರಾಷ್ಟ್ರವೆಂದು ಹೇಳುವಾಗ, ಮುಂದುವರಿಕೆಯಲ್ಲಿ ಕೃಷಿಯಲ್ಲಿ ಆದಂತಹ ಪ್ರಗತಿಯನ್ನು ಒಳಗೊಂಡಿರಬೇಕು. ಎಲ್ಲಿಯವರೆಗೆ ಕೃಷಿ ಅಭಿವೃದ್ಧಿ ಆಗುದಿಲ್ಲವೋ, ಅಲ್ಲಿಯವರೆಗೆ ದೇಶವು ಅರ್ಥಿಕ, ಸಾಮಾಜಿಕ ಪ್ರಗತಿ ಕಾಣಲು ಸಾಧ್ಯವಿಲ್ಲ. ಭಾರತವು ಕೃಷಿ ಪ್ರಧಾನ ರಾಷ್ಟ್ರವಾದ್ದರಿಂದ ಕೃಷಿಯ ಅಭಿವೃದ್ಧಿ ಬಹುಮುಖ್ಯ.

ಕೈಗಾರಿಕೆಗಳು ದೇಶದ ಪ್ರಗತಿಗೆ ಅವಶ್ಯಕ ಆದರೆ ಈ ಕೈಗಾರಿಕೆಗಳು ದೇಶದ ಮುಖ್ಯ ವಿಭಾಗವಾದ ಕೃಷಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಾರದು. ದೇಶದ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಅಷ್ಟೇ ಪ್ರಮಾಣದ ಆಹಾರ ಉತ್ಪಾದನೆ ಅತಿ ಮುಖ್ಯ. ಆದರೆ ಕೃಷಿಯಲ್ಲಿ ಭೂಮಿಯನ್ನು ಕೈಗಾರಿಕೆಗಳು ಬಳಸಿಕೊಂಡರೆ ಆಹಾರ ಉತ್ಪಾದನೆ ಮಾಡುವುದು ಬಹಳ ಕಷ್ಟ. ಮಂಗಳೂರಿನ ಗ್ರಾಮೀಣ ಪ್ರದೇಶದಲ್ಲಿ ಪ್ರಸಿದ್ಧವಾಗಿದ್ದ ಭತ್ತದ ಕೃಷಿಯು ಇಂದು ಕಣ್ಮರೆಯಾಗಿದೆ.

ಎಲ್ಲಿ ನೋಡಿದರೂ ಕೈಗಾರಿಕೆಗಳು ಎದ್ದು ಕಾಣುತ್ತದೆ. ನಗರ ಪ್ರದೇಶದಲ್ಲಿ ಮಾತ್ರವಲ್ಲದೇ ಹಳ್ಳಿಯ ಪ್ರದೇಶದಲ್ಲಿಯೂ ಕೈಗಾರಿಕೆಗಳು ಬೆಳೆಯ ತೊಡಗಿದೆ. ಆದರೆ ಈ ಕೈಗಾರಿಕೆಗಳು ಹೆಚ್ಚಾಗಿ ಕೃಷಿ ಭೂಮಿಯನ್ನು ಆಕ್ರಮಿಸಿಕೊಂಡಿದೆ. ಇದರಿಂದಾಗಿ ದೇಶದಲ್ಲಿ ಪ್ರಮುಖವಾಗಿ ಆಹಾರ ಭದ್ರತೆ ಸಮಸ್ಯೆ ಉಂಟಾಗಿದೆ. ಮುಂದೆ ಇದೇ ರೀತಿ ಮುಂದುವರೆದರೆ ಜನರು ಆಹಾರ ಸಮಸ್ಯೆ ಎದುರಿಸಬೇಕಾಗುತ್ತದೆ. ಆದ್ದರಿಂದಲೇ ಕೈಗಾರಿಕೆಗಳ ಅಭಿವೃದ್ಧಿ ಜೊತೆಗೆ ಕೃಷಿಯ ಅಭಿವೃದ್ಧಿ ಅತಿ ಮುಖ್ಯ. ಕೈಗಾರಿಕೆಗಳು ಕೃಷಿಯ ಅಭಿವೃದ್ಧಿಗೆ ಪೂರಕವಾಗಿರಬೇಕು. ಇದಕ್ಕೆ ಸರಕಾರ ಸೂಕ್ತ ಕ್ರಮ ಕೈಗೊಳ್ಳಬೇಕು.

ಸಲಹೆ ಸೂಚನೆಗಳು :

ದೇಶದ ಅಭಿವೃದ್ಧಿಗೆ ಕೈಗಾರಿಕೆಗಳು ಕೃಷಿಯು ಸಮಾನವಾಗಿ ಅಭಿವೃದ್ಧಿಯಾಗಬೇಕು. ಈ ದೃಷ್ಟಿಯಿಂದ ಕೆಲವೊಂದು ಸಲಹೆ ಸೂಚನೆಗಳನ್ನು ಕೆಳಗೆ ಕೊಡಲಾಗಿದೆ.

- ಕೃಷಿ ಭೂಮಿಯನ್ನು ಕೃಷಿಯ ಉದ್ದೇಶಕ್ಕೆ ಮಾತ್ರ ಬಳಸಬೇಕು
- ಯುವ ಜನಾಂಗಕ್ಕೆ ಕೃಷಿಯ ಮಹತ್ವವನ್ನು ಸರಿಯಾಗಿ ತಿಳಸಬೇಕು.
- ಕೈಗಾರಿಕೆ ತ್ಯಾಜ್ಯಗಳನ್ನು ಸೂಕ್ತ ರೀತಿಯಾಗಿ ವಿಲೆವಾರಿ ಮಾಡಬೇಕು.
- SEZ (ವಿಶೇಷ ಆರ್ಥಿಕ ವಲಯ) ಮುಂತಾದ ದೊಡ್ಡ ಕೈಗಾರಿಕೆ ವಲಯವನ್ನು ನಿರ್ಮಿಸಲು ಕೃಷಿ ಭೂಮಿ ಬಳಸಬಾರದು.
- ಕೃಷಿ ಕಾರ್ಮಿಕರ ವಲಸೆಯನ್ನು ತಡೆಯಲು ಚಿಕ್ಕ ಚಿಕ್ಕ ಉದ್ದಿಮೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಬೆಳೆಸಬೇಕು. ಕೃಷಿ ಕಾರ್ಮಿಕರಿಗೆ ಕೃಷಿಯ ಜೊತೆಗೆ ವರ್ಷವಿಡೀ ಕೆಲಸ ಸಿಗುವ ಹಾಗೆ ಮಾಡುವಲ್ಲಿ ಇದು ಸಹಾಯ ಮಾಡುತ್ತದೆ.
- ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಕೈಗಾರಿಕೆ ಸ್ಥಾಪನೆ ಮಾಡಬಾರದು. ಸ್ಥಾಪನೆ ಮಾಡಿದರೂ ಕೃಷಿಯೇತರ ಭೂಮಿಯಲ್ಲಿ ಮಾಡಬೇಕು.
- ರೈತರಿಗೆ ಹೆಚ್ಚಿನ ಆಹಾರ ಬೆಳೆಗಳನ್ನು ಉತ್ಪಾದನೆ ಮಾಡಲು ಅವಕಾಶ ಮಾಡಿ ಕೊಡಬೇಕು.
- ಗ್ರಾಮೀಣ ಪ್ರದೇಶದ ರೈತರಿಗೆ ಕೃಷಿಯ ಮಹತ್ವ, ಆಹಾರ ಸಮಸ್ಯೆ ಮುಂತಾದುವುಗಳನ್ನು ಸೂಕ್ತವಾಗಿ ತಿಳಸಬೇಕು.
- ಸರಕಾರವು ರೈತರಿಗೆ ಕಡಿಮೆ ಬಡ್ಡಿ ಸಾಲ ನೀಡಿ ಬಂಡವಾಳದ ಕೊರತೆ ನೀಗಿಸಬೇಕು.
- ಸರಕಾರವು ರೈತರಿಗೆ ಆಹಾರ ಬೆಳೆಗಳಗೆ ಹೆಚ್ಚಿನ ಸಬ್ಸಿಡಿ ನೀಡಬೇಕು.
- ಸರಕಾರವು ಗ್ರಾಮೀಣ ಪ್ರದೇಶದ ಕೃಷಿಕರಿಗೆ ಹೆಚ್ಚಿನ ಶಿಕ್ಷಣ ಸೌಲಭ್ಯ ಸವಲತ್ತು ನೀಡಬೇಕು.
- ಸರಕಾರವು ವಿಶೇಷ ಅರ್ಥಿಕ ವಲಯ (SEZ) ನಿರ್ಮಿಸುವಾಗ ಕೃಷಿ ಭೂಮಿಯನ್ನು ವಶಪಡಿಸಬಾರದು.
- ಸರಕಾರವು ಗ್ರಾಮೀಣ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಗೌರವಧನ ನೀಡಿ ವಲಸೆ ತಡೆಯಬೇಕು.
- ಕೃಷಿಕರಿಗೆ ಉತ್ತಮ ಹಿಡುವಳಿಯ ಬೀಜ, ರಾಸಾಯನಿಕ ಗೊಬ್ಬರ ನೀಡಿ ಕೃಷಿಯು ಲಾಭದಾಯಕ ಮಾಡಬೇಕು.
- ಕೈಗಾರಿಕೆಗಳು ಕೃಷಿಗೆ ಪೂರಕವಾಗಿರಬೇಕು ಅಂದರೆ ಕೃಷಿಕರು ಬೆಳೆದ ಬೆಳೆಗಳನ್ನು ಬಳಸಿ ಉತ್ಪಾದನೆ ಮಾಡಬೇಕು.

- ಸರಕಾರವು ಕೃಷಿಕರಿಗೆ ಉತ್ತಮ ಮಾರುಕಟ್ಟೆ, ಬೆಂಬಲ ಬೆಲೆ ಮುಂತಾದ ಕೃಷಿ ಸಹಾಯ ಮಾಡಬೇಕು.

ಅಭಿವೃದ್ಧಿ ಎಂದರೆ ದೇಶದ ಸಾಮಾಜಿಕ ಅರ್ಥಿಕ ಪ್ರಗತಿ ಕಾಣಬೇಕು ಆದ್ದರಿಂದ ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ ಕೃಷಿಯನ್ನು ಅವಗಣನೆ ಮಾಡುವುದು ಸೂಕ್ತವಲ್ಲ. ಆಹಾರ ಭದ್ರತೆ ಸಮಸ್ಯೆ ನಿವಾರಿಸಲು ಕೃಷಿಕರು ಹೆಚ್ಚು ಹೆಚ್ಚು ಆಹಾರ ಬೆಳೆಗಳನ್ನು ಬೆಳಸಬೇಕು ಆದರಿಂದ ಕೈಗಾರಿಕೆಗಳು ಕೃಷಿಕ ಪೂರಕ ವಾತವಾರಣ ಉಂಟುಮಾಡಬೇಕು ಕೈಗಾರಿಕೆ ಮತ್ತು ಕೃಷಿಯು ಪೂರಕವಾಗಿ ಅಭಿವೃದ್ಧಿ ಹೊಂದಿದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ. ಆದರಿಂದ ಕೈಗಾರಿಕೆಗಳು ದೇಶದ ಕೃಷಿಯ ಮೇಲೆ ಪ್ರಭಾವ ಬೀರಿದೆ, ಕೃಷಿ ಮತ್ತು ಕೈಗಾರಿಕೆಗಳು ಪೂರಕವಾಗಿರಲು ಈ ಕ್ರಿಯಾತ್ಮಕ ಸಂಶೋಧನೆ ಉಪಯುಕ್ತವಾದದು ಎಂಬುದನ್ನು ಈ ಅಧ್ಯಾಯನ ಶ್ರುತಪಡಿಸಿದೆ.

ಅನುಬಂಧ -೧

ಪ್ರಶ್ನಾವಳಿ

"ಕೃಷಿಯ ಮೇಲೆ ಕೈಗಾರಿಕೀಕರಣದ ಪ್ರಭಾವ ಮಂಗಳೂರು ತಾಲೂಕಿನಲ್ಲಿ ಒಂದು ಅಧ್ಯಯನ"

ಮನವಿ

ನಾನು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಸಂಶೋಧನೆಯ ಕೆಲಸವನ್ನು ನಿರ್ವಹಿಸುತ್ತಿದ್ದೇನೆ. ಇದರ ಆಂಶಿಕ ಅವಶ್ಯಕತೆಗಾಗಿ ""ಕೃಷಿಯ ಮೇಲೆ ಕೈಗಾರಿಕೀಕರಣದ ಪ್ರಭಾವ, ಮಂಗಳೂರು ತಾಲೂಕಿನಲ್ಲಿ ಒಂದು ಅಧ್ಯಯನ" ಎಂಬ ವಿಷಯದ ಕುರಿತಾದ ಅಧ್ಯಯನ ಕೈಗೊಂಡಿದ್ದೇನೆ. ಈ ಅಧ್ಯಯನವನ್ನು ಪೂರ್ಣಗೊಳಸಲು ನಿಮ್ಮ ಅಭಿಪ್ರಾಯ, ಅನಿಸಿಕೆಗಳು ಬಹಳ ಪ್ರಾಧಾನ್ಯತೆಯನ್ನು ವಹಿಸುತ್ತವೆ. ನಿಮ್ಮ ಅಭಿಪ್ರಾಯ ಅನಿಸಿಕೆಗಳು ಕೇವಲ ಅಧ್ಯಯನಕ್ಕಾಗಿ ಮಾತ್ರ ಬಳಸಿಕೊಳ್ಳಲಾಗಿದೆಯೆಂದು ಈ ಮೂಲಕ ಸ್ಪಷ್ಟಪಡಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಇತೀ ತಮ್ಮ ವಿಶ್ವಾಸಿ,

---

1) ಮಾಹಿತಿದಾರರ ಹೆಸರು ಮತ್ತು ವಿಳಾಸ :

2) ಮಾಹಿತಿದಾರರ ಕೃಷಿ ಭೂಮಿಯ ಒಡೆತನ ಹೊಂದದಿದ್ದಲ್ಲಿ ಯಜಮಾನೊಂದಿಗೆ ಸಂಬಂಧ:

3)ಲಿಂಗ : ಪುರುಷರು/ ಮಹಿಳೆಯರು

4)ವಯೋಮಾನ : 18 -28 ☐ 29-38 ☐ 39-48 ☐ 49-58 ☐ 50 ಕ್ಕಿಂತ ಹೆಚ್ಚು ☐

5) ವೈವಾಹಿಕ ಸ್ಥಾನಮಾನ : ☐ ಮದುವೆಯಾಗಿದೆ. ☐ ಮದುವೆಯಾಗಿಲ್ಲ.

6) ಶಿಕ್ಷಣ ಮಟ್ಟ :

☐ ಅಶಿಕ್ಷಿತರು — ಪದವಿಪೂರ್ವ ☐
☐ ಪ್ರಾಥಮಿಕ ವಿದ್ಯಾಭ್ಯಾಸ — ಪದವಿ ☐
☐ ಪ್ರೌಢಶಿಕ್ಷಣ — ಸ್ನಾತಕೋತ್ತರ ☐

7) ಮತ ಮತ್ತುಜಾತಿ :

ಎ) ಮತ — ಬಿ) ಜಾತಿ

☐ ಹಿಂದೂ — ಸಾಮನ್ಯ ವರ್ಗ ☐
☐ ಮುಸ್ಲಿಂ — ಪರಿಶಿಷ್ಟ ಜಾತಿ ☐
☐ ಕ್ರಿಶ್ಚಿಯನ್ — ಪರಿಶಿಷ್ಟ ಪಂಗಡ ☐
☐ ಇತರರು — ಹಿಂದುಳಿದ ವರ್ಗ ☐

8) ಕೌಟುಂಬಿಕ ಹಿನ್ನಲೆ

☐ ಅವಿಭಕ್ತ ಕುಟುಂಬ — ವಿಭಕ್ತ ಕುಟುಂಬ ☐

9) ಕುಟುಂಬದ ವಾರ್ಷಿಕ ಆದಾಯ.

☐ 6000-10000 — 16,000-20000 ☐
☐ 11,000-15000 — 20,000ಕ್ಕಿಂತ ಹೆಚ್ಚು ☐

ಭೂ ಹಿಡುವಳಿ ಮತ್ತು ಬೆಳೆ

1) ಮಾಹಿತಿದಾರನ ಭೂ ಹಿಡುವಳಿಯ ಗಾತ್ರ

☐ ಸಣ್ಣ ಹಿಡುವಳಿದಾರ (1ಎಕ್ರೆಗಳಿಗಿಂತ ಕಡಿಮೆ) ☐ ದೊಡ್ಡ ಹಿಡುವಳಿದಾರ (2ಎಕ್ರೆಗಳಿಗಿಂತ ಜಾಸ್ತಿ)

☐ ಮಧ್ಯಮ ಹಿಡುವಳಿದಾರ (1 ರಿಂದ 2 ಎಕ್ರೆ)

2) ಹಿಡುವಳಿಯ ಮೂಲ :

☐ ಪಿತ್ರಾಜಿತ ☐ ಭೂ ಮಸೂದೆಯಿಂದ ದೊರೆತ್ತದ್ದು

☐ ಕ್ರಯಕ್ಕೆ ಪಡಕೊಂಡದ್ದು

3, ಎ). ಯಾವುದೇ ಕೃಷಿ ಭೂಮಿಯನ್ನು ಮಾರಿದ್ದೀರಾ?

☐ ಹೌದು ☐ ಇಲ್ಲ

ಬಿ) ಹೌದು ಆದರೆ ಯಾವುದು ಉದ್ದೇಶಕ್ಕಾಗಿ ಮಾರಿದ್ದೀರಾ?

☐ ಕೈಗಾರಿಕೆ ☐ ಕೃಷಿ

☐ ಕೃಷಿಯೇತರ ☐ ಇತರ

4) ಬೆಳೆಯ ವಿಧಾನ

☐ ಆಹಾರ ಬೆಳೆ ☐ ವಾಣಿಜ್ಯ ಬೆಳೆ

5)ಯಾವ ಬೆಳೆ ವಿಧಾನಕ್ಕೆ ಹೆಚ್ಚು ಮಹತ್ವ ನೀಡುತ್ತೀರಿ?

☐ ಆಹಾರ ಬೆಳೆ ☐ ವಾಣಿಜ್ಯ ಬೆಳೆ

ಏಕೆಂದರೆ : --------

6) ನೀವು ಯಾವ ರೀತಿಯ ಬೇಸಾಯ ಕ್ರಮ ಅನುಸರಿಸುತ್ತೀರಿ?

☐ ಹಳೆಯ ಪದ್ಧತಿ ☐ ಹೊಸ ವೈಜ್ಞಾನಿಕ ಪದ್ಧತಿ

7) ಕಳೆದ 10 ವರ್ಷಗಳಲ್ಲಿ ಕೃಷಿ ಭೂಮಿ ಕಡಿಮೆಯಾಗಿದೆಯೇ? ಏಕೆ

☐ ಹೌದು ☐ ಇಲ್ಲ

ಕಾರಣ :

☐ ಕೈಗಾರಿಕೆ ☐ ನಗರೀಕರಣ
☐ ಜನಸಂಖ್ಯೆ ಹೆಚ್ಚಳ ☐ ನೀರಾವರಿ ಸಮಸ್ಯೆ
☐ ಸರಕಾರದ ನಿರ್ಲಕ್ಷ

8) ಕೈಗಾರಿಕ ತ್ಯಾಜ್ಯಗಳು ನಿಮ್ಮ ಕೃಷಿಗೆ ಹಾನಿ ಮಾಡಿದೆಯಾ?

☐ ಹೌದು ☐ ಇಲ್ಲ

9) ಕೃಷಿ ಕಾರ್ಮಿಕರ ಕೊರತೆ ಇದೆಯಾ?

☐ ಹೌದು ☐ ಇಲ್ಲ

10) ರೈತನು ಎದುರಿಸುತ್ತಿರುವ ಸಮಸ್ಯೆಗಳು

☐ ಭೂ ಹಿಡುವಳಿ ಗಾತ್ರ ☐ ಹಣದ ವ್ಯವಸ್ಥೆ
☐ ಕೈಗಾರಿಕೆಗಳು ☐ ಕಾರ್ಮಿಕರ ಕೊರತೆ
☐ ತಂತ್ರಜ್ಞಾನದ ಕೊರತೆ ☐ ಮಾರುಕಟ್ಟೆ ಮತ್ತು ಸಾರಿಗೆ ಸಮಸ್ಯೆ

11) 1980 ರಲ್ಲಿ ಇದ್ದ ಕೃಷಿ ಭೂಮಿ : ------------ (ಎಕ್ರೆಗಳಲ್ಲಿ)

1990 ರಲ್ಲಿ ಇದ್ದ ಕೃಷಿ ಭೂಮಿ : ------------ (ಎಕ್ರೆಗಳಲ್ಲಿ)

2000 ರಲ್ಲಿ ಇದ್ದ ಕೃಷಿ ಭೂಮಿ : ------------ (ಎಕ್ರೆಗಳಲ್ಲಿ)

2013 ರಲ್ಲಿ ಇದ್ದ ಕೃಷಿ ಭೂಮಿ : ------------ (ಎಕ್ರೆಗಳಲ್ಲಿ)

12)ಆಹಾರ ಬೆಳೆ ಸಮಸ್ಯೆಯ ಬಗ್ಗೆ ನಿಮಗೆ ತಿಳಿದಿದೆಯಾ?

☐ ಹೌದು ☐ ಇಲ್ಲ

ಹೌದು ಆದರೆ ಕಾರಣ ______________

13) ಕೃಷಿ ಕೆಲಸ ನಮ್ಮ ಬದುಕಿನ ಸಂಸ್ಕೃತಿಯ ಒಂದು ಭಾಗ, ಈ ವಿಚಾರವನ್ನು ನೀವು ಒಪ್ಪಿಕೊಳ್ಳುತ್ತೀರ?

☐ ಹೌದು ☐ ಇಲ್ಲ

14)ನಿಮ್ಮ ವೃತ್ತಿಯ ಉದ್ದೇಶ

☐ ಆಸಕ್ತಿ ☐ ಆರ್ಥಿಕಒತ್ತಡ

☐ ಇತರ

15) ನಿಮ್ಮ ವೃತ್ತಿಯಲ್ಲಿ ಪ್ರಗತಿಗೆ ಪೂರಕ ವಾತವಾರಣವಿದೆಯೇ?

☐ ಹೌದು ☐ ಇಲ್ಲ

16) ನಿಮ್ಮ ಸೇವಾನುಭವ

☐ 1–5 ವರ್ಷ ☐ 6–10 ವರ್ಷ

☐ 10 ರಿಂದ ಮೇಲ್ಪಟ್ಟು .

17) ವಿಶೇಷ ಅರ್ಥಿಕ ವಲಯ(SEZ)ದಿಂದ ನಿಮ್ಮ ಕೃಷಿ ಭೂಮಿಗೆ ಹಾನಿ ಇದೆಯೇ?

☐ ಹೌದು ☐ ಇಲ್ಲ

18) ಕೈಗಾರಿಕೆಗಳಿಂದಾಗಿ ಆಹಾರೋತ್ಪನಗಳ ಉತ್ಪಾದಕತೆಯಲ್ಲಿ ಕಡಿಮೆಯಾಗಿದೆಯೇ?

☐ ಹೌದು ☐ ಇಲ್ಲ

19) ನಿಮ್ಮ ಪ್ರಕಾರ ಈಗಿನ ಯುವ ಪಿಳಗೆಗೆ ಕೃಷಿಯ ಮೇಲೆ ಆಸಕ್ತಿ ಇದೆ?

☐ ಹೌದು ☐ ಇಲ್ಲ

20) ಈಗಿನ ಪರಿಸ್ಥಿತಿಯಲ್ಲಿ ಯಾವ ಕೃಷಿ ಲಾಭದಾಯಕವಾಗಿದೆ?

☐ ಆಹಾರ ಬೆಳೆಗಳು ☐ ವಾಣಿಜ್ಯ ಬೆಳೆಗಳು

21) ಕೈಗಾರಿಕೆಯಲ್ಲಿ ಕೃಷಿಗೆ ಪೂರಕವಾಗಿದೆಯೇ?

☐ ಹೌದು ☐ ಇಲ್ಲ

22) ಕೈಗಾರೀಕರಣದಿಂದ ಕೃಷಿಗೆ ನೀರಿನ ಸಮಸ್ಯೆ ಉಂಟಾಗಿದೆಯೇ?

☐ ಹೌದು ☐ ಇಲ್ಲ

23) ರಾಸಾಯನಿಕಗೊಬ್ಬರ ಬಳಸುವುದರಿಂದ ಹೆಚ್ಚಿನ ಲಾಭದಾಯಕ ಹಿಡುವಳ ಪಡೆಯಬಹುದು?

☐ ಹೌದು ☐ ಇಲ್ಲ

24) ನಿಮ್ಮ ಪ್ರಕಾರ ಆಹಾರ ಬೆಳೆಗಳ ಉತ್ಪಾದನೆ ಕಡಿಮೆಯಾದರಿಂದ ತೊಂದರೆ ಇದೆಯೇ?

☐ ಹೌದು ☐ ಇಲ್ಲ

25) ನಿಮ್ಮ ಪ್ರಕಾರ ಕೈಗಾರೀಕರಣದಿಂದಾಗಿ ಕೃಷಿಗೆ ಅಪಾಯವಿದೆಯೇ?

☐ ಹೌದು ☐ ಇಲ್ಲ

26) ಕೃಷಿ ಕಾರ್ಮಿಕರು ನಗರಗಳಗೆ ವಲಸೆ ಹೋಗಲು ಕಾರಣ

☐ ಶಿಕ್ಷಣ ☐ ಉದ್ಯೋಗ

☐ ಸಾರಿಗೆ ಸಂಪರ್ಕ ☐ ಇತರ

27) ಕೈಗಾರಿಕೀಕರಣದಿಂದ ಕೃಷಿಯ ಮೇಲೆ ಆಗುವ ಪರಿಣಾಮ

☐ ಕೃಷಿ ಭೂಮಿ ಕಡಿಮೆ ಆಗುವುದು ☐ ನೀರಾವರಿ ಕೊರತೆ

☐ ಕೃಷಿ ಕಾರ್ಮಿಕ ರ ಕೊರತೆ ☐ ಆಹಾರೋತ್ಪನಗಳ ಕೊರತೆ

<u>ಸಲಹೆ ಮತ್ತು ಪರಿಹಾರಗಳು:</u>

ಪರಮಾರ್ಶ ಗ್ರಂಥಗಳು:

೧. ಎಂ. ಚಂದ್ರ ಪೂಜಾರಿ ಸಂಶೋಧನೆ ಏನು?ಏಕೆ? ಹೇಗೆ? ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ, ೨೦೦೯.

೨. ಗುಪ್ತ ಎಸ್. ಬಿ. (೨೦೦೨),ಸ್ಟಾಟ್ಟಿಕಲ್ ಮೆತಡ್ಸ್, ಸುಲ್ತಾನ್ ಚಾದ್, ಆ್ಯಂಡ್ ಸನ್ಸ್ , ಎಡುಕೇಶನಲ್ ಪಬ್ಲಿಲಿಶರ್ಸ್ ನ್ಯೂ ದೆಲ್ಲಿ.

೩. ಅಮಿತಾಬ್ ಕುಂದ್, ಶಾಲಿನಿ ಗುಪ್ತ (೧೯೯೬), ಮೈಗ್ರೇಸನ್, ಅರ್ಬನೈಶೇಷನ್ ಆ್ಯಂಡ್ ರೀಜನಲ್ ಇನ್ಇಕ್ವಲಿಟಿ, ಎಕಾನಮಿಕ್ ಆ್ಯಂಡ್ ಪೋಲಿಟಿಕಲ್ ವೀಕ್ಲಿ, ಆವೃತ್ತಿ ೩೧, ಪುಟ ಸಂಖ್ಯೆ ೫೨.

೪. ಆರ್ ಬಾಲಸುಬ್ರಹ್ಮಣ್ಯಮ್, ಸ್ವೆಂಗ್-ಚೂರ್ಲ್-ಚೂಯಿ(೨೦೧೦) ಅರ್ಬನೈಸೇಶನ್, ಪಾಪ್ಯೂಲೇಶನ್ ಪ್ರೇಶರ್ ಆ್ಯಂಡ್ ಎಗ್ರಿಕಲ್ಚರಲ್ ಇಂಟರ್‌ಸಿಪೀಕೇಶನ್,ಎವಿಡೆನ್ಸ್ ಪ್ರಂಮ್, ತಮಿಳುನಾಡು ಇನ್ ಇಂಡಿಯಾ". ಜರ್ನಲ್ ಆಫ್ ರೂರಲ್ ಡೆವಲಂಪಮೆಂಟ್, ಪುಟ ಸಂಖ್ಯೆ ೮೭ ರಿಂದ ೧೦೮.

೫. ಡಾ. ವೆಂಕಟ್ ರೆಡ್ಡಿ (೧೯೯೮), ರೂರಲ್ ಡೆವಲಂಪಮೆಂಟ್ ಇನ್ ಇಂಡಿಯಾ, ಹಿಮಾಲಯಾ ಪಬ್ಲಿಷಿಂಗ್ ಹೌಸ್,ಬಾಂಬೆ.

೬. ಆರ್ ಜಿ ದೇಸಾಯಿ (೧೯೯೮), ಎಗ್ರಿಕಲ್ಚರಲ್ ಎಕಾನಮಿಕ್ಸ್: ಮೊಡಾಲ್ಸ್, ಪ್ರಾಬಲ್‌ಬ್ಸ್ ಆ್ಯಂಡ್ ಪಾಲಿಸಿ ಇಶ್ಯೂಸ್, ಹಿಮಾಲಯಾ ಪಬ್ಲಿಷಿಂಗ್ ಹೌಸ್,ಬಾಂಬೆ.

೭. ಎಮ್ ವಿಘ್ನೇಶ್ವರ (೧೯೮೬), ವೀಕ್ಲಿ ವಿಲೇಜ್ ಮಾರ್ಕ್‌ಟ್ಸ್ ಆ್ಯಂಡ್ ರೂರಲ್ ಡೆವಲಂಪಮೆಂಟ್: ಎ ಕೇಸ್ ಸ್ಟಡಿ ಆಫ್ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್.

೮.ಮುಂಡಿನಮನೆ .ಪಿ.ಸ್(೧೯೮೪) ಕ್ರಾಪಿಂಗ್ ಫ್ಯಾಟನ್ ಇನ್ ಕರ್ನಾಟಕಸ್ ಅಗ್ರಿಕಲ್ಚರ್ : ಸಮ್ ರೀಸೆಂಟ್ ಟ್ರೆಂಡ್ಸ್, ಸದರ್ನ್ ಎಕಾನೋಮಿಸ್ಟ್ .

೯. ಶ್ರೀಪತಿ ಕಲ್ಲೂರಾಯ, ಪಿ ಜಯವಂತ ನಾಯಕ್,ಶಮೀನಾ ಮೆಹತಾಬ್ (೨೦೦೩), ಎಕಾನಾಮಿಕ್ ಡೆವೆಲೋಪ್‌ಮೆಂಟ್.

೧೦ ಅರುಣ್ ಕುಮಾರ್ ವಿ (೨೦೦೯), ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು, ಪ್ರಿಯದರ್ಶಿನಿ ಪಬ್ಲಿಕೇಶನ್ಸ್ ಬೆಂಗಳೂರು.

೧೧ ಠಾಕುರ್ ಕೆ.ಎಸ್ (೨೦೦೮), ಎಕಾನಾಮಿಕ್ ಡೆವೆಲೋಪ್‌ಮೆಂಟ್ ಇನ್ ಇಂಡಿಯಾ, ಬುಕ್ ಎನ್‌ಕ್ಲೇವ್ ಪಬ್ಲಿಷರ್ಸ್ ,ಜಯಪುರ್.

೧೨ ಸತ್ಯ ಸುಂದರಂ (೧೯೯೭), ಅರ್‌ಬನ್ ಡೆವೆಲೋಪ್‌ಮೆಂಟ್ ಸಮ್ ಇಶ್ಯುಸ್, ಸದರ್ನ್ ಎಕಾನೋಮಿಸ್ಟ್ .

೧೩. ಶಾ ಎಸ್. ಎಂ (೧೯೮೫), ಗ್ರೋತ್ ಸೆಂಟರ್ಸ್ ಫೋರ್ ರುರಲ್ ಎಂಡ್ ಅರ್‌ಬನ್ ಡೆವೆಲೋಪ್‌ಮೆಂಟ್, ಅಭಿನವ ಪಬ್ಲಿಕೇಶನ್ಸ್.

೧೪ ಸುಶೀಲ ಕೌಲ್ ಎಂಡ್ ಘಾಸಿ ರಾಮ್ (೨೦೧೦), ಇಂಪಾಕ್ಟ್ ಆಫ್ ಅರ್‌ಬನೈಸೇಶನ್ ಆನ್ ಎಗರಿಕಲ್‌ಚರ್ ಪ್ರೊಡಕ್ಷನ್ ಆಫ್ ಇಂಡಿಯಾ.

೧೫. ಶಾಂತ ಎನ್ ನಾಯಟ್ (೧೯೮೧) ಇಂಪಾಕ್ಟ್ ಆಫ್ ಅರ್‌ಬನೈಸೇಶನ್ ಆನ್ ಇಂಡಿಯಾಸ್ ಎಕಾನಾಮಿಕ್ ಡೆವೆಲೋಪ್‌ಮೆಂಟ್. ಸದರ್ನ್ ಎಕಾನೋಮಿಸ್ಟ್ .

೧೬ ರಾಮ್ ಲಾಲ್ ಪಾರಿಕ್ (೧೯೯೭), ಎಗರಿಕಲ್‌ಚರ್ ಫೋರ್ ರುರಲ್ ಡೆವೆಲೋಪ್‌ಮೆಂಟ್, ಯುನಿರ್ವಸಿಟಿ ನ್ಯೂಸ್.

೧೭ ರಾಧಾ ರಮಣ್ ಸಿಂಗ್ (೧೯೮೫) ಅರ್‌ಬನ್ ಡೆವೆಲೋಪ್‌ಮೆಂಟ್ ಇನ್ ಇಂಡಿಯಾ, ನೀಡ್ ಫೋರ್ ಇಂಟೆಗ್ರೇಟೆಡ್ ರುರಲ್ ಅರ್‌ಬನ್ ಡೆವೆಲೋಪ್‌ಮೆಂಟ್.

೧೮ ಮನೋಜ್ ಶರ್ಮಾ(೨೦೦೪), ರಿಸರ್ಚ್ ಮೆತಡೋಲಜೀ, ಅನ್‌ಮೋಲ್ ಪಬ್ಲಿಕೇಶನ್ಸ್, ನ್ಯೂ ದೆಲ್ಲಿ.

೧೯. ಮಹಾದೇವಿ ಎನ್ ಆರ್ (೨೦೦೮) ಅರ್‌ಬನೈಸೇಶನ್ ಎಂಡ್ ಮೈಗ್ರೇಶನ್ ಪೇಟರ್ನ್ ಇನ್ ನವೀ ಮುಂಬೈ ಸದರ್ನ್ ಎಕಾನೋಮಿಸ್ಟ್ .


೨೦. ಕುಮಾರ್ ಪಿ ಆಂಡ್ ವಿ. ಸಿ ಮಾತೂರ್ (೧೯೯೭) ಸ್ಟ್ರಕ್‌ಚರಲ್ ಚೇಂಜಸ್ ಇನ್ ದಿ ಡಿಮಾಂಡ್ ಫಾರ್ ಫುಡ್ ಇನ್ ಇಂಡಿಯಾ, " ಇಂಡಿಯನ್ ಜರ್ನಲ್ ಆಫ್ ಎಗ್ರಿಕಲ್‌ಚರಲ್ ಎಕೊನೋಮಿಕ್ಸ್".

ದಿನ ಪತ್ರಿಕೆಗಳು

- ದಿ ಹಿಂದು ದಿನ ಪತ್ರಿಕೆಯ ಸಂಪುಟಗಳು.
- ಉದಯವಾಣಿ ದಿನ ಪತ್ರಿಕೆಯ ಸಂಪುಟಗಳು.

ಅನುಭಂಧ-೨

ಕರ್ನಾಟಕದ ನಕ್ಷೆ



ದಕ್ಷಿಣಕನ್ನಡ ಜಿಲ್ಲೆಯ ನಕ್ಷೆ

